ಸಂಪಾದಕರು :
ಎಂ.ಎಸ್. ವಿಕಾಸ್

ಶನಿವಾರ, ಜನವರಿ 06, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 234 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ (ರಿ), ದಾವಣಗೆರೆ.
ಸಿದ್ಧಲಿಂಗೇಶ್ವರ ನಗರ, ದಾವಣಗೆರೆ – 577002
ಸಂಸ್ಥಾಪಕರ 60 ವರ್ಷಗಳ ಶಿಕ್ಷಣಸೇವೆಯ ಗೌರವಾರ್ಥ
ರಾಜ್ಯದ ಪ್ರತಿಷ್ಠಿತ ಕಾಲೇಜಿನಲ್ಲಿ ಕೇವಲ 1₹ ಶುಲ್ಕದಲ್ಲಿ ಪಿಯುಸಿ ಸೈನ್ಸ್ ಶಿಕ್ಷಣ ಪಡೆಯಲು ಸುವರ್ಣಾವಕಾಶ
PUC Science, NEET/JEE/CET Coaching ಸಹಿತ 1₹ (ಒಂದು ರೂ. ಮಾತ್ರ)
ಗಮನಿಸಿರಿ: 1. ಕಾಲೇಜು ನಡೆಸುವ ಸ್ಕಾಲರ್‌ಶಿಪ್ ಪರೀಕ್ಷೆ ಬರೆದಿರಬೇಕು. 2. ಪೋಷಕರ ವಾರ್ಷಿಕ ಆದಾಯ 8 ಲಕ್ಷದ ಒಳಗಿರಬೇಕು. 3. ಆಯ್ಕೆಯಾದ 60 ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ.
ವಿದ್ಯಾರ್ಥಿಗಳು ತಮ್ಮ ಹೆಸರನ್ನು ಈ ಮೊಬೈಲ್ ಸಂಖ್ಯೆಗೆ ವಾಟ್ಸಪ್ ಮೂಲಕ ಕಳುಹಿಸಿ. Ph: 8073301604, 6361616780
60 MCQ's
Science -30, Maths -30
From SSLC Text Book
Every Sunday between 9 to 12
SST: Siddaganga Scholarship Test
ಸ್ಕಾಲರ್‌ಶಿಪ್ ಪರೀಕ್ಷೆಗೆ ನೋಂದಾಯಿಸಲು QR Code

## ಕೋವಿಡ್ ನಿಗಾ, ವಿಶೇಷ ವಾರ್ಡ್‌ಗೆ ಸೂಚನೆ

### ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಗುಂಜನ್ ಕೃಷ್ಣ



ದಾವಣಗೆರೆ, ಜ. 5 – ಕೊರೊನಾದ ಜೆಎನ್1 ತಳಿ ಹಿನ್ನೆಲೆಯಲ್ಲಿ ಎಲ್ಲಾ ಆಸ್ಪತ್ರೆಗಳಲ್ಲಿ ಕೋವಿಡ್ ಹಾಸಿಗೆ ಮತ್ತು ಆಕ್ಸಿಜನ್ ಘಟಕಗಳನ್ನು ಸಿದ್ದಪಡಿಸಿಟ್ಟುಕೊಳ್ಳುವಂತೆ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಗುಂಜನ್ ಕೃಷ್ಣ ಸೂಚನೆ ನೀಡಿದರು.

ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು ಈ ಸೂಚನೆ ನೀಡಿದರು.

ದಾವಣಗೆರೆ ಜಿಲ್ಲೆಯಲ್ಲಿ ಕಳೆದ ಒಂದು ವಾರದಿಂದ 1019 ಜನರಿಗೆ ಕೋವಿಡ್ ಪರೀಕ್ಷೆ ನಡೆಸಿದ್ದು ಅದರಲ್ಲಿ 22 ಜನರಿಗೆ ಕೋವಿಡ್ ಕಂಡು ಬಂದಿದ್ದು ಜೆಎನ್1 ಯಾವುದೇ ತಳಿ ಇರುವುದಿಲ್ಲ. ಇಬ್ಬರು ಮಾತ್ರ ಇತರೆ ಕಾಯಿಲೆಯಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇನ್ನುಳಿದಂತೆ ಎಲ್ಲರೂ ಮನೆಯಲ್ಲಿಯೇ ಚಿಕಿತ್ಸೆ ಪಡೆಯುತ್ತಿದ್ದಾರೆ. ಯಾರಿಗೂ ತೀವ್ರತರವಾದ ಲಕ್ಷಣಗಳಿರುವುದಿಲ್ಲ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಷಣ್ಮುಖಪ್ಪ ಮಾಹಿತಿ ನೀಡಿದರು.

ಈ ವೇಳೆ ಚಿಗಟೇರಿ ಆಸ್ಪತ್ರೆಯಲ್ಲಿಯೂ ಪ್ರತ್ಯೇಕ ಕೋವಿಡ್ ವಾರ್ಡ್ ಕಾಯ್ದಿರಿಸುವಂತೆ ಮತ್ತು ಪಿಎಂ ಕೇರ್ಸ್‌ನಡಿ ಪೂರೈಸಲಾದ ವೆಂಟಿಲೇಟರ್‌ಗಳನ್ನು ಸಿದ್ದಪಡಿಸಿಟ್ಟುಕೊಳ್ಳುವಂತೆ ಗುಂಜನ್ ಕೃಷ್ಣ ಸೂಚನೆ ನೀಡಿದರು.

ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇದ್ದ ವೈದ್ಯರ ಹುದ್ದೆಗಳನ್ನು ನೇರ ಸಂದರ್ಶನದಲ್ಲಿ ಭರ್ತಿ ಮಾಡಲಾಗಿದೆ. ತಜ್ಞ ವೈದ್ಯರು ನೇರ ಸಂದರ್ಶನಕ್ಕೆ ಹಾಜರಾಗದ ಕಾರಣ ಈ ಹುದ್ದೆಗಳು ಖಾಲಿ ಇವೆ. ತಾಯಿ ಮತ್ತು ಮಗುವಿನ ಮರಣ ಪ್ರಮಾಣ ಕಡಿಮೆ ಮಾಡಲು ಹೆರಿಗೆ ಆಸ್ಪತ್ರೆಯ ನಿಗಾ ಘಟಕಗಳಲ್ಲಿ ಕರ್ತವ್ಯ ನಿರ್ವಹಿಸಲು ಆರೋಗ್ಯ ಅಭಿಯಾನದಡಿ ನಿವೃತ್ತ ತಜ್ಞ ವೈದ್ಯರನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂದು ಡಿಹೆಚ್‌ಓ ಸಭೆಗೆ ತಿಳಿಸಿದರು. ತಾಯಿ ಮತ್ತು ಮಗುವಿನ ಮರಣ ಪ್ರಮಾಣದಲ್ಲಿ ಗಣನೀಯ ಇಳಿಕೆಯಾಗಬೇಕು, ಮರಣ ಹೊಂದಿದ ಪ್ರಕರಣಗಳನ್ನು ಕಡ್ಡಾಯವಾಗಿ ಆಡಿಟ್ ಮಾಡಿಸಬೇಕೆಂದು ಕಾರ್ಯದರ್ಶಿಯವರು ಸೂಚನೆ ನೀಡಿದರು.

ಸಕಾಲದಲ್ಲಿ ಹಲವು (4ನೇ ಪುಟಕ್ಕೆ)

## ಬಿಸಿಯೂಟದಲ್ಲಿ ಸಿರಿಧಾನ್ಯ

### ಇಂದಿರಾ ಕ್ಯಾಂಟೀನ್‌ಗಳಲ್ಲೂ ಸಿರಿಧಾನ್ಯ ಬಳಕೆ: ಸಿದ್ದರಾಮಯ್ಯ ಘೋಷಣೆ



ಬೆಂಗಳೂರು, ಜ. 5 - ಇಂದಿರಾ ಕ್ಯಾಂಟೀನ್ ಮತ್ತು ಮಧ್ಯಾಹ್ನದ ಶಾಲಾ ಊಟದಲ್ಲಿ ಸಿರಿಧಾನ್ಯ ಬಳಕೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಮಹತ್ವದ ಘೋಷಣೆ ಮಾಡಿದರು.

ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳ-2024 ಮತ್ತು ಸಿರಿಧಾನ್ಯ ತಿನಿಸುಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ರಾಜ್ಯದ ಜನರು ಮತ್ತು ಶಾಲಾ ಮಕ್ಕಳು ಇನ್ನಷ್ಟು ಸದೃಢವಾಗಿ, ಆರೋಗ್ಯವಂತರಾಗಲು ಇಂದಿರಾ ಕ್ಯಾಂಟೀನ್ ಮತ್ತು ಶಾಲಾ ಊಟದಲ್ಲಿ ಸಿರಿಧಾನ್ಯ ಬಳಸುವ ಸಂಬಂಧ ಸದ್ಯದಲ್ಲೇ ಸಂಬಂಧಪಟ್ಟ ಇಲಾಖೆಗಳ ಸಭೆ ಕರೆದು ಚರ್ಚಿಸಿ, ತೀರ್ಮಾನಿಸಲಾಗುವುದು ಎಂದರು.

ಉತ್ತಮ ಗುಣಮಟ್ಟದ ಸಿರಿಧಾನ್ಯ ಬೀಜ ಉತ್ಪಾದನೆ, ಹೊಸ ತಳಿ ಅಭಿವೃದ್ಧಿ ಹಾಗೂ ಸಿರಿಧಾನ್ಯ ರಫ್ತಿಗೆ ಅನುಕೂಲ ಆಗುವಂತೆ ಪ್ರೋತ್ಸಾಹದಾಯಕವಾಗಿ ಅಗತ್ಯ ಕೇಂದ್ರವನ್ನು ರಾಜ್ಯ ಸರ್ಕಾರ ಸ್ಥಾಪಿಸಲಿದೆ ಎಂದು ತಿಳಿಸಿದರು.

ಮಳೆ ಕಡಿಮೆ ಬೀಳುವ, ಭೂಮಿಯ ಫಲವತ್ತತೆ ಕಡಿಮೆ ಇರುವ ಪ್ರದೇಶಗಳಲ್ಲೂ ಸಿರಿಧಾನ್ಯ ಬೆಳೆಯಬಹುದಾಗಿದ್ದು, ಸರ್ಕಾರ ಸಿರಿಧಾನ್ಯ ಮೇಳವನ್ನು ನಿರಂತರವಾಗಿ ಆಯೋಜಿಸುತ್ತಿದೆ ಎಂದು ಹೇಳಿದರು.

ಸಾರಜನಕ, ಲವಣ, ವಿಟಮಿನ್ ಮತ್ತು ನಾರಿನ ಅಂಶಗಳು ಸಿರಿಧಾನ್ಯಗಳಲ್ಲಿ ಹೇರಳವಾಗಿವೆ, ರಸಾಯನಿಕ ಮಿಶ್ರಿತ ಆಹಾರ ಪದಾರ್ಥ ಸೇವನೆ ಹಲವು ಕಾಯಿಲೆಗಳಿಗೆ ಪ್ರಮುಖ ಕಾರಣವಾಗಿದೆ ಎಂದು ಅಧ್ಯಯನಗಳು ಹೇಳುತ್ತವೆ. ಸಾವಯವ ಸಿರಿಧಾನ್ಯ ಸೇವನೆ ಇದಕ್ಕೆ ಉತ್ತಮ ಪರಿಹಾರ ಎಂದರು.

2004 ರಲ್ಲಿ ಸಾವಯವ ಕೃಷಿ ನೀತಿ, 2014 ರಲ್ಲಿ ಪರಿಷ್ಕೃತ ಸಾವಯವ ಕೃಷಿ ನೀತಿಯನ್ನು ರಾಜ್ಯದಲ್ಲಿ ಜಾರಿಗೊಳಿಸಲಾಗಿದೆ. ಸಾವಯವ ಮತ್ತು ಸಿರಿಧಾನ್ಯ ಬೆಳೆ ಬೆಳೆಯಲು ಸರ್ಕಾರ ನಿರಂತರ ಉತ್ತೇಜನ ನೀಡುತ್ತಿದೆ. ಜನರ ಆರೋಗ್ಯಕ್ಕೂ ಇದು ಬಹಳ ಸಹಕಾರಿಯಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಸಾವಯವ ಮತ್ತು ಸಿರಿಧಾನ್ಯ ಹೆಚ್ಚು ಜನಪ್ರಿಯವಾಗುತ್ತಿದೆ, ಭಾರತ ಕೃಷಿ ಪ್ರಧಾನ ದೇಶವಾಗಿದ್ದು ಆಹಾರ ಸ್ವಾವಲಂಬನೆ ಸಾಧಿಸಲು, ಪ್ರತಿಯೊಬ್ಬರಿಗೂ ಆಹಾರ ಲಭ್ಯವಾಗುವಂತೆ ಮಾಡಲು ಹಸಿರು ಕ್ರಾಂತಿ ನೆರವಾಯಿತು ಎಂದರು. (4ನೇ ಪುಟಕ್ಕೆ)

## ನ್ಯಾಯಮೂರ್ತಿ ಖನ್ನಾ, ವಕೀಲ ಫಾಲ್ಕಿವಾಲಾ ಸಂವಿಧಾನದ ದಿಗ್ಗಜರು



### ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ. ಅರವಿಂದ ಕಾಮತ್

ದಾವಣಗೆರೆ, ಜ. 5 - ಭಾರತದ ಸಂವಿಧಾನ ರಕ್ಷಿಸುವಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿದ್ದ ಹೆಚ್.ಆರ್. ಖನ್ನಾ ಹಾಗೂ ಹಿರಿಯ ವಕೀಲ ನಾನಿ ಫಾಲ್ಕಿವಾಲಾ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ಅವರು ಸಂವಿಧಾನದ ದಿಗ್ಗಜರು ಎಂದು ಹೈಕೋರ್ಟ್‌ನಲ್ಲಿ ಭಾರತ ಸರ್ಕಾರದ ಹೆಚ್ಚುವರಿ ಸಾಲಿಸಿಟರ್ ಜನರಲ್ ಆಗಿರುವ ಕೆ. ಅರವಿಂದ ಕಾಮತ್ ಬಣ್ಣಿಸಿದರು.

ಅವರು ನಗರದ ಆರ್.ಎಲ್. ಕಾನೂನು ಕಾಲೇಜಿನಲ್ಲಿ ಅಧಿವಕ್ತ ಪರಿಷತ್ ವತಿಯಿಂದ ಆಯೋಜಿಸಲಾಗಿದ್ದ 'ಸಂವಿಧಾನದ ಚೌಕಟ್ಟು ಎತ್ತಿ ಹಿಡಿಯುವುದೇ ವೃತ್ತಿ ಧರ್ಮ' ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು.

ತುರ್ತು ಪರಿಸ್ಥಿತಿ ಜಾರಿ ಸಂದರ್ಭದಲ್ಲಿ ಜನರಿಗೆ ಜೀವನದ ಹಕ್ಕಿಲ್ಲ ಹಾಗೂ ಈ ವಿಷಯದಲ್ಲಿ ಹೈಕೋರ್ಟ್ ಇಲ್ಲವೇ ಸುಪ್ರೀಂ ಕೋರ್ಟ್ ಮಧ್ಯ ಪ್ರವೇಶಿಸುವಂತಿಲ್ಲ ಎಂದು ಆಗಿನ ಕೇಂದ್ರ ಸರ್ಕಾರ ನಿಲುವು ತಳೆದಿತ್ತು. ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು.

ಆಗ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎ.ಎನ್. ರೇ ಹಾಗೂ ನ್ಯಾಯಮೂರ್ತಿಗಳಾದ ಎಂ.ಹೆಚ್. ಬೇಗ್, ವೈ. ವಿ. ಚಂದ್ರಚೂಡ್ ಹಾಗೂ ಪಿ.ಎನ್. ಭಗವತಿ ಅವರು ಸರ್ಕಾರದ ಪರ ತೀರ್ಪು (4ನೇ ಪುಟಕ್ಕೆ)

## ಉಚಿತ ಕೊಡುಗೆಗಳ ಘೋಷಣೆ ಬಗ್ಗೆ ವಿಚಾರಣೆ

ನವದೆಹಲಿ, ಜ. 5- ಚುನಾವಣಾ ಸಂದರ್ಭದಲ್ಲಿ ರಾಜಕೀಯ ಪಕ್ಷಗಳು ಘೋಷಿ ಸುವ ಉಚಿತ ಕೊಡುಗೆಗಳನ್ನು ಪ್ರಶ್ನಿಸಿ ದಾಖ ಲಾಗಿರುವ ಅರ್ಜಿಗಳ ಬಗ್ಗೆ ಪರಿಶೀಲಿಸುವುದಾಗಿ ಸುಪ್ರೀಂ ಕೋರ್ಟ್ ತಿಳಿಸಿದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲಾ ಹಾಗೂ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ ಈ ನಿಲುವು ತಳೆದಿದೆ. ಪೀಠದ ಎದುರು ಹಾಜರಾಗಿದ್ದ ಹಿರಿಯ ವಕೀಲ ವಿಜಯ್ ಹನ್ಸಾರಿಯ, ಈ ವಿಷಯದ ಬಗ್ಗೆ ಪರಿಶೀಲಿಸುವಂತೆ ಮನವಿ ಮಾಡಿಕೊಂಡಿದ್ದರು.

## ಶ್ರೀಕಾಂತ್ ಪೂಜಾರಿಗೆ ಕೋರ್ಟ್‌ನಿಂದ ಜಾಮೀನು

ಹುಬ್ಬಳ್ಳಿ, ಜ. 5 – 1992ರ ಸಮಯದಲ್ಲಿ ರಾಮ ಜನ್ಮಭೂಮಿ ಹೋರಾಟದ ಸಮಯದಲ್ಲಿ ನಡೆದ ಗಲಭೆ ಪ್ರಕರಣದಲ್ಲಿ ಬಂಧಿತ ಹಿಂದೂ ಕಾರ್ಯಕರ್ತ ಶ್ರೀಕಾಂತ್ ಪೂಜಾರಿಗೆ ಇಲ್ಲಿನ ಸೆಷನ್ಸ್ ನ್ಯಾಯಾಲಯ ಜಾಮೀನು ನೀಡಿದೆ. ಕಳೆದ ವಾರ ಅವರನ್ನು ಬಂಧಿಸಲಾಗಿತ್ತು.

31 ವರ್ಷಗಳ ಹಳೆಯ ಪ್ರಕರಣಕ್ಕೆ ಸಂಬಂಧಿಸಿದಂತೆ ಪೂಜಾರಿ ಬಂಧಿಸಿದ್ದನ್ನು ವಿರೋಧಿಸಿ ಬಿಜೆಪಿ ರಾಜ್ಯಾದ್ಯಂತ ಪ್ರತಿಭಟನೆ ನಡೆಸಿತ್ತು. ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಪರಮೇಶ್ವರ ಪ್ರಸನ್ನ ಅವರು ಜಾಮೀನಿಗೆ ಆದೇಶ ಹೊರಡಿಸಿದ್ದಾರೆ.

ಪೂಜಾರಿ ವಿರುದ್ಧ ಹಲವು ಪ್ರಕರಣಗಳಿವೆ. ಅವರು ನ್ಯಾಯಾಲಯದ ವಿಚಾರಣೆಗೆ ಹಾಜರಾಗುತ್ತಿಲ್ಲ ಎಂದು ಸರ್ಕಾರದ ಪರ ವಕೀಲರು ವಾದ ಮಂಡಿಸಿದ್ದರು.

## ರಾಮ ಮಂದಿರ ಉದ್ಘಾಟನಾ ಸಮಾರಂಭಕ್ಕೆ ಅನ್ಸಾರಿಗೆ ಆಹ್ವಾನ



### ಸಮಾರಂಭದಲ್ಲಿ ಪಾಲ್ಗೊಳ್ಳುವೆ ಎಂದ ಬಾಬ್ರಿ ಮಸೀದಿ ಖಟ್ಲೆದಾರ

ಅಯೋಧ್ಯೆ, ಜ. 5- ರಾಮ ಜನ್ಮಭೂಮಿ - ಬಾಬ್ರಿ ಮಸೀದಿ ಪ್ರಕರಣದಲ್ಲಿ ಖಟ್ಲೆದಾರರಾಗಿದ್ದ ಇಕ್ಬಾಲ್ ಅನ್ಸಾರಿ ಅವರಿಗೆ ರಾಮ ಮಂದಿರ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲು ಆಹ್ವಾನ ನೀಡಲಾಗಿದೆ. ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳುವುದಾಗಿ ಅನ್ಸಾರಿ ತಿಳಿಸಿದ್ದಾರೆ. ಜನವರಿ 22ರಂದು ನಡೆಯಲಿರುವ (4ನೇ ಪುಟಕ್ಕೆ)

REQUIRED
CIVIL ENGINEER'S
Qualification : Diploma/ BE Civil
Experience: 3 to 5 Years
(Exclusively in Water Supply & Lift Irrigation Project)
RAMALINGAM CONSTRUCTION COMPANY PVT LTD
Is hiring for Civil Engineer's (10 posts) in our Water Supply and Lift Irrigation Project at Davanagere, Karnataka
Interested Candidates can mail their resume to
career@ramalingam.in
Ph. : 82771 62889
Only shortlisted candidates called for interview

Join SIR MV to become a Ranker in CET/NEET/IIT (Mains & Advanced)
ADMISSION cum SCHOLARSHIP
1st PUC - 2024 ADMISSION
Scan QR Code for SET (Self Evaluation Test)
Scan for SET
CBSE, ICSE, STATE Offline Test | Date : 07-01-2024 & 21-01-2024
Time : 10 am to 12 noon | Parents are requested to be Present with your Ward
NEET-2022 STATE 1st NEET MARKS 705/720
NEET-2020 NEET MARKS 703/720 All India Rank 3
NEET-2023 DIST. 1st NEET MARKS 680/720
PU-2023 PU MARKS 592/600
10 IIT STUDENTS 18 NIT STUDENTS 8 IIIT STUDENTS 9 AIIMS STUDENTS
300+ Free Medical seats in NEET - 2023
Scan For Brochure
SIR M V GROUP OF INSTITUTIONS
SIR MV PU COLLEGE, SIR MV COMPOSITE PU COLLEGE, DAVANGERE. Ph: 08192-261200, 9243312223, 87221 41400
SRI VIDYA BHARATHI PRE-UNIVERSITY (IND) COLLEGE, SHIMOGA Ph: 9148684483, 9035141142, 8088350265
SATYAM PU COLLEGE, BALLARI Ph: 8197764018, 9945377965

# ಮಹಿಳೆಯರ ರಕ್ಷಣೆಗಾಗಿ ಜಿಲ್ಲಾ ಪೊಲೀಸ್‌ನಿಂದ ಸುರಕ್ಷಾ ಆ್ಯಪ್ ಲಭ್ಯ



### ಸೀತಮ್ಮ ಕಾಲೇಜಿನ ಕಾರ್ಯಕ್ರಮದಲ್ಲಿ ಎಸ್ಪಿ ಉಮಾ ಪ್ರಶಾಂತ್

ದಾವಣಗೆರೆ, ಜ. 3- ಹೆಣ್ಣು ಮಕ್ಕಳ ರಕ್ಷಣೆಗಾಗಿ ಜಿಲ್ಲಾ ಪೊಲೀಸ್ ವತಿಯಿಂದ ಜಿಲ್ಲೆಯಲ್ಲಿ ಹದಿನಾರು ಪೊಲೀಸ್ ವಾಹನಗಳನ್ನು ಪ್ರತ್ಯೇಕವಾಗಿ ವ್ಯವಸ್ಥೆ ಮಾಡಲಾಗಿದ್ದು, ವಿದ್ಯಾರ್ಥಿನಿಯರು ಏನೇ ಸಮಸ್ಯೆಯಿದ್ದರೂ 112 ಕ್ಕೆ ಕರೆ ಮಾಡಬಹುದು. ಇದಲ್ಲದೇ ಇತ್ತೀಚಿಗೆ ಸುರಕ್ಷಾ ಆ್ಯಪ್ ಅಭಿವೃದ್ಧಿ ಪಡಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಹೇಳಿದರು.

ನಗರದ ರಾಜನಹಳ್ಳಿ ಸೀತಮ್ಮ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ನಡೆದ 2023-24 ನೇ ಸಾಲಿನ ಪ್ರತಿಭಾ ವಿಕಾಸ ಸಂಘದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದಾವಣಗೆರೆ ಹೆಲ್ಪ್ ಅಪ್ಲಿಕೇಶನ್ ಡೌನ್‌ಲೋಡ್ ಮಾಡಿಕೊಂಡರೆ ಸುರಕ್ಷಾ ಆ್ಯಪ್ ಸಿಗುತ್ತದೆ. ಈ ಮೂಲಕ ತುರ್ತು ಬಟನ್ ಒತ್ತಿದರೆ ಸಾಕು ಜಿಲ್ಲಾ ಪೊಲೀಸ್ ಸಹಾಯಕ್ಕೆ ಸಿದ್ದವಿರುತ್ತದೆ ಎಂದರು.

ಉತ್ತಮ ಪುಸ್ತಕಗಳೇ ವಿದ್ಯಾರ್ಥಿಗಳಿಗೆ ಸ್ನೇಹಿತರಾಗಬೇಕೆ ವಿನಃ ಮೊಬೈಲ್ ಅಲ್ಲ. ಶೇ. 80 ರಷ್ಟು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮೊಬೈಲ್ ಬಳಕೆ ಮಾಡುತ್ತಿದ್ದು, ಆ ಬಳಕೆ ಕೇವಲ ವಿದ್ಯಾಭ್ಯಾಸಕ್ಕೆ ಪೂರಕವಾಗಿರಬೇಕು ಎಂದು ಹಿತ ನುಡಿದರು.

ಪ್ರತಿಯೊಬ್ಬರಲ್ಲೂ ತನ್ನದೇ ಆದ ಪ್ರತಿಭೆ ಅಡಗಿರುತ್ತದೆ. ಅದನ್ನು ಹೊರ ಹಾಕುವ ಪ್ರಯತ್ನ ಮಾಡಬೇಕು. ವಿದ್ಯಾರ್ಥಿ ಜೀವನದಲ್ಲಿಯೇ ನಾವು ಏನಾಗಬೇಕೆಂದು ನಿರ್ಧರಿಸಬೇಕು. ಸತತ ವಿದ್ಯಾಭ್ಯಾಸದ ಮೂಲಕ ಗುರಿ ಸಾಧನೆಗೆ ಮುಂದಾಗಬೇಕೆಂದು ಕರೆ ನೀಡಿದರು.

ವಿದ್ಯಾರ್ಥಿನಿಯರು ಸಹ ಓದಿನ ಮೂಲಕ ಸಶಕ್ತರಾಗಬೇಕು. ಸಮಾಜದಲ್ಲಿ ನಡೆಯುವ ಅನ್ಯಾಯವನ್ನು ಪ್ರಶ್ನಿಸುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ಸಶಕ್ತಿಯಿಂದ ಜೀವನ ನಡೆಸುತ್ತೇನೆಂಬ ಆತ್ಮವಿಶ್ವಾಸ ಮೂಡಬೇಕು. ಆಸಕ್ತಿಗೆ ಅನುಗುಣವಾಗಿ ಜೀವನದಲ್ಲಿ ಮುನ್ನಡೆಯಬೇಕೆಂದರು.

ಲಕ್ಷ್ಮಿದೇವಿ ದಯಾನಂದ್ ಮಾತನಾಡಿ, ಮಹಿಳೆ ಮಾನಸಿಕವಾಗಿ, ದೈಹಿಕವಾಗಿ ಸದೃಢಳಾದರೆ ಸಮಾಜವನ್ನು ಧೈರ್ಯವಾಗಿ ಎದುರಿಸುವ ಆತ್ಮಬಲ ಬರುತ್ತದೆ. ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆ, ಕಾಲೇಜಿನ ನಂತರವೂ ಕ್ರೀಡೆಗಳಲ್ಲಿ ಭಾಗವಹಿಸುವ ಹವ್ಯಾಸವನ್ನು ರೂಢಿಸಿಕೊಂಡೆ ಆತ್ಮಸ್ಥೈರ್ಯ ಹೆಚ್ಚುತ್ತದೆ ಎಂದು ಹೇಳಿದರು.

ರಾಜ್ಯಮಟ್ಟದ ಕ್ರೀಡೆಗಳಲ್ಲಿ ಪದಕಗಳನ್ನು ಗಳಿಸಿ, ಅತ್ಯುತ್ತಮ ಸಾಧನೆ ಮಾಡಿದರೆ ಸರ್ಕಾರಿ ಕ್ರೀಡಾ ವಸತಿ ನಿಲಯಗಳಲ್ಲಿ ಪ್ರವೇಶ ದೊರೆಯುತ್ತದೆ. ವಿದ್ಯಾಭ್ಯಾಸದ ಜೊತೆಗೆ ಉದ್ಯೋಗವೂ ದೊರೆಯುತ್ತದೆ ಎಂದು ಅವರು ವಿದ್ಯಾರ್ಥಿನಿಯರಿಗೆ ಮನವರಿಕೆ ಮಾಡಿಕೊಟ್ಟರು.

ಕಾಲೇಜಿನ ಪ್ರಾಚಾರ್ಯರಾದ ಟಿ.ಎ. ಕುಸಗಟ್ಟಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಕರಿಸಿದ್ದಪ್ಪ, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಕೆ. ಜಿ. ಶಿವಕುಮಾರ್, ಸರ್ಕಾರಿ ನೌಕರರ ಸಂಘದ ನಿಕಟಪೂರ್ವ ಜಿಲ್ಲಾಧ್ಯಕ್ಷ ಪಾಲಾಕ್ಷಿ ಸೇರಿದಂತೆ, ಇತರೆ ಗಣ್ಯರು ಉಪಸ್ಥಿತರಿದ್ದರು.

# ಕುಸ್ತಿ ಪಂದ್ಯಾವಳಿಯಲ್ಲಿ ಪೈಲ್ವಾನರ ಸೆಣಸಾಟ : 3 ದಿನದ ಕುಸ್ತಿಗೆ ತೆರೆ



### ಕರ್ನಾಟಕದ ಮಹೇಶ್ ಅಥಣಿಗೆ ಪ್ರಥಮ ಬಹುಮಾನ

ಹೊನ್ನಾಳಿ, ಜ.5- ಪಟ್ಟಣದ ದೊಡ್ಡಕೇರಿಯ ಶ್ರೀ ಬೀರಲಿಂಗೇಶ್ವರ ದೇವರ ಕಾರ್ತಿಕೋತ್ಸವದ ಅಂಗವಾಗಿ 3 ದಿನಗಳ ಕುಸ್ತಿ ಪಂದ್ಯಾವಳಿಯನ್ನು ಆಯೋಜಿಸಲಾಗಿತ್ತು.

ಹೊನಲು ಬೆಳಕಿನ ಕುಸ್ತಿ ಪಂದ್ಯಾವಳಿಯ 3ನೇ ಮತ್ತು ಕೊನೆಯ ದಿನವಾದ ಇಂದು ಕುಸ್ತಿ ಪಂದ್ಯಾವಳಿಗೆ ತೆರೆ ಬಿದ್ದಿತು. ದಾವಣಗೆರೆ ಸೇರಿದಂತೆ, ನಾನಾ ರಾಜ್ಯಗಳಿಂದ ಬಂದಿದ್ದ ಸುಮಾರು 250ಕ್ಕೂ ಹೆಚ್ಚು ಕುಸ್ತಿ ಪಟುಗಳು ಎದುರಾಳಿಗೆ ಹಾಕಿದ ಬಿಗಿಪಟ್ಟುಗಳ ಮೂಲಕ ನೆರೆದಿದ್ದವರ ಮೈ ರೋಮಾಂಚನಗೊಳಿಸಿದರು.

ಕರ್ನಾಟಕದ ಮಹೇಶ್ ಅಥಣಿ ಪ್ರಥಮ ಬಹುಮಾನ ಪಡೆದರು. ಇವರು 'ಕರ್ನಾಟಕ ಕೇಸರಿ' ಪ್ರಶಸ್ತಿಗೆ ಭಾಜನರಾಗಿ 50,000 ನಗದು ಮತ್ತು 1 ಕೆ.ಜಿ. ಬೆಳ್ಳಿ ಬಹುಮಾನ ಪಡೆದರು. ದ್ವಿತೀಯ ಬಹುಮಾನವನ್ನು ಪಡೆದ ಮಹಾರಾಷ್ಟ್ರದ ಚಾಂಪಿಯನ್ ಲೋಕತ್ ಪವಾರ್ ಅವರಿಗೆ 25,000 ನಗದು ಮತ್ತು ಫ್ಯಾನ್ ಕೊಡುಗೆಯಾಗಿ ನೀಡಲಾಯಿತು. ಕುಸ್ತಿ ಪಂದ್ಯಾವಳಿಗೆ ದೇಣಿಗೆ ನೀಡಿದ ದಾನಿಗಳಿಗೆ, ಜನಪ್ರತಿನಿಧಿಗಳಿಗೆ ಗೌರವಿಸಲಾಯಿತು.

ವೇದಿಕೆಯ ಮೇಲೆ ದೇವರ ಗಣಮಕ್ಕಳಾದ ಅಣ್ಣಪ್ಪಸ್ವಾಮಿ, ಪ್ರಭುಸ್ವಾಮಿ, ಶಾಸಕ ಡಿ.ಜಿ.ಶಾಂತನಗೌಡ, ಕುಸ್ತಿ ಲೈಸೆನ್ಸ್‌ದಾರರಾದ ಎಚ್.ಬಿ. ಗಿಡ್ಡಪ್ಪ, ತೆಂಗಿನಮರದ ಮಾದಪ್ಪ, ಪರಸಣ್ಣರ ನರಸಿಂಹಪ್ಪ, ಗೌಡ್ರು ನರಸಪ್ಪ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ. ಮಂಜಪ್ಪ, ಪುರಸಭೆ ಸದಸ್ಯ ಧರ್ಮಪ್ಪ, ಎಚ್.ಎ.ಉಮಾಪತಿ, ಕರವೇ ಅಧ್ಯಕ್ಷ ವಿನಯ್ ವಗ್ಗರ್, ಬಿಜೆಪಿ ಅಧ್ಯಕ್ಷ ಜೆ.ಕೆ. ಸುರೇಶ್, ಮುಖಂಡ ಟಿ.ಜಿ. ರಮೇಶಗೌಡ, ಡಾ. ಜಗನ್ನಾಥ್ ಬಾಬು, ಮಾಜಿ ಸೈನಿಕ ಎಂ. ವಾಸಪ್ಪ, ಕುಸ್ತಿ ಕಮಿಟಿ ಅಧ್ಯಕ್ಷ ಎಚ್.ಬಿ. ಅಣ್ಣಪ್ಪ, ಗೌರವಾಧ್ಯಕ್ಷ ಎನ್.ಕೆ. ಆಂಜನೇಯ, ನಿವೃತ್ತ ಜಿಲ್ಲಾ ಶಿಕ್ಷಣಾಧಿಕಾರಿ ರವಿ ಗಾಳಿ, ಖಜಾಂಚಿ ಕಾಳಿಂಗಪ್ಪ, ಕತ್ತಿಗೆ ನಾಗರಾಜ್, ಎಚ್.ಡಿ. ವಿಜೇಂದ್ರಪ್ಪ, ಕಾಟ್ಯಾಕುಮಾರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ರಾಜ್ಯಪಾಲರೊಂದಿಗೆ ಡಾ. ಟಿ.ಜಿ. ರವಿಕುಮಾರ್ ಸಮಾಲೋಚನೆ



ಬೆಂಗಳೂರು, ಜ.5- ರಾಜ್ಯಪಾಲರಾದ ಥಾವರ್ ಚಂದ್ ಗೆಹಲೋಟ್ ಅವರನ್ನು ಬೆಂಗಳೂರಿನ ರಾಜಭವನದಲ್ಲಿ ದಾವಣಗೆರೆಯ ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಮುಖ್ಯಸ್ಥ ಡಾ. ಟಿ.ಜಿ. ರವಿಕುಮಾರ್ ಭೇಟಿ ಮಾಡಿ ಸಮಾಲೋಚಿಸಿದರು.

ಪ್ರೀತಿ ಆರೈಕೆ ಟ್ರಸ್ಟ್ ವತಿಯಿಂದ ಜಿಲ್ಲಾದ್ಯಂತ ಉಚಿತವಾಗಿ ಆಯೋಜಿಸುತ್ತಿರುವ ಆರೋಗ್ಯ ತಪಾಸಣೆ ಶಿಬಿರಗಳ ಬಗ್ಗೆ ರಾಜ್ಯಪಾಲರು ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಜಗಳೂರು ಮಾಜಿ ಶಾಸಕರಾದ ಟಿ.ಗುರುಸಿದ್ದನಗೌಡ, ಉದ್ಯಮಿಗಳಾದ ಅರವಿಂದ್ ಟಿ.ಜಿ, ವಿರಾಜ್ ಕೆ. ಅಣಜಿ, ಎನ್. ಪಿ. ವೀರೇಶ್ ದೇವರಬೆಳೆಕೆರೆ ಇದ್ದರು.

# ವಿವಿ ಪ್ಯಾಟ್ : ಜೈರಾಮ್ ಕಳವಳ ತಳ್ಳಿ ಹಾಕಿದ ಆಯೋಗ

### ಕಾಂಗ್ರೆಸ್ ಆಡಳಿತದಲ್ಲೇ ನಿಯಮ ರೂಪಿಸಲಾಗಿತ್ತು ಎಂದು ಪತ್ರ

ನವದೆಹಲಿ ಜ. 5 – ವಿ.ವಿ.ಪ್ಯಾಟ್‌ಗಳಿಗೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ವ್ಯಕ್ತಪಡಿಸಿರುವ ಕಳವಳಗಳನ್ನು ತಳ್ಳಿ ಹಾಕಿರುವ ಚುನಾವಣಾ ಆಯೋಗ, ಈ ವಿಷಯದ ಬಗ್ಗೆ ಯಾವುದೇ ಹೆಚ್ಚಿನ ಸ್ಪಷ್ಟನೆ ನೀಡುವ ಅಗತ್ಯವಿಲ್ಲ ಎಂದು ಹೇಳಿದೆ.

ಮತದಾನ ಖಚಿತ ಪಡಿಸಿಕೊಳ್ಳಲು ಕಾಗದದ ರಸೀದಿಯನ್ನು ನೀಡುವ ಯಂತ್ರವನ್ನು ವಿ.ವಿ.ಪ್ಯಾಟ್ ಎಂದು ಕರೆಯಲಾಗುತ್ತದೆ. 2013ರಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರದಲ್ಲಿದ್ದ ಸಮಯದಲ್ಲೇ ವಿ.ವಿ.ಪ್ಯಾಟ್ ನಿಯಮಗಳನ್ನು ರೂಪಿಸಲಾಗಿತ್ತು ಎಂದೂ ಚುನಾವಣಾ ಆಯೋಗ ತಿಳಿಸಿದೆ.

ಮತಯಂತ್ರಗಳನ್ನು ಚುನಾವಣೆಯಲ್ಲಿ ಬಳಸುವ ಬಗ್ಗೆ ಪೂರ್ಣ ನಂಬಿಕೆ ಇದೆ. ಇತ್ತೀಚೆಗೆ ಚುನಾವಣಾ ಆಯೋಗ ವಿವರಣೆಗಳನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ ಸಮಗ್ರವಾಗಿ ಎಲ್ಲ ವಿಷಯಗಳನ್ನು ತಿಳಿಲಾಗಿದೆ ಎಂದು ಹೇಳಿದೆ.

ಜೈರಾಮ್ ರಮೇಶ್ ಅವರಿಗೆ ಪತ್ರ ಬರೆದಿರುವ ಚುನಾವಣಾ ಆಯೋಗದ ಪ್ರಧಾನ ಕಾರ್ಯದರ್ಶಿ ಪ್ರಮೋದ್ ಕುಮಾರ್ ಶರ್ಮ, ವಿ.ವಿ.ಪ್ಯಾಟ್ ಹಾಗೂ ಅವುಗಳ ಕಾಗದದ ರಸೀದಿ ನಿರ್ವಹಿಸುವ ನಿಯಮಗಳನ್ನು 2013ರಲ್ಲಿ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿತ್ತು ಎಂದು ತಿಳಿಸಿದ್ದಾರೆ.

ಕಳೆದ ವರ್ಷ ಡಿಸೆಂಬರ್ 30ರಂದು ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದ ರಮೇಶ್, ವಿ.ವಿ.ಪ್ಯಾಟ್ ಕುರಿತು ನಿಲುವು ತಿಳಿಸಲು ಪ್ರತಿಪಕ್ಷಗಳ ಒಕ್ಕೂಟವಾದ ಐ.ಎನ್.ಡಿ.ಐ.ಎ.ಗೆ ಸಮಯ ನೀಡಬೇಕು ಎಂದು ಕೇಳಿದ್ದರು.

ಡಿಸೆಂಬರ್ 19ರಂದು ಸಭೆ ನಡೆಸಿದ್ದ ಐ.ಎನ್.ಡಿ.ಐ.ಎ. ಒಕ್ಕೂಟದ ಸದಸ್ಯರು, ಮತಯಂತ್ರಗಳ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದರು. ವಿ.ವಿ.ಪ್ಯಾಟ್ ರಸೀದಿಗಳನ್ನು ಮತದಾರರ ಕೈಗೆ ನೀಡಬೇಕು. ಅವುಗಳನ್ನು ಪ್ರತ್ಯೇಕ ಡಬ್ಬಿಗೆ ಹಾಕಬೇಕು. ಈ ರಸೀದಿ ಹಾಗೂ ಮತಯಂತ್ರಗಳ ಲೆಕ್ಕಾಚಾರ ಶೇ.100ರಷ್ಟು ತಾಳೆ ಆಗಬೇಕು ಎಂದು ಹೇಳಿದ್ದರು.

ಆದರೆ, ರಮೇಶ್ ಬರೆದಿರುವ ಪತ್ರದಲ್ಲಿ ಯಾವುದೇ ಹೊಸ ವಿಷಯ ಇಲ್ಲ. ಈ ಪತ್ರದಿಂದ ಸಕಾರಣವಾದ ಹಾಗೂ ಕಾನೂನುಬದ್ಧವಾದ ಯಾವದೇ ಅನುಮಾನ ಹುಟ್ಟುವುದಿಲ್ಲ. ಈ ಬಗ್ಗೆ ಮತ್ತಷ್ಟು ಸ್ಪಷ್ಟನೆ ನೀಡಬೇಕಿಲ್ಲ ಎಂದು ಶರ್ಮ ತಿಳಿಸಿದ್ದಾರೆ.

# ನೈಸ್ ಯೋಜನೆ ಸರ್ಕಾರ ವಶಕ್ಕೆ ಪಡೆಯಲಿ : ದೇವೇಗೌಡ ಒತ್ತಾಯ

ಬೆಂಗಳೂರು, ಜ. 5 - ನೈಸ್ ಯೋಜನೆಯನ್ನು ರಾಜ್ಯ ಸರ್ಕಾರ ವಶಕ್ಕೆ ಪಡೆಯಬೇಕು ಎಂದು ಆಗ್ರಹಪಡಿಸಿರುವ ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ.ದೇವೇಗೌಡ ಅವರು, ಕಂಪನಿ ವಶದಲ್ಲಿರುವ 13,404 ಎಕರೆ ರೈತರ ಭೂಮಿಯನ್ನು ಸರ್ಕಾರ ಮರು ವಶಪಡಿಸಿಕೊಳ್ಳಬೇಕು ಎಂದರು. ಈ ಬಗ್ಗೆ ತಾವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದರೂ, ಈವರೆಗೂ ಯಾವುದೇ ಕ್ರಮ ವಹಿಸಿಲ್ಲ ಎಂದು ಮಾಜಿ ಪ್ರಧಾನಿ ಅತೀವ ಬೇಸರ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ ಅವರಿಗೆ ಏನು ಕಷ್ಟ ಇದೆಯೋ ಗೊತ್ತಿಲ್ಲ. ಅವರು ಬಡವರ ಪರ ಮಾತನಾಡುತ್ತಾರೆ. ಆ ಯೋಜನೆಯಲ್ಲಿ ಇಷ್ಟೊಂದು ಅಕ್ರಮ ಆಗಿದ್ದರೂ, ಬಡವರ ಭೂಮಿ ಲೂಟಿ ಹೊಡೆಯಲಾಗಿದ್ದರೂ ಏನು ಕ್ರಮ ತೆಗೆದುಕೊಂಡಿಲ್ಲ. ಬಡವರ ಪರ ಮಾತಾಡುವ ಮುಖ್ಯಮಂತ್ರಿ ಯಾಕೆ ಕ್ರಮ ತೆಗೆದುಕೊಂಡಿಲ್ಲ ಎಂದು ಮಾಜಿ ಪ್ರಧಾನಿ ಅತ್ಯಂತ ಖಾರವಾಗಿ ಪ್ರಶ್ನಿಸಿದರು.

ಸಿದ್ದರಾಮಯ್ಯ ಅವರು ಎಷ್ಟು ವರ್ಷ ಆಳಿದರೂ ಈ ಕಪ್ಪುಚುಕ್ಕೆಯಿಂದ ಹೊರಗೆ ಬರಲು ಸಾಧ್ಯವಿಲ್ಲ. ಇದರ ವಿರುದ್ಧ ಅವರು ಕ್ರಮ ತೆಗೆದುಕೊಳ್ಳದೇ ಹೋದರೆ ಅವರ ರಾಜಕೀಯ ಜೀವನಕ್ಕೆ ಇದೇ ಕಪ್ಪುಚುಕ್ಕೆಯಾಗಿ ಉಳಿದು ಹೋಗುತ್ತದೆ ಎಂದರು. ಈ ವಿಷಯದಲ್ಲಿ ರೈತರ ಪರ ನಿಲ್ಲುವುದಕ್ಕೆ ಮೀನಾಮೇಷ ಎಣಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

# ಸಂಗೀತ ಸಿರಿ ಇಂದು ರಸಮಂಜರಿ



ದಾವಣಗೆರೆ: ಸಂಗೀತ ಸಿರಿ ತನ್ನ 26ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಎರಡು ದಿನ ಇಂದು ಮತ್ತು ನಾಳೆ ಸಂಗೀತ ರಸ ರಸಮಂಜರಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಇಲ್ಲಿನ ಹೋಟೆಲ್ ಶಾಂತಿ ಪಾರ್ಕ್ ಸಭಾಂಗಣದಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಸಿರ್ಸಿಯ ಗಾಯಕಿ ವೈಶಾಲಿ ಮಂಜ್ರೇಕರ್, ಬಿ.ಎಂ. ರಿಯಾಜ್ ಅಹಮ್ಮದ್ ಸೇರಿದಂತೆ ಡಾ.ಅನೀಸ್, ಡಾ. ರಾಘವನ್, ಕು ಶಿಲ್ಪಾ, ಸೇರಿದಂತೆ ಸ್ಥಳೀಯ ಕಲಾವಿದರು ಹಾಡಿ ರಂಜಿಸಲಿದ್ದಾರೆ. ಸಂಗೀತ ಸಿರಿ ಸಂಗೀತ ನಿರ್ಮಾಪಕರಾದ ಶ್ರೀಮತಿ ಸಕೀನಾ ಅವರು ಆಯೋಜಿಸಿರುವ ಈ ಕಾರ್ಯಕ್ರಮಕ್ಕೆ ಉಚಿತ ಪ್ರವೇಶ ಎಂದು ತಿಳಿಸಿದ್ದಾರೆ.

# ನಾಳೆ ಹೇಮ-ವೇಮ ಸದ್ಬೋಧನಾ ವಿದ್ಯಾಪೀಠದ ದಶಮಾನೋತ್ಸವ

ಹೊಸಹಳ್ಳಿ, ಜ.5- ಮಹಾಯೋಗಿ ವೇಮನ ಸಂಸ್ಥಾನ ಮಠ, ರೆಡ್ಡಿ ಗುರುಪೀಠ, ಅಕ್ಕರೆ ಶ್ರೀರಾಮವನ, ಹೊಸಹಳ್ಳಿ ಇವರ ಆಶ್ರಯದಲ್ಲಿ ಹೇಮ-ವೇಮ ಸದ್ಬೋಧನಾ ವಿದ್ಯಾಪೀಠದ ದಶಮಾನೋತ್ಸವ ಕಾರ್ಯಕ್ರಮ ನಾಡಿದ್ದು ದಿನಾಂಕ 7 ರ ಭಾನುವಾರ ಮಠದ ಆವರಣದಲ್ಲಿ ನಡೆಯಲಿದೆ.

ಸಂಜೆ 6 ಗಂಟೆಗೆ ಮಾಜಿ ಸಚಿವ ಶಿವನಗೌಡ ರುದ್ರಗೌಡ ಕಾರ್ಯಕ್ರಮವನ್ನು ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಹಾಲಪ್ಪ ಆಚಾರ್ ವಹಿಸುವರು. ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಮೂರ್ತಿಗೆ ಜಿ. ಜನಾರ್ಧನ ರೆಡ್ಡಿ, ಮಹಾಯೋಗಿ ವೇಮನ ಮೂರ್ತಿಗೆ ಗೋಪಿನಾಥ್ ರೆಡ್ಡಿ ಪುಷ್ಪಾರ್ಚನೆ ಮಾಡುವರು.

ಮುಖ್ಯ ಅತಿಥಿಗಳಾಗಿ ಸಿ.ಎಸ್. ನಾಡಗೌಡ, ವೆಂಕಟರಾವ್ ನಾಡಗೌಡ, ಅಜಯ್‌ಕುಮಾರ್ ಸರ್‌ನಾಯಕ್, ದೊಡ್ಡನಗೌಡ ಪಾಟೀಲ್, ಸೋಮನಗೌಡ ಪಾಟೀಲ್, ಜಿ. ವೀರಪ್ಪ, ಶರಣೇಗೌಡ ಬಯ್ಯಾಪುರ, ಡಾ ರವಿಕುಮಾರ್ ಆಗಮಿಸುವರು.

# ಶಿಕ್ಷಣದ ಅರಿವು ನೀಡಿದ ತಾಯಿ : ಪ್ರಕಾಶ್ ಗೌಡ



ಹರಪನಹಳ್ಳಿಯಲ್ಲಿ ಸಾವಿತ್ರಿ ಬಾಯಿ ಫುಲೆ ಅವರ ಜನ್ಮದಿನ ಕಾರ್ಯಕ್ರಮ

ಹರಪನಹಳ್ಳಿ, ಜ.4- 18ನೇ ಶತಮಾನದಲ್ಲಿ ತಳಸಮುದಾಯಗಳಿಗೆ ಮತ್ತು ಎಲ್ಲ ಜಾತಿಯ ಹೆಣ್ಣು ಮಕ್ಕಳಿಗೆ ಶಾಲೆ ತೆರೆದು ಶಿಕ್ಷಣ ನೀಡಿದ ತಾಯಿ ಸಾವಿತ್ರಿ ಬಾಯಿ ಫುಲೆ ಎಂದು ಅಪರ ಸರ್ಕಾರಿ ವಕೀಲ ವಿ. ಜಿ. ಪ್ರಕಾಶ್ ಗೌಡ ಹೇಳಿದರು.

ತಾಲ್ಲೂಕಿನ ದೇವರ ತಿಮ್ಮಲಾಪುರ ಗ್ರಾಮದಲ್ಲಿ ಸ.ಹಿ.ಪ್ರಾಥಮಿಕ ಶಾಲೆ ಮತ್ತು ಶಿಕ್ಷಣ ಇಲಾಖೆ ಇವರ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಉಚಿತ ಕಾನೂನು ಅರಿವು ಮತ್ತು ನೆರವು ಹಾಗೂ ತಾಯಿ ಸಾವಿತ್ರಿ ಬಾಯಿ ಫುಲೆರವರ 192 ನೇ ಜನ್ಮದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಂಚಿತ ಸಮುದಾಯಗಳಿಗೆ ಶಿಕ್ಷಣದ ಅರಿವು ಮತ್ತು ಕಾನೂನು ಜ್ಞಾನವನ್ನು ಹೋರಾಟದ ಮೂಲಕ ಕೊಟ್ಟವರು ಹಾಗೂ ನಮಗಾಗಿ ಕಷ್ಟಗಳನ್ನು ಮೆಟ್ಟಿನಿಂತ ಸಮಾಜ ಸುಧಾರಕರ ವಿಚಾರಗಳನ್ನು ತಿಳಿಯುವುದಕ್ಕೆ ಶಿಕ್ಷಣ ಅಗತ್ಯವಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮುಖ್ಯ ಶಿಕ್ಷಕಿ ಲತಾ ಟಿ. ಹೆಚ್. ಬಿಆರ್‌ಸಿ ಹೊನ್ನತ್ತೆಪ್ಪ, ಷಣ್ಮುಖಪ್ಪ, ಕಬೀರನಾಯ್ಕ, ವಾಗೀಶ್, ಎಂಐಜಿ ಕವಿತಾ, ಶೋಭಾ ಕುಮಾರಿ, ಶೋಭಾ ಹುಲ್ಮನಿ, ಮಲ್ಲಿಕಾರ್ಜುನ, ಸಾಜಿದಾ ಬಾನು, ರಜಿಯಾ, ಕೊಟ್ರಯ್ಯ, ಎಸ್.ಡಿ.ಎಂ.ಸಿ ಅಧ್ಯಕ್ಷ ಎ. ಅಣ್ಣೇಶ್, ಗ್ರಾ. ಪಂ. ಸದಸ್ಯ ಜಿ. ರಮೇಶ್ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

# ಬಾಲ, ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತು ಜಾಗೃತಿ ಜಾಥಾ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾರ್ಮಿಕ ಇಲಾಖೆ ಹಾಗೂ ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ, ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ನಗರದ ದೇವರಾಜ ಅರಸು ಬಡಾವಣೆಯ ಜಿಲ್ಲಾ ನ್ಯಾಯಾಲಯ ಆವರಣದಲ್ಲಿ ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತು ಎಸ್‌ಸಿಪಿ-ಟಿಎಸ್‌ಪಿ ಯೋಜನೆಯಡಿ ದಾವಣಗೆರೆ ನಗರ ವ್ಯಾಪ್ತಿಯಲ್ಲಿ ಹಾಗೂ ಹರಿಹರ ಇಟ್ಟಿಗೆ ಭಟ್ಟಿ ಕ್ಷೇತ್ರಗಳಲ್ಲಿ ಮತ್ತು ಎಸ್‌ಸಿ-ಎಸ್‌ಟಿ ಕಾಲೋನಿಗಳಲ್ಲಿ ಆಟೋ ಪ್ರಚಾರದ ಮೂಲಕ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷ ಎನ್. ರಾಜೇಶ್ವರಿ ಹೆಗಡೆ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ, ಸಹಾಯಕ ಕಾರ್ಮಿಕ ಆಯುಕ್ತ ಎಸ್.ಆರ್. ವೀಣಾ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಕೆ. ನಾಗರಾಜ್, ಕಾರ್ಮಿಕ ಅಧಿಕಾರಿ ಜಿ. ಇಬ್ರಾಹಿಂ ಸಾಬ್, ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಭಾಗವಹಿಸುವರು.

# ನಗರದಲ್ಲಿ ನಾಳೆ ಮಹಾಧ್ಯಾನ ಶಿಬಿರ

ದಾವಣಗೆರೆ, ಜ.5- ಭಗವತಿ ಚೈತನ್ಯ ಚಿಕಿತ್ಸೆ ಮತ್ತು ಧ್ಯಾನ ಕೇಂದ್ರ, ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ, ಶ್ರೀ ಗಾಯತ್ರಿ ಪರಿವಾರ ಇವರುಗಳ ಸಂಯುಕ್ತಾಶ್ರಯದಲ್ಲಿ ಮಹಾಧ್ಯಾನ ಶಿಬಿರದ ಉದ್ಘಾಟನಾ ಸಮಾರಂಭ ನಾಡಿದ್ದು ದಿನಾಂಕ 7 ರ ಸಂಜೆ 5 ಗಂಟೆಗೆ ನಗರದ ಎಂಸಿಸಿ 'ಬಿ' ಬ್ಲಾಕ್ 2ನೇ ಮುಖ್ಯರಸ್ತೆ, 1ನೇ ತಿರುವಿನಲ್ಲಿರುವ ಭಗವತಿ ಚೈತನ್ಯ ಚಿಕಿತ್ಸೆ ಮತ್ತು ಧ್ಯಾನ ಕೇಂದ್ರದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಅಘೋರಿ ಚಿದಂಬರ ಯೋಗಿ ಉದ್ಘಾಟಿಸುವರು. ಸಾಲಿಗ್ರಾಮ ಗಣೇಶ್ ಶೆಣೈ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಚಂದ್ರಶೇಖರ್, ಕೆ.ಹೆಚ್. ಮಂಜುನಾತ್, ಜ್ಯೋತಿ ಗಣೇಶ್ ಶೆಣೈ, ಹೇಮಾ ಶಾಂತಪ್ಪ ಪೂಜಾರಿ ಭಾಗವಹಿಸುವರು.


## ಕೈ ಹಿಡಿದು ನಡೆಸಿದ ಅಪ್ಪ-ಅಮ್ಮರ ನೆನಪಲ್ಲಿ



ದಿ|| ಕೊಂಡಜ್ಜಿ ಈಶ್ವರಪ್ಪನವರು
ನಿಧನ : 06.01.1984



ದಿ|| ಅನ್ನಪೂರ್ಣಮ್ಮ ಕೊಂಡಜ್ಜಿ
ನಿಧನ : 06.06.2008

ನಮ್ಮೆಲ್ಲರನ್ನು ಕೈ ಹಿಡಿದು ನಡೆಸಿ
ತಪ್ಪು ಹೆಜ್ಜೆಗಳನ್ನು ತಿದ್ದಿ ತೀಡಿ
ನಮಗೆ ಬದುಕು ದೊರಕಿಸಿಕೊಟ್ಟ ನೀವು
ನಿತ್ಯ ಸ್ಮರಣೀಯರು

ವರ್ಷಗಳೆಷ್ಟೇ ಕಳೆಯಲಿ,
ನಿಮ್ಮ ನೆನಪು
ನಮ್ಮೆದೆಗಳಲ್ಲಿ ಹಚ್ಚ ಹಸಿರಾಗಿದೆ....
ನೀವಿಟ್ಟ ಹೆಜ್ಜೆಗಳ ಮೇಲೆ ನಡೆಯುತ್ತಿರುವ.....

ಶ್ರೀಮತಿ ಶ್ರೀ ಕೊಂಡಜ್ಜಿ ಜಯಪ್ರಕಾಶ್ — ಶ್ರೀಮತಿ ಶ್ರೀ ಯೋಗೀಶ್ ಕೊಂಡಜ್ಜಿ
ಶ್ರೀಮತಿ ಶ್ರೀ ಭೀಮರಾಜ್ ಕೊಂಡಜ್ಜಿ — ಶ್ರೀ ಗಿರೀಶ್ ಕೊಂಡಜ್ಜಿ
ಚಿ|| ಗಂಗಾ BE, ಚಿ|| ಗಾನವಿ, ಚಿ|| ತೇಜಸ್

ಶ್ರೀಮತಿ ಮತ್ತು ಶ್ರೀ ಜಿ.ಹೆಚ್. ರಾಜಕುಮಾರ್ ಮತ್ತು ಮಕ್ಕಳು — ದಿ|| ಸಾಲೇರ ಸಿದ್ದಪ್ಪನವರ ಮಕ್ಕಳು
ಶ್ರೀಮತಿ ಮತ್ತು ಶ್ರೀ ಜಿ.ಹೆಚ್. ಶಿವಕುಮಾರ್ ಮತ್ತು ಮಕ್ಕಳು — ಶ್ರೀಮತಿ ಶ್ರೀ ಎ.ಎಂ. ಜಯದೇವಪ್ಪ ಮತ್ತು ಮಕ್ಕಳು
ಶ್ರೀಮತಿ ಕವಿತಾ ಡಾ|| ಜಿ.ಹೆಚ್. ಮಂಜುನಾಥ್ — ಶ್ರೀಮತಿ ಸರ್ವಮಂಗಳಮ್ಮ ಪುರದಪ್ಪ ಮತ್ತು ಮಕ್ಕಳು
ಶ್ರೀಮತಿ, ಶ್ರೀ ಎಂ.ಎಸ್. ಪಾಟೀಲ್ ಮತ್ತು ಮಕ್ಕಳು

ಅಂತರವಳ್ಳಿ ಮನೆತನದವರು ಕೊಂಡಜ್ಜಿ ಹಾಗೂ ಬಂಧು-ಮಿತ್ರರು.


# ಎಲೆಬೇತೂರಿನಲ್ಲಿ ಇಂದು ಶ್ರೀನಿವಾಸ ಕಲ್ಯಾಣೋತ್ಸವ

ದಾವಣಗೆರೆ ಎಲೆಬೇತೂರು ಗ್ರಾಮದಲ್ಲಿ ಇಂದು ಶ್ರೀ ಶ್ರೀನಿವಾಸ ಮತ್ತು ಪದ್ಮಾವತಿ ದೇವಿಯ ಕಲ್ಯಾಣೋತ್ಸವವು ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ನೆರವೇರಲಿದೆ. ಬೆಳಿಗ್ಗೆ 10 ಗಂಟೆಗೆ ಶ್ರೀನಿವಾಸ ದೇವರ ಕಲ್ಯಾಣೋತ್ಸವ, ಮಧ್ಯಾಹ್ನ 12 ಕ್ಕೆ ಮಹಾ ಮಂಗಳಾರತಿ ಹಾಗೂ ಮಧ್ಯಾಹ್ನ 1.30 ಗಂಟೆಗೆ ಮಹಾಪ್ರಸಾದ ವಿನಿಯೋಗ ಎಂದು ಕಮಿಟಿಯವರು ತಿಳಿಸಿದ್ದಾರೆ.

### ಆನೆಕೊಂಡ ಗ್ರಾಮದ ಕರಿಬಸಮ್ಮ ನಿಧನ



ದಾವಣಗೆರೆ ತಾಲ್ಲೂಕು ಆನೆಕೊಂಡ ಗ್ರಾಮದ ನಿವಾಸಿ ತಿರುಪತಿ ಇವರ ಪತ್ನಿ ಕರಿಬಸಮ್ಮ ಇವರು ದಿನಾಂಕ 5.1.2024ರ ಶುಕ್ರವಾರ ರಾತ್ರಿ 11.20ಕ್ಕೆ ನಿಧನರಾದರು. ಪತಿ, ಮೂವರು ಪುತ್ರರು, ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 6.1.2024ರ ಶನಿವಾರ ಮಧ್ಯಾಹ್ನ 1ಕ್ಕೆ ಗಾಂಧಿನಗರದ ಹಿಂದೂ ರುದ್ರಭೂಮಿಯಲ್ಲಿ ನರವೇರಲಿದೆ.

# ಮಹಾರಾಷ್ಟ್ರ : ರೋಹಿತ್ ಪವಾರ್ ಕಂಪನಿ ಮೇಲೆ ಜಾರಿ ನಿರ್ದೇಶನಾಲಯ ದಾಳಿ

ಮುಂಬೈ, ಜ. 5 – ಎನ್.ಸಿ.ಪಿ. ನಾಯಕ ಶರದ್ ಪವಾರ್ ಅವರ ಮೊಮ್ಮಗ ರೋಹಿತ್ ಪವಾರ್ ಅವರ ಮಾಲೀಕತ್ವದ ಕಂಪನಿ ಮೇಲೆ ಜಾರಿ ನಿರ್ದೇಶನಾಲಯ ದಾಳಿ ನಡೆಸಿದೆ. ಬಾರಾಮತಿ, ಪುಣೆ, ಪಿಂಪ್ರಿ ಹಾಗೂ ಔರಂಗಾಬಾದ್‌ನ ಆರು ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ. ರೋಹಿತ್ ಪವಾರ್ ಅವರು ಮೊದಲ ಬಾರಿಗೆ ಮಹಾರಾಷ್ಟ್ರದ ಕರ್ಜತ್ - ಜಮ್‌ಖೇಡಾದಿಂದ ಶಾಸಕರಾಗಿದ್ದಾರೆ. ಅವರು ಬಾರಾಮತಿ ಆಗ್ರೋ ಮಾಲೀಕತ್ವ ಹೊಂದಿದ್ದಾರೆ. ಅವರು ಶರದ್ ಪವಾರ್ ನೇತೃತ್ವದ ಎನ್.ಸಿ.ಪಿ. ಬಣದಲ್ಲಿದ್ದಾರೆ. ಮಹಾರಾಷ್ಟ್ರ ರಾಜ್ಯ ಸಹಕಾರಿ ಬ್ಯಾಂಕ್‌ನಲ್ಲಿ 2019ರಲ್ಲಿ ನಡೆದ ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕ್ರಮ ತೆಗೆದುಕೊಳ್ಳಲಾಗಿದೆ.

# ಗ್ರಾಮೀಣರ ಮನದಿಂಗಿತ ಅರಿಯಲು ಪಾದಯಾತ್ರೆ



### ಜಿ.ಬಿ. ವಿನಯ್ ಕುಮಾರ್

ನ್ಯಾಮತಿ, ಜ. 5 - ಕೇವಲ ಟಿಕೆಟ್ ಆಕಾಂಕ್ಷಿಯಾಗಿ ಅಲ್ಲ, ಒಬ್ಬ ಆಕಾಂಕ್ಷಿಯಾಗಿ ಜನಗಳ ನಡುವೆ ಬೆರೆತು ಅವರೊಂದಿಗೆ ಸಮಾಲೋಚನೆ ಮಾಡುವುದರಿಂದ ಅವರ ಮನದಿಂಗಿತವನ್ನು ಅರಿಯುವ ಉದ್ದೇಶದಿಂದ ನಾನು ಪಾದಯಾತ್ರೆ ಮಾಡುತ್ತಿರುವುದು ಎಂದು ಕಾಂಗ್ರೆಸ್ ಮುಖಂಡ ಜಿ.ಬಿ. ವಿನಯ್‌ಕುಮಾರ್ ಹೇಳಿದರು.

ನ್ಯಾಮತಿ ತಾಲ್ಲೂಕಿನ ಕೋಡಿಕೊಪ್ಪ ಗ್ರಾಮದಲ್ಲಿ 16 ದಿನದ ವಿನಯ ನಡಿಗೆ ಹಳ್ಳಿಯ ಕಡೆಗೆ ಪಾದಯಾತ್ರೆಯಲ್ಲಿ ಅವರು ಮಾತನಾಡಿದರು.

ಪಾದಯಾತ್ರೆ ಮೂಲಕ ಕ್ಷೇತ್ರದ ಪರಿಚಯ ಹಾಗೂ ರೈತರ, ಜನ ಸಾಮಾನ್ಯರ, ಮಹಿಳೆಯರ ಹಾಗೂ ವಿದ್ಯಾರ್ಥಿಗಳ ಸಮಸ್ಯೆಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಿದ್ದೇನೆ. ಅದರೆ ಇಲ್ಲಿನ ಸಂಸದರು ಹಳ್ಳಿಯ ಭಾಗಕ್ಕೆ ಬಂದಿಲ್ಲ. ಅವರ ಸಮಸ್ಯೆಗಳಿಗೆ ಪರಿಹಾರ ನೀಡಿಲ್ಲ.

ಚುನಾವಣೆಯ ಸಂದರ್ಭದಲ್ಲಿ ಮಾತ್ರ ಗ್ರಾಮೀಣ ಭಾಗಕ್ಕೆ ಮಾತ್ರ ಬರುತ್ತಾರೆ ನಿಮ್ಮಂತಹ ಯುವಕರು ರಾಜಕೀಯಕ್ಕೆ ಬರಬೇಕು ಕ್ಷೇತ್ರದಲ್ಲಿ ಬದಲಾವಣೆ ಆಗಬೇಕು ಕ್ಷೇತ್ರದಲ್ಲಿ ಹಿರಿಯರು ಹೇಳುತ್ತಿದ್ದು ಇದರಿಂದ ನಮಗೆ ಉತ್ಸಾಹ ಹೆಚ್ಚಿಸುವಂತೆ ಮಾಡಿದೆ ಟಿಕೆಟ್ ಆಕಾಂಕ್ಷಿಯಾದರೆ ಸಾಲದು, ಗ್ರಾಮಾಂತರ ಪ್ರದೇಶದಲ್ಲಿರುವ ಸಮಸ್ಯೆಗಳನ್ನು ಪಟ್ಟಿ ಮಾಡಿ ಅವುಗಳಿಗೆ ಪರಿಹಾರ ದೊರಕಿಸಿಕೊಡುವ, ಜನ ಸಾಮಾನ್ಯರ ಧ್ವನಿಯಾಗಿ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವ ಕುರಿತು ಸಲಹೆ, ಸೂಚನೆಗಳನ್ನು ಕೊಡುವ ಕೆಲಸವನ್ನು ಮಾಡುತ್ತಿದ್ದೇನೆ ಎಂದರು.

ಸಾರ್ವಜನಿಕರಿಂದ ಭವ್ಯ ಸ್ವಾಗತ ಸಿಕ್ಕಿದ್ದು ನಾಳೆ ನ್ಯಾಮತಿ ತಾಲ್ಲೂಕಿನಲ್ಲಿ ಪ್ರವಾಸ ಮುಂದುವರಿಸಲಿದ್ದು, ಚನ್ನಗಿರಿ ತಾಲ್ಲೂಕು ಹಾಲೇಶಪುರ ಗ್ರಾಮದಿಂದ ಶನಿವಾರದಿಂದ ಐದು ದಿನಗಳ ಪ್ರವಾಸ, ಮಾಯಕೊಂಡ ನಾಲ್ಕು ದಿನಗಳ ಪಾದಯಾತ್ರೆ, ಗ್ರಾಮ ವಾಸ್ತವ ಮಾಡುವುದಾಗಿ ಹೇಳಿದರು.

ಪಾದಯಾತ್ರೆಯಲ್ಲಿ ಕೋಡಿಕೊಪ್ಪ ಜಿ. ಶಿವಪ್ಪ, ಯೋಗೇಶಪ್ಪ, ಪ್ರವೀಣ್, ಲೋಕೇಶ್, ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ಅಪ್ಪಿನಕಟ್ಟೆ ರಂಜಿತ್, ಅಪ್ಪಿನಕಟ್ಟೆ ಶ್ರೀಧರ್, ಡಿಸ್. ಕರಿಬಸಪ್ಪ, ಸೇರಿದಂತೆ ಇನ್ನಿತರರು ಇದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas




# ಕನ್ನಡ ಪರ ಹೋರಾಟಗಾರರ ಬಿಡುಗಡೆಗೆ ಆಗ್ರಹಿಸಿ ರಕ್ತಪತ್ರ ಚಳವಳಿ

ದಾವಣಗೆರೆ, ಜ. 5-ಕರ್ನಾಟಕ ರಕ್ಷಣ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣ ಗೌಡ, ಪ್ರಧಾನ ಕಾರ್ಯದರ್ಶಿ ಸಣ್ಣೀರಪ್ಪ ಹಾಗೂ ವಿವಿಧ ರಾಜ್ಯ ಪದಾಧಿಕಾರಿಗಳು ಸೇರಿದಂತೆ 50 ಕ್ಕೂ ಹೆಚ್ಚು ಕಾರ್ಯಕರ್ತರನ್ನು ಬಂಧಿಸಿರುವ ರಾಜ್ಯ ಸರ್ಕಾರದ ಕ್ರಮ ಖಂಡಿಸಿ ವೇದಿಕೆ ಜಿಲ್ಲಾ ಘಟಕದ ವತಿಯಿಂದ ನಗರದ ಎವಿಕೆ ಕಾಲೇಜು ರಸ್ತೆಯಲ್ಲಿನ ವೇದಿಕೆ ಕಚೇರಿ ಬಳಿ ಇರುವ ಗುರುಭವನದಲ್ಲಿ ರಕ್ತ ಪತ್ರ ಚಳವಳಿ ನಡೆಸಲಾಯಿತು.

ಕರವೇ ಕಾರ್ಯಕರ್ತರು ರಕ್ತ ಪತ್ರ ಚಳವಳಿಯಲ್ಲಿ ಪಾಲ್ಗೊಂಡು ನಾರಾಯಣ ಗೌಡರು ಮತ್ತವರ ತಂಡವನ್ನು ಬಿಡುಗಡೆ ಮಾಡಬೇಕೆಂದು ರಕ್ತದಲ್ಲಿ ಬರೆದ ಪತ್ರವನ್ನು ಸಿದ್ಧರಾಮಯ್ಯ ಅವರಿಗೆ ಪೋಸ್ಟ್ ಮೂಲಕ ಕಳುಹಿಸಿದರು.

ಇದೇ ಸಂದರ್ಭದಲ್ಲಿ ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಮಾತನಾಡಿ, ಕನ್ನಡ ಭಾಷೆಯ ಉಳುವಿಗಾಗಿ ಮತ್ತು ರಾಜ್ಯದ ಅಸ್ಮಿತೆಗಾಗಿ ಬೆಂಗಳೂರಿನಲ್ಲಿರುವ ಅಂಗಡಿ ಮುಂಗಟ್ಟುಗಳು, ಮಾಲ್‌ಗಳ ನಾಮಫಲಕಗಳು ಕನ್ನಡದಲ್ಲಿ ಇರಬೇಕು ಎಂದು ಹೋರಾಟ ಮಾಡಿದವರನ್ನು ಬಂಧಿಸಿರುವುದು ಅತ್ಯಂತ ಖಂಡನೀಯ. ಕನ್ನಡಿಗರಿಗೆ ಉದ್ಯೋಗ ಕೊಡದೇ ಕನ್ನಡಿಗರ ಮೇಲೆ ದೌರ್ಜನ್ಯ ಎಸಗಿದವರ ವಿರುದ್ಧ ಸಮರ ಸಾರಿದ ಕರವೇ ರಾಜ್ಯಾಧ್ಯಕ್ಷ ನಾರಾಯಣಗೌಡ ಮತ್ತವರ ತಂಡದವರನ್ನು ಬಂಧಿಸಿದ್ದು, ಈ ಕೂಡಲೇ ಕನ್ನಡ ಹೋರಾಟಗಾರರ ಕೇಸುಗಳನ್ನು ವಾಪಾಸ್ ಪಡೆದು, ಬಂಧಿತರನ್ನು ಬಿಡುಗಡೆ ಮಾಡಬೇಕೆಂದು ಆಗ್ರಹಿಸಿದರು.

ಚಳವಳಿಯಲ್ಲಿ ಕರವೇ ಪದಾಧಿಕಾರಿಗಳಾದ ಗೋಪಾಲ್ ದೇವರಮನಿ, ಸುರೇಶ್, ಆಟೋ ರಫೀಕ್, ಜಿ.ಎಸ್. ಸಂತೋಷ್, ಸಂಜು, ದಾದಾಪೀರ್, ಗುರುಮೂರ್ತಿ, ರವಿಕುಮಾರ್, ಖಾದರ್ ಬಾಷಾ, ಧೀರೇಂದ್ರ, ಪರಮೇಶ್, ತುಳಸಿರಾಮ್, ಅನ್ವರ್ ಮತ್ತಿತರರು ಪಾಲ್ಗೊಂಡಿದ್ದರು.

# ಜಿಗಳಿ ಶಾಲೆಯಲ್ಲಿ ಕಲಿಕಾ ಆಂದೋಲನ



ಮಲೇಬೆನ್ನೂರು, ಜ.5- ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಗ್ರಾ.ಪಂ. ಮಟ್ಟದ ಗಣಿತ ಕಲಿಕಾ ಆಂದೋಲನ ಕಾರ್ಯಕ್ರಮವನ್ನು ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ರೂಪಾ ಸೋಮಶೇಖರ್ ಉದ್ಘಾಟಿಸಿದರು.

ಆಂದೋಲನದ ನೋಡಲ್ ಅಧಿಕಾರಿ ಕೆ.ಬೀರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ, ಶಿಕ್ಷಣ ಇಲಾಖೆಯು 4, 5 ಮತ್ತು 6ನೇ ತರಗತಿ ಮಕ್ಕಳನ್ನು ಹಿಂಜರಿಕೆ ಮನೋಭಾವದಿಂದ ಹೊರತರುವ ಉದ್ದೇಶದಿಂದ ಈ ಗಣಿತ ಕಲಿಕಾ ಆಂದೋಲನವನ್ನು ಗ್ರಾ.ಪಂ. ಮಟ್ಟದಲ್ಲಿ ಎಲ್ಲಾ ಶಾಲೆಗಳ ಮಕ್ಕಳನ್ನು ಒಂದೆಡೆ ಸೇರಿಸಿ, 1 ಗಂಟೆ ಅವಧಿಯ ಮತ್ತು 20 ಅಂಕಗಳ ಪ್ರಶ್ನೆ ಪತ್ರಿಕೆ ಕೊಟ್ಟು ಪರೀಕ್ಷೆ ಬರೆಸಿ, ನಂತರ ಅಲ್ಲಿಯೇ ಮೌಲ್ಯಮಾಪನ ಮಾಡಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಗುವುದೆಂದು ತಿಳಿಸಿದರು.

ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿ.ಆನಂದಪ್ಪ ಮಾತನಾಡಿ, ಗಣಿತದ ಬಗ್ಗೆ ಮಕ್ಕಳಲ್ಲಿರುವ ಭಯ ಹೋಗಲಾಡಿಸಲು ಇದೊಂದು ಉತ್ತಮ ಪ್ರಯತ್ನ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಎಸ್‌ಡಿಎಂಸಿ ಅಧ್ಯಕ್ಷ ಬಿ.ಪ್ರಭಾಕರ್ ಅಧ್ಯಕ್ಷತೆ ವಹಿಸಿದ್ದರು. ಎಸ್‌ಡಿಎಂಸಿ ಉಪಾಧ್ಯಕ್ಷೆ ರೇಣುಕಮ್ಮ ನಿಂಗಪ್ಪ, ಸದಸ್ಯರಾದ ಸುನೀತಾ ನಾಗರಾಜ್, ಮಂಜುಳಾ ನಾಗರಾಜ್, ಕವಿತಾ ಚೌಡಪ್ಪ, ಗಂಗಾಧರಚಾರಿ, ವಿಜಯ ಭಾಸ್ಕರ್, ಬಾಲಕೇಂದ್ರದ ಅಧ್ಯಕ್ಷ ಜಿ.ಆರ್. ಚಂದ್ರಪ್ಪ, ಜಿ.ಬೇವಿನಹಳ್ಳಿ ಎಸ್‌ಡಿಎಂಸಿ ಅಧ್ಯಕ್ಷ ಬಿ.ಕೆ. ನಿಂಗನಗೌಡ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಜಿ.ಪಿ. ಹನುಮಗೌಡ, ಪತ್ರಕರ್ತ ಪ್ರಕಾಶ್, ಸ್ವಯಂ ಸೇವಕರಾದ ಷಣ್ಮುಖಪ್ಪ, ಅರ್ಪಿತಾ, ಕಾವ್ಯ, ಲಕ್ಷ್ಮಿ, ಅನುಷಾ, ಸ್ನೇಹ, ಜಿ.ಬೇವಿನಹಳ್ಳಿ ಶಾಲೆಯ ಶಿಕ್ಷಕರಾದ ಪ್ರತಿಭಾ, ಹಾಲಮ್ಮ, ವಿಜಯಕುಮಾರ್, ಜಿಗಳಿ ಶಾಲೆಯ ಮುಖ್ಯ ಶಿಕ್ಷಕ ನಾಗೇಶ್, ಶಿಕ್ಷಕರಾದ ಮಲ್ಲಿಕಾರ್ಜುನ್, ಲಿಂಗರಾಜ್, ಗುಡ್ಡಪ್ಪ, ಶ್ರೀನಿವಾಸ್ ರೆಡ್ಡಿ ಮತ್ತಿತರರು ಭಾಗವಹಿಸಿದ್ದರು.

# ಸಾವನ್ನಪ್ಪಿದ ಮ್ಯಾನ್ ಹೋಲ್ ಸ್ಕ್ಯಾವೆಂಜರ್ಸ್‌ಗೆ ಪರಿಹಾರಕ್ಕೆ ಆಗ್ರಹ

ದಾವಣಗೆರೆ, ಜ.5- ಒಳಚರಂಡಿ ಗುಂಡಿಯಲ್ಲಿ ಇಳಿಸಿರುವುದರಿಂದ ಅಸ್ವಸ್ಥಗೊಂಡು ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿರುವ ಪರಶುರಾಮ್ ಅವರಿಗೆ ಸರ್ಕಾರದಿಂದ ಸೂಕ್ತ ಪರಿಹಾರ ನೀಡಬೇಕು ಹಾಗೂ ಪರಶುರಾಮ್ ಅವರನ್ನು ಒಳಚರಂಡಿಯಲ್ಲಿ ಇಳಿಸಿರುವ ಅಭಿಯಂತರರ ಮೇಲೆ ಸೂಕ್ತ ಕ್ರಮಕೈಗೊಳ್ಳಬೇಕೆಂದು ದಾವಣಗೆರೆ ಜಿಲ್ಲಾ ಅಖಿಲ ಕರ್ನಾಟಕ ಮ್ಯಾನ್ ಹೋಲ್ ಸ್ಕ್ಯಾವೆಂಜರ್ಸ್ ಸಫಾಯಿ ಕರ್ಮಚಾರಿಗಳ ಕ್ಷೇಮಾಭಿವೃದ್ಧಿ ಸಂಘ ಒತ್ತಾಯಿಸಿದೆ.

ಮಹಾನಗರ ಪಾಲಿಕೆಯ 25ನೇ ವಾರ್ಡಿನಲ್ಲಿ ಈ ಘಟನೆ ನಡೆದಿದ್ದು, ಸೂಪರ್‌ವೈಸರ್ ಆಗಿರುವ ಲಕ್ಷ್ಮಣ್ ಇವರು, ಒಳಚರಂಡಿ ಗುಂಡಿಯಲ್ಲಿ ಪರಶುರಾಮ್ ಅವರನ್ನು ಡಿ.31ರಂದು ಇಳಿಸಿದ್ದರು.

ಇದರಿಂದಾಗಿ ಅಸ್ವಸ್ಥರಾದ ಪರಶುರಾಮ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೇ ಅಂದು ಸಂಜೆಯೇ ಸಾವನ್ನಪ್ಪಿರುತ್ತಾರೆ.

ಈ ಬಗ್ಗೆ ಹಲವು ಬಾರಿ ದೂರು ದಾಖಲಿಸಿದ್ದರೂ ಸಹ ಯಾವುದೇ ಕ್ರಮಕೈಗೊಳ್ಳುತ್ತಿಲ್ಲ. ಘಟನೆಗೆ ಕಾರಣಕರ್ತರಾದವರ ಮೇಲೆ ಸೂಕ್ತ ಕಾನೂನಾತ್ಮಕ ಕ್ರಮ ಕೈಗೊಳ್ಳಬೇಕು ಮತ್ತು ಮೃತರ ಕುಟುಂಬದವರಿಗೆ ನ್ಯಾಯ ದೊರಕಿಸಿಕೊಡಬೇಕು. ಇಲ್ಲವಾದರೆ ಸ್ಕ್ಯಾವೆಂಜರ್ಸ್ ಸಂಘದ ವತಿಯಿಂದ ತೀವ್ರ ಹೋರಾಟ ನಡೆಸಲಾಗುವುದು ಎಂದು ಸಂಘದ ಜಿಲ್ಲಾಧ್ಯಕ್ಷ ಎನ್. ವಾಸುದೇವ ಎಚ್ಚರಿಸಿದ್ದಾರೆ.

ಮ್ಯಾನ್ಯುಯೆಲ್ ಸ್ಕ್ಯಾವೆಂಜರ್ಸ್‌ನ ರಾಜ್ಯಾದ್ಯಂತ ನಡೆದ ಘಟನೆಗಳನ್ನು ಬೆಂಗಳೂರಿನ ಉಚ್ಚ ನ್ಯಾಯಾಲಯದ ನ್ಯಾಯಪೀಠವು ಸ್ವಯಂಪ್ರೇರಿತವಾಗಿ ಪರಿಗಣಿಸಿ, ಪ್ರಕರಣವನ್ನು ವಿಚಾರಣೆಗೆ ದಾಖಲಿಸಿಕೊಂಡಿರುವುದಕ್ಕೆ ಕೃತಜ್ಞತೆ ಸಲ್ಲಿಸಿದ್ದಾರೆ.

# ಬೀದಿ ಬದಿ ವ್ಯಾಪಾರಸ್ಥರಿಗೆ ಸರ್ಕಾರದ ಸೌಲಭ್ಯ ಕೊಡಿಸಲು ಪ್ರಾಮಾಣಿಕ ಪ್ರಯತ್ನ : ಶಾಸಕ ಡಿ.ಜಿ. ಶಾಂತನಗೌಡ



ಬೀದಿ ಬದಿ ವ್ಯಾಪಾರಸ್ಥರಿಗೆ ರಸ್ತೆ ಬದಿ ಅತಿ ಹೆಚ್ಚು ವಾಹನ ನಿಲುಗಡೆಯಿಂದ ಅವರಿಗೆ ವ್ಯಾಪಾರ ಶೂನ್ಯ, ಶಕ್ತಿ ಯೋಜನೆಯಿಂದ ಬಸ್ ಫುಲ್ ಕಲೆಕ್ಷನ್ ನಿಲ್ ಎಂದು ಹೇಳಿದ ಶಾಸಕರು. ಅವಳಿ ತಾಲ್ಲೂಕಿನ ಬೀದಿ ಬದಿ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ನಾಗರಾಜ ಕಲ್ಕೇರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಪುರಸಭೆ ಮುಖ್ಯಾಧಿಕಾರಿ ನಿರಂಜನಿ, ಪೌರಕಾರ್ಮಿಕರ ಸಂಘದ ಅಧ್ಯಕ್ಷ ರವಿ, ಸಂಘದ ಗೌರವಾಧ್ಯಕ್ಷ ಇಡ್ಲಿಗಾಡಿ ಮಂಜಣ್ಣ, ಉಪಾಧ್ಯಕ್ಷ ಶಮಿಉಲ್ಲಾ, ಕಾರ್ಯದರ್ಶಿ ರೇಣುಕಾ ಗಜೇಂದ್ರಪ್ಪ ಕತ್ತಿಗೆ ನಾಗಣ್ಣ, ಸಂಘದ ಪದಾಧಿಕಾರಿಗಳು ಬೀದಿ ಬದಿ ವ್ಯಾಪಾರಸ್ಥರು ಇದ್ದರು.

ಹೊನ್ನಾಳಿ, ಜ.5- ಬೀದಿ ಬದಿ ವ್ಯಾಪಾರಸ್ಥರಿಗೆ ನಿವೇಶನ ಸೇರಿದಂತೆ, ಸರ್ಕಾರದಿಂದ ಸಿಗುವ ಸೌಲಭ್ಯಗಳು ಸಿಗುವಂತೆ ಪ್ರಮಾಣಿಕವಾಗಿ ಕೆಲಸ ಮಾಡುತ್ತೇನೆ ಎಂದು ಶಾಸಕ ಡಿ.ಜಿ.ಶಾಂತನಗೌಡ ಹೇಳಿದರು.

ಪಟ್ಟಣದ ಕನಕ ರಂಗಮಂದಿರದಲ್ಲಿ 'ಸುವರ್ಣ ಕರ್ನಾಟಕ ವರ್ಷಾಚರಣೆ' ಪ್ರಯುಕ್ತ ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕುಗಳ ಬೀದಿ ಬದಿ ವ್ಯಾಪಾರಸ್ಥರ ಸಂಘದ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು,

ಪಟ್ಟಣದ ಸಂಗೊಳ್ಳಿ ರಾಯಣ್ಣ ವೃತ್ತದಿಂದ ತಾಲ್ಲೂಕು ಕಛೇರಿವರೆಗೆ ರಸ್ತೆ ಇಕ್ಕಟ್ಟಾಗಿರುವುದರಿಂದ ಮತ್ತು ಜನಸಂಖ್ಯೆ ಹೆಚ್ಚಾಗಿ ದ್ವಿಚಕ್ರ ವಾಹನಗಳ ಸಂಖ್ಯೆ ಹೆಚ್ಚಾಗಿ, ರಸ್ತೆಬದಿಯಲ್ಲಿ ನಿಲ್ಲುತ್ತಿರುವುದರಿಂದ ಟ್ರಾಫಿಕ್ ಹೆಚ್ಚಾಗುತ್ತಿರು ವುದರಿಂದ ನಾನು ಬರುವಾಗಲೇ ಟ್ರಾಫಿಕ್ ಜಾಮ್ ಆಗುತ್ತದೆ. ಬೀದಿ ಬದಿ ವ್ಯಾಪಾರಸ್ಥರಿಗೆ ವ್ಯಾಪಾರ ಮಾಡಲು ನಿತ್ಯ ಕಿರಿಕಿರಿಯಾಗುತ್ತದೆ. ಪಟ್ಟಣದ ಅಗಳ ಮೈದಾನದಲ್ಲಿ ಎಲ್ಲಾ ದ್ವಿಚಕ್ರ ವಾಹನಗಳಿಗೆ ನಿಲುಗಡೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿದರೆ, ಬೀದಿ ಬದಿ ವ್ಯಾಪಾರಸ್ಥರು ಸುಗಮವಾಗಿ ವ್ಯಾಪಾರ ಮಾಡಬಹುದು ಎಂದರು.

ಪುರಸಭೆಯಲ್ಲಿ ಆಡಳಿತ ಮಂಡಳಿ ಸಮಿತಿ ರಚನೆಯಾದ ನಂತರ ಸಭೆ ನಡೆಸಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿ, ಸರ್ಕಾರದ ಜಾಗವನ್ನು ಗುರುತಿಸಿ ಯೋಧರಿಗೆ, ಪತ್ರಕರ್ತರಿಗೆ, ಬೀದಿ ಬದಿ ವ್ಯಾಪಾರಸ್ಥರಿಗೆ ನಿವೇಶನ ಕೊಡುವುದಾಗಿ ಭರವಸೆ ನೀಡಿದರು.

ಪಿಎಂ ಯೋಜನೆಯಿಂದ ಬೀದಿ ಬದಿ ವ್ಯಾಪಾರಸ್ಥರು ಮತ್ತು ಪ್ರತಿಯೊಬ್ಬ ಸಾರ್ವಜನಿಕರು ವರ್ಷಕ್ಕೆ 20 ರೂ.ಗಳನ್ನು ಕಟ್ಟಿ ಇನ್ಸೂರೆನ್ಸ್ ಮಾಡಿಸಿದರೆ ಆಕಸ್ಮಿಕ ಮತ್ತು ಆಕ್ಸಿಡೆಂಟ್‌ನಲ್ಲಿ ಮರಣ ಹೊಂದಿದರೆ 2 ಲಕ್ಷ ರೂ. ಇನ್ಸೂರೆನ್ಸ್ ಬರುತ್ತದೆ. ಕುಟುಂಬಸ್ಥರಿಗೆ ಅನುಕೂಲವಾಗುತ್ತದೆ. ಪ್ರತಿನಿತ್ಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಆಕ್ಸಿಡೆಂಟ್‌ನಿಂದ 4 ರಿಂದ 5 ಜನರು ಸಾವನ್ನಪ್ಪುತ್ತಿದ್ದಾರೆ. ಇದರಲ್ಲಿ ಶೇ.90 ರಷ್ಟು ಆಕ್ಸಿಡೆಂಟ್ ಕೇಸುಗಳೇ ಹೆಚ್ಚಾಗಿರುತ್ತವೆ ಎಂದರು.

ಸಿಐಟಿಯು ಜಿಲ್ಲಾ ಸಂಚಾಲಕ ಆನಂದರಾವ್ ಪ್ರಾಸ್ತಾವಿಕವಾಗಿ ಮಾತನಾಡಿ, ಬೀದಿ ಬದಿ ವ್ಯಾಪಾರಸ್ಥರು ಕೊರೊನಾದಿಂದ ಆರ್ಥಿಕ ಸಂಕಷ್ಟದಲ್ಲಿದ್ದಾರೆ. ಅವರ ನೆಮ್ಮದಿ ಬದುಕಿಗಾಗಿ ಸ್ಥಳೀಯ ಆಡಳಿತದಿಂದ ಕಿರಿಕಿರಿ ತಪ್ಪಿಸಬೇಕು ಮತ್ತು ಪ್ರತಿಯೊಬ್ಬರಿಗೂ ನಿವೇಶನ ನೀಡಬೇಕು, ಐಡಿ ಕಾರ್ಡ್ ನೀಡಬೇಕು. ಬ್ಯಾಂಕ್‌ನಲ್ಲಿ ಸುಲಭವಾಗಿ ಸಾಲ ಸೌಲಭ್ಯ ಸಿಗುವಂತೆ ಶಾಸಕರು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ದಾವಣಗೆರೆ ಎಸ್‌ಬಿಐ ಲೀಡ್ ಬ್ಯಾಂಕ್ ಮ್ಯಾನೇಜರ್ ಶಿವಪ್ಪ ಮಾತನಾಡಿ, ಪ್ರತಿ ಬೀದಿ ಬದಿ ವ್ಯಾಪಾರಸ್ಥರು ಸಾಲ ಸೌಲಭ್ಯ ಪಡೆದು ಮರುಪಾವತಿಸಿದರೆ, ಹೆಚ್ಚು ಸಾಲ ಸೌಲಭ್ಯ ಕೊಡಲಾಗುವುದು. ಜಿಲ್ಲೆಯಲ್ಲಿ 436 ಬೀದಿ ಬದಿ ವ್ಯಾಪಾರಸ್ಥರು ನ್ಯಾಚುರಲ್ ಮರಣ ಹೊಂದಿದವರಿಗೆ 2 ಲಕ್ಷ ರೂ ಇನ್ಸೂರೆನ್ಸ್ ಸೌಲಭ್ಯ ದೊರಕಿದೆ ಎಂದು ಮಾಹಿತಿ ನೀಡಿದರು.

ಪ್ರಜಾಪರಿವರ್ತನೆ ವೇದಿಕೆ ರಾಜ್ಯ ಪ್ರಧಾನ ಕಾರ್ಯದರ್ಶಿ ಎ.ಡಿ.ಈಶ್ವರಪ್ಪ ಮಾತನಾಡಿ, ಬೀದಿ ಬದಿ ವ್ಯಾಪಾರಸ್ಥರು ನಿತ್ಯ ದುಡಿಯುವ ವರ್ಗವಾಗಿದ್ದು, ಅವರು ಕಿರಿಕಿರಿ ಮತ್ತು ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಸುಗಮವಾಗಿ ವ್ಯಾಪಾರ ಮಾಡಲು ಅವಕಾಶ ಕಲ್ಪಿಸಿಕೊಡುವ ವ್ಯವಸ್ಥೆಯಾಗಬೇಕು ಎಂದರು.

ವಕೀಲ ಮಡಿವಾಳ ಚಂದ್ರಪ್ಪ ಮಾತನಾಡಿ, ನ್ಯಾಯಾಲದಿಂದ ಉಚಿತ ಕಾನೂನು ಪಡೆಯಲು ಮಾಹಿತಿ ನೀಡಿದರು.

ಬೀದಿ ಬದಿ ವ್ಯಾಪಾರಸ್ಥರ ಸಂಘದ ವತಿಯಿಂದ ಬೀದಿ ಬದಿ ವ್ಯಾಪಾರಸ್ಥರಿಗೆ ಐಡಿ ಕಾರ್ಡ್ ವಿತರಿಸಲಾಯಿತು. ಮಹಿಳೆ ಮತ್ತು ಪುರುಷ ಪೌರ ಕಾರ್ಮಿಕರಿಗೆ ಬೀದಿ ಬದಿ ವ್ಯಾಪಾರಸ್ಥರ ಸಂಘದ ವತಿಯಿಂದ ಉಚಿತವಾಗಿ ಬಟ್ಟೆಯನ್ನು ಶಾಸಕರಿಂದ ವಿತರಿಸಲಾಯಿತು.

## ಹೊಸಬಿಸಲೇರಿಯಲ್ಲಿ ಇಂದಿನಿಂದ 12 ರವರೆಗೆ ಎನ್ನೆಸ್ಸೆಸ್ ಶಿಬಿರ

ದಾವಣಗೆರೆ : ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರವು ಇಂದಿನಿಂದ ದಿನಾಂಕ 12 ರವರೆಗೆ ಪ್ರತಿದಿನ ಸಂಜೆ 6 ಗಂಟೆಗೆ ತಾಲ್ಲೂಕಿನ ಹೊಸಬಿಸಲೇರಿ ಗ್ರಾಮದಲ್ಲಿ ನಡೆಯಲಿದೆ.

ಇಂದು ವಾರ್ಷಿಕ ವಿಶೇಷ ಶಿಬಿರದ ಉದ್ಘಾಟನಾ ಸಮಾರಂಭವನ್ನು ಶಾಸಕ ಶಾಮನೂರು ಶಿವಶಂಕರಪ್ಪ ನೆರವೇರಿಸಲಿದ್ದು, ಶ್ರೀ ದೇವರಾಜ ಅರಸು ವಿದ್ಯಾಸಂಸ್ಥೆಯ ಕಾರ್ಯದರ್ಶಿ ಎಲ್.ಭರತ್ ಅಧ್ಯಕ್ಷತೆ ವಹಿಸಲಿದ್ದಾರೆ. ಕಾಲೇಜಿನ ಪ್ರಾಂಶುಪಾಲ ಪ್ರೊ. ಎಂ.ಡಿ.ಅಣ್ಣಯ್ಯ ಉಪಸ್ಥಿತರಿರುವರು. ಕಾರ್ಯ ಕ್ರಮ ಸಂಯೋಜನಾಧಿಕಾರಿ ಡಾ. ಅಶೋಕಕುಮಾರ್ ವಿ. ಪಾಳೇದ್, ಗ್ರಾ.ಪಂ ಅಧ್ಯಕ್ಷರಾದ ಪೂಜಾ, ಉಪಾಧ್ಯಕ್ಷರಾದ ಮಂಜಮ್ಮ ಮತ್ತಿತರರು ಪಾಲ್ಗೊಳ್ಳುವರು.

ನಾಳೆ ದಿನಾಂಕ 7 ರಿಂದ 11 ರವರೆಗೆ ಹಲವು ಗಣ್ಯರ ನೇತೃತ್ವದಲ್ಲಿ ಕಾರ್ಯಕ್ರಮಗಳು ಮತ್ತು ಅರಿವು ಕಾರ್ಯಾಗಾರ ಜರುಗಲಿದ್ದು, ಇದೇ ದಿನಾಂಕ 12 ರಂದು ಬೆಳಿಗ್ಗೆ 11 ಕ್ಕೆ ನಡೆಯಲಿರುವ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಪ್ರೊ. ಎಂ.ಡಿ.ಅಣ್ಣಯ್ಯ ವಹಿಸುವರು. ಮುಖ್ಯ ಅತಿಥಿಗಳಾಗಿ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಸೋಮಶೇಖರ ಕಿಚಡಿ, ಸಂಯೋಜ ನಾಧಿಕಾರಿ ಡಾ.ಅಶೋಕಕುಮಾರ್ ವಿ.ಪಾಳೇದ್, ಗ್ರಾ.ಪಂ ಮಾಜಿ ಸದಸ್ಯ ಬಿ.ಎಂ. ಶಿವಕುಮಾರ್, ಸಹಾಯಕ ಪ್ರಾಧ್ಯಾಪಕ ಹೆಚ್. ಶಾಂತನಾಯ್ಕ್, ಕಾಡಜ್ಜಿ ಶಿವಪ್ಪ ಭಾಗವಹಿಸಲಿದ್ದಾರೆ.

## ಕೊಪ್ಪ : ಇಂದು ಎನ್ನೆಸ್ಸೆಸ್ ಸಮಾರೋಪ ಸಮಾರಂಭ

ಮಲೇಬೆನ್ನೂರಿನ ಶ್ರೀ ಬೀರಲಿಂಗೇಶ್ವರ ಪ್ರಥಮ ದರ್ಜೆ ಕಾಲೇಜು ವತಿಯಿಂದ ಕೊಪ್ಪ ಗ್ರಾಮದಲ್ಲಿ ಹಮ್ಮಿಕೊಂಡಿದ್ದ 7 ದಿನಗಳ ಎನ್ನೆಸ್ಸೆಸ್ ಶಿಬಿರದ ಸಮಾರೋಪ ಸಮಾರಂಭವನ್ನು ಇಂದು ಸಂಜೆ 6 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಶಿಬಿರದ ಕಾರ್ಯಕ್ರಮಾಧಿಕಾರಿ ತಿಪ್ಪಣ್ಣ ಕಬ್ಬಾರ್ ತಿಳಿಸಿದ್ದಾರೆ.

ಸಾನ್ನಿಧ್ಯ : ಶ್ರೀ ಸದ್ಗುರು ಮುರುಳೀಧರ ಸ್ವಾಮೀಜಿ, ಅಧ್ಯಕ್ಷತೆ : ಪಿ.ಬಸಪ್ಪ, ಸಮಾರೋಪ ಭಾಷಣ : ಗೊಲ್ಲರಹಳ್ಳಿ ಮಂಜುನಾಥ್, ವಿಶೇಷ ಆಹ್ವಾನಿತರು : ನಂದಿಗಾವಿ ಶ್ರೀನಿವಾಸ್, ಮುಖ್ಯ ಅತಿಥಿಗಳು : ಡಾ. ಅಶೋಕ್ ಕುಮಾರ್ ಪಾಳೇದ್, ಪಿ.ರೇವಣಪ್ಪ, ಪಿ.ಬಿ. ಕರಿಯಪ್ಪ, ಬಿ.ಹೆಚ್.ನಾಗೇಂದ್ರಪ್ಪ, ಪೂಜಾರ್ ಹಾಲೇಶಪ್ಪ, ಪಿ.ಎಸ್.ಹನುಮಂತಪ್ಪ, ಪಿ.ನಿಂಗಪ್ಪ, ಆರ್.ರಾಜಪ್ಪ, ಎಸ್.ಜಿ.ಪರಮೇಶ್ವರಪ್ಪ ಮತ್ತಿತರರು.

# ಮಲೇಬೆನ್ನೂರಿನಲ್ಲಿ ಮಂತ್ರಾಕ್ಷತೆ ವಿತರಣೆಗೆ ಚಾಲನೆ



ಮಲೇಬೆನ್ನೂರು, ಜ.5- ಶ್ರೀರಾಮ ಜಟಾಯು ಪಕ್ಷಿ, ಶಬರಿ, ವಾಲಿ ಸುಗ್ರೀವ ಮತ್ತು ಹನುಮಂತ ಹೀಗೆ ಸರ್ವರಿಗೂ ಸ್ನೇಹ ನೀಡಿದ್ದಾರೆ ಎಂದು ರಾಷ್ಟ್ರೀಯ ಸ್ವಯಂ ಸಂಘದ ಪ್ರಮುಖ ಗಿರೀಶ್ ಹೇಳಿದರು. ಅವರು ಮಲೇಬೆನ್ನೂರು ಪಟ್ಟಣದ ನೀರಾವರಿ ಇಲಾಖೆ ಆವರಣದಲ್ಲಿ ಚೌಡೇಶ್ವರಿ ದೇವಾಲಯದಲ್ಲಿ ಶ್ರೀರಾಮಲಲ್ಲಾಗೆ ಪ್ರಾಣ ಪ್ರತಿಷ್ಠಾಪನೆಗೆ ಆಹ್ವಾನ ನೀಡುವ ಮಂತ್ರಾ ಕ್ಷತೆಗೆ ಚಾಲನೆ ನೀಡಿ ಮಾತನಾಡಿದರು.

1949ರ ನಂತರ ಶ್ರೀ ರಾಮನ ವಿಗ್ರಹ ಮೂರ್ತಿ ಪ್ರತ್ಯಕ್ಷವಾಗಿದ್ದು, ಆ ಸ್ಥಳದಲ್ಲಿ ರಾಮನ ಮೂರ್ತಿ ಪೂಜೆಗೆ ಅವಕಾಶ ನೀಡಬೇಕೆಂದು ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, 1990 ರಲ್ಲಿ ಪ್ರಥಮ, ಬಾರಿಗೆ ನಂತರ 1992ರಲ್ಲಿ ಎರಡನೇ ಬಾರಿಗೆ ಲಕ್ಷಾಂತರ ಜನಸೇವಕರು ಕರಸೇವೆ ಮಾಡಿ ಯಶಸ್ವಿಯಾದರು. 2019ರಲ್ಲಿ ಸರ್ವೋಚ್ಚ ನ್ಯಾಯಾಲಯ ಬಾಬರಿ ಮಸೀದಿ ಎನ್ನುವ ಸ್ಥಳವು ಶ್ರೀರಾಮನಿಗೆ ಸೇರಿದ್ದು ಎಂದು ಮಹತ್ವದ ತೀರ್ಪು ನೀಡಿತು ಎಂದರು.

ಜನವರಿ 22 ರಂದು ಮಧ್ಯಾಹ್ನ 12 ಗಂಟೆಗೆ ಮನೆ ಮುಂಭಾಗ ಶ್ರೀರಾಮನ ಹೆಸರಲ್ಲಿ ಕನಿಷ್ಠ ಐದು ದೀಪ ಹಚ್ಚಿ, ಹತ್ತಾರು ಜನ ಸೇರಿ ಶ್ರೀ ರಾಮನ ಪ್ರಾಣ ಪ್ರತಿಷ್ಠಾಪನೆಯನ್ನು ದೇವಾಲಯದಲ್ಲಿ, ಮನೆಯಲ್ಲಿ ಟಿವಿ ನೇರ ಪ್ರಸಾರದಲ್ಲಿ ವೀಕ್ಷಿಸಿ ಎಂದು ಕರೆ ನೀಡಿದರು.

ಭಾಜಪ ಯುವಕರಾದ ಗೌಡ್ರ ಶ್ರೀನಿವಾಸ್, ಪ್ರಕಾಶಚಾರ್ ಹಾಗೂ ಅಕ್ಕನ ಬಳಗದ ಮಹಿಳೆಯರು, ಮಕ್ಕಳು ಹಾಜರಿದ್ದು, ತಂಡವಾಗಿ ವಿವಿಧ ವಾರ್ಡ್ ಗಳಲ್ಲಿ ಮನೆ - ಮನೆಗೆ ತೆರಳಿ ಮಂತ್ರಾಕ್ಷತೆ ನೀಡಿದರು. ಮಕ್ಕಳು ಶ್ರೀರಾಮ, ಸೀತಾಮಾತೆ, ಹನುಮಂತ, ಲಕ್ಷ್ಮಣ್ ಮತ್ತಿತರೆ ವೇಷ ಹಾಕಿ ಗಮನ ಸೆಳೆದರು.

## ಅತಿಥಿ ಉಪನ್ಯಾಸಕರ ಖಾಯಂಗೆ ಎಎಪಿ ಜಿಲ್ಲಾ ಸಮಿತಿ ಒತ್ತಾಯ

ದಾವಣಗೆರೆ, ಜ.5- ರಾಜ್ಯದಲ್ಲಿ ಶ್ರಮ ವಹಿಸಿ ಸೇವೆ ಸಲ್ಲಿಸುತ್ತಿರುವ ಲಕ್ಷಾಂತರ ಅತಿಥಿ ಉಪನ್ಯಾಸಕರನ್ನು ಸರ್ಕಾರ ಕೂಡಲೇ ಖಾಯಂಗೊಳಿಸಬೇಕೆಂದು ಆಮ್ ಆದ್ಮಿ ಪಕ್ಷದ ಜಿಲ್ಲಾ ಘಟಕ ಒತ್ತಾಯಿಸಿದೆ.

ಅತಿಥಿ ಉಪನ್ಯಾಸಕರು ಅತಿ ಕಡಿಮೆ ವೇತನದಲ್ಲಿ ತಮ್ಮ ವಿದ್ಯೆಯನ್ನು ದಾನ ಮಾಡಿ, ವಿದ್ಯಾರ್ಥಿಗಳ ಮತ್ತು ರಾಜ್ಯದ ಏಳಿಗೆಗಾಗಿ ಹಗಲು - ರಾತ್ರಿ ಲೆಕ್ಕಿಸದೇ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತಿದ್ದಾರೆ. ಪ್ರಪಂಚದಲ್ಲಿ ದೊಡ್ಡ ಹುದ್ದೆಯಲ್ಲಿದ್ದು ಮತ್ತು ಹೆಚ್ಚು ಸಂಬಳ ಪಡೆದು ಜೀವಿಸಲು ಗುರುಗಳ ವಿದ್ಯಾದಾನವೇ ಕಾರಣ ಎಂದು ಸರ್ಕಾರ ಈಗಾಗಲೇ ತಿಳಿದಿರುತ್ತದೆ. ಆದರೆ, ಅಂತಹ ಗುರುಗಳಿಗೆ ಅನ್ಯಾಯ ಮಾಡುತ್ತಿದೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಕೆ. ಎಸ್. ಶಿವಕುಮಾರಪ್ಪ ದೂರಿದ್ದಾರೆ.

ಈಗಾಗಲೇ ಕೆಲವು ರಾಜ್ಯಗಳಲ್ಲಿ ಅದರಲ್ಲೂ ಆಮ್ ಆದ್ಮಿ ಪಕ್ಷ ಅಧಿಕಾರದಲ್ಲಿರುವ ರಾಜ್ಯದಲ್ಲಿ ಯಾವ ಅತಿಥಿ ಉಪನ್ಯಾಸಕರು ಇರುವುದಿಲ್ಲ. ಇದ್ದರೆ ಅವರೆಲ್ಲರನ್ನೂ ಖಾಯಂಗೊಳಿಸಿ, ಅವರಿಗೆ ಖಾಯಂ ಉಪನ್ಯಾಸಕರ ಹಾಗೆಯೇ ವೇತನ ಕೊಡಲಾಗುತ್ತಿದೆ. ಅದೇ ಮಾದರಿಯಲ್ಲಿ ರಾಜ್ಯದಲ್ಲಿಯೂ ಸಹ ಅತಿಥಿ ಉಪನ್ಯಾಸಕರನ್ನು ಖಾಯಂ ಗೊಳಿಸಿ, ಉತ್ತಮ ವೇತನ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

## ನಗರದಲ್ಲಿ ಇಂದು ಸಮಾರೋಪ

ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ವಿಜ್ಞಾನ ಪದವಿ ಪೂರ್ವ ಕಾಲೇಜು ವತಿಯಿಂದ ವಿದ್ಯಾರ್ಥಿ ವೇದಿಕೆ, ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭವನ್ನು ಇಂದು ಬೆಳಿಗ್ಗೆ 11 ಕ್ಕೆ ಕಾಲೇಜಿನ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಬಾಪೂಜಿ ವಿದ್ಯಾಸಂಸ್ಥೆ ಸದಸ್ಯ ಡಾ. ಸಂಪಣ್ಣ ವಿ. ಮುತಾಲಿಕ್, ಕಾಲೇಜಿನ ಹಳೆಯ ವಿದ್ಯಾರ್ಥಿ ಹೆಚ್.ಬಿ. ಅಭಿಲಾಷ್, ಹರಿಹರದ ಉಪ ವಿಭಾಗ ಅರಣ್ಯಾಧಿಕಾರಿ ಮಹಮ್ಮದ್ ಖಾಲಿದ್ ಪಾಲ್ಗೊಳ್ಳಲಿದ್ದು, ಶೈಕ್ಷಣಿಕ ಸಲಹೆಗಾರ ಜಗನ್ನಾಥ ನಾಡಿಗೇರ್ ಸಮಾರೋಪ ಭಾಷಣ ಮಾಡುವರು. ಅಧ್ಯಕ್ಷತೆಯನ್ನು ಪ್ರಾಂಶುಪಾಲ ಪ್ರೊ. ಎಂ.ಪಿ. ರುದ್ರಪ್ಪ ವಹಿಸುವರು.

## ಇಸ್ರೋ : ದಕ್ಷತೆಯ ಬ್ಯಾಟರಿ ಪರೀಕ್ಷೆ

ಬೆಂಗಳೂರು, ಜ. 5 – ಹೆಚ್ಚು ದಕ್ಷತೆ ಹೊಂದಿರುವ ಹಾಗೂ ಕಡಿಮೆ ವೆಚ್ಚದ ಬ್ಯಾಟರಿ ಪರೀಕ್ಷಿಸಿರುವುದಾಗಿ ಇಸ್ರೋ ತಿಳಿಸಿದೆ.

10 ಎ.ಹೆಚ್. ಸಿಲಿಕಾನ್ - ಗ್ರಾಫೈಟ್ - ಆನೋಡ್ ಆಧರಿತ ಹೆಚ್ಚಿನ ಇಂಧನ ಸಾಂದ್ರತೆಯ ಲಿಯಾನ್ ಬ್ಯಾಟರಿಗಳ ಪರೀಕ್ಷೆ ಮಾಡಲಾಗಿದೆ. ಇವು ಕಡಿಮೆ ತೂಕ ಹಾಗೂ ಕಡಿಮೆ ವೆಚ್ಚದ್ದಾಗಿವೆ ಎಂದು ಇಸ್ರೋ ಹೇಳಿಕೆಯಲ್ಲಿ ತಿಳಿಸಲಾಗಿದೆ.

# ಪ್ರತಾಪ್ ಸಿಂಹ ಪರ ನಿಂತ ಗೌಡರು



ಬೆಂಗಳೂರು, ಜ. 5 - ಮೈಸೂರು ಸಂಸದ ಪ್ರತಾಪ್ ಸಿಂಹ ಪರ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಬ್ಯಾಟ್ ಬೀಸಿದ್ದಾರೆ.

ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರುಗಳು, ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ವಿರುದ್ಧ ಧ್ವನಿ ಎತ್ತುವವರನ್ನು ಅಡಗಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ಹಾಸನದಲ್ಲಿ ನಡೆದ ಘಟನೆ ಮುಚ್ಚಿಡುವ ಪ್ರಯತ್ನವನ್ನು ಮುಖ್ಯಮಂತ್ರಿ ಮಾಡಿದ್ದಾರೆ. ಪ್ರತಾಪ್ ಸಿಂಹ ಅವರ ತಮ್ಮನ ವಿರುದ್ಧ ಮರ ಕಡಿದ ಆರೋಪ ಮಾಡಿ ಜೈಲಿಗೆ ಕಳುಹಿಸುವ ಹುನ್ನಾರ ನಡೆಸಿದರು. ಇದೇ ವಿಷಯಕ್ಕೆ ಅರಣ್ಯ ಇಲಾಖೆಯ ಐವರು ಅಧಿಕಾರಿಗಳನ್ನು ಅಮಾನತ್ತು ಮಾಡಿದರು ಎಂದು ಆರೋಪಿಸಿದರು.

ಅನುಮತಿ ಇಲ್ಲದೆ ಮರ ಕಡಿದಿರುವ ಬಗ್ಗೆ ತಹಸೀಲ್ದಾರರಿಂದ ವರದಿ ಸರ್ಕಾರಕ್ಕೆ ಹೋಗಿತ್ತಾ? ಎಂದು ಪ್ರಶ್ನಿಸಿದ ಅವರು, ಮನೆ ನವೀಕರಣ ಸಂದರ್ಭದಲ್ಲಿ ಮರ ಕಡಿದಿರುವ ಬಗ್ಗೆ ವರದಿ ನೀಡಿದ್ದಾರೆ. ಅಲ್ಲಿ ಮರ ಕಡಿದವರು ಜಯಮ್ಮ ಮತ್ತು ರವಿ ಎನ್ನುವವರು. ಅದಕ್ಕೂ ವಿಕ್ರಮ್ ಸಿಂಹಗೂ ಏನೂ ಸಂಬಂಧವಿಲ್ಲ. ಜಯಮ್ಮ, ರವಿ ಅವರ ವಿರುದ್ಧ ಪ್ರಕರಣ ದಾಖಲಾಗಿದೆ.

ಮುಖ್ಯಮಂತ್ರಿ ಹೇಳಿದ ನಂತರ ವಿಕ್ರಮ್ ಸಿಂಹ ವಿರುದ್ಧ ಎ-3 ಪ್ರಕರಣ ದಾಖಲಿಸಿದ್ದಾರೆ. ಜಯಮ್ಮ ಎನ್ನುವವರು ತಮ್ಮ ಮನೆಯನ್ನು ವಿಕ್ರಮ್ ಸಿಂಹ ಅವರಿಗೆ 2027ರ ವರೆಗೆ ಲೀಸ್ ಮಾಡಿಕೊಟ್ಟಿದ್ದಾರೆ.

ಭೂಮಿ ಮತ್ತು ಮನೆಯ ಒಡೆತನ ಜಯಮ್ಮಗೆ ಸೇರಿದ್ದು. ಅಲ್ಲಿ ವಿಕ್ರಮ್‌ಗೆ ಯಾವುದೇ ಹಕ್ಕು ಇರುವುದಿಲ್ಲ, ಅಲ್ಲಿನ ಅಧಿಕಾರಿಗಳು ಮುಖ್ಯಮಂತ್ರಿ ಅವರಿಗೆ ತಪ್ಪು ವರದಿ ನೀಡಿ ಬಲಿಯಾಗಿಸಿದ್ದಾರೆ.

ಮುಖ್ಯಮಂತ್ರಿ ಅವರನ್ನು ಓಲೈಸಿಕೊಳ್ಳಲು ಅಧಿಕಾರಿಗಳು ಮಾಡಿದ ತಪ್ಪಿಗೆ ನ್ಯಾಯಾಲಯದಲ್ಲೂ ಅವರಿಗೆ ಛೀಮಾರಿ ಆಗಿದೆ. ಮಂಡ್ಯದಲ್ಲಿ ಆಡಳಿತ ಪಕ್ಷದ ವಿಧಾನ ಪರಿಷತ್ ಸದಸ್ಯರು ತಾವೇ ನಿಂತು ಮರ ಕಡಿಸಿದರೂ ಅವರ ವಿರುದ್ಧ ಪ್ರಕರಣ ದಾಖಲಾಗಲಿಲ್ಲ.

ಪ್ರತಾಪ್ ಸಿಂಹ ಅವರನ್ನು ಪ್ರಕರಣದಲ್ಲಿ ಸಿಲುಕಿಸಲು ಸರ್ಕಾರ ಅಧಿಕಾರ ದುರ್ಬಳಕೆ ಮಾಡಿಕೊಂಡಿದೆ ಎಂದು ದೂರಿದರು.

# ಮೂರು ಉಪಮುಖ್ಯಮಂತ್ರಿಗಳ ಹುದ್ದೆಗೆ ಬೇಡಿಕೆ

## ಪರಮೇಶ್ವರ್ ಸಿಎಂ ಮಾಡಲು ಪರಿಶಿಷ್ಟ ಸಚಿವರ ಆಸಕ್ತಿ

ಬೆಂಗಳೂರು, ಜ. 5 - ಎಐಸಿಸಿ ಅಧಿಕಾರ ಸೂತ್ರದಂತೆ ಸಿದ್ದರಾಮಯ್ಯ ಅವರು ಅಧಿಕಾರದಿಂದ ಕೆಳಗಿಯುತ್ತಿದ್ದಂತೆ ಆ ಜಾಗಕ್ಕೆ ಜಿ. ಪರಮೇಶ್ವರ್ ತರಲು ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದ ಸಚಿವರು ಆಸಕ್ತಿ ಹೊಂದಿದ್ದಾರೆ. ಮೂವರು ಉಪ ಮುಖ್ಯಮಂತ್ರಿಗಳನ್ನು ತಕ್ಷಣವೇ ನೇಮಿಸುವಂತೆ ವರಿಷ್ಠರಿಗೆ ಮನವಿ ಮಾಡಲು ಈ ವರ್ಗದ ಸಚಿವರು ನಿರ್ಧರಿಸಿದ್ದಾರೆ.

ಮುಖ್ಯಮಂತ್ರಿ ಅವರು ದೆಹಲಿ ಪ್ರವಾಸದಲ್ಲಿದ್ದಾಗ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ನಿವಾಸದಲ್ಲಿ ನಿನ್ನೆ ರಾತ್ರಿ ಪರಿಶಿಷ್ಟ ಸಮುದಾಯಕ್ಕೆ ಸೇರಿದ ಸಚಿವರು ಸಭೆ ನಡೆಸಿ ಇದು ಸೇರಿದಂತೆ ಕೆಲವು ನಿರ್ಣಯಗಳನ್ನು ಕೈಗೊಂಡಿದ್ದಾರೆ.

ಜಾರಕಿಹೊಳಿ ಅವರು ಕರೆದಿದ್ದ ಸಭೆಗೆ ಗೃಹ ಸಚಿವ ಜಿ. ಪರಮೇಶ್ವರ್, ಸಮಾಜ ಕಲ್ಯಾಣ ಸಚಿವ ಮಹದೇವಪ್ಪ, ಸಹಕಾರಿ ಸಚಿವ ರಾಜಣ್ಣ ಸೇರಿದಂತೆ ಇನ್ನು ಕೆಲವು ಸಚಿವರು ಭಾಗವಹಿಸಿದ್ದರು. ತದನಂತರ ಶಾಸಕರು ಪಂಚತಾರಾ ಹೋಟೆಲ್‌ನಲ್ಲಿ ನಡೆದ ಔತಣಕೂಟದಲ್ಲಿ ಪಾಲ್ಗೊಂಡಿದ್ದರು.

ಬೆಳಗಾವಿ ಜಿಲ್ಲೆ ಪೊಲೀಸ್ ವರಿಷ್ಠಾಧಿಕಾರಿ ಬದಲಾವಣೆ, ಅಲ್ಲಿನ ಡಿಸಿಸಿ ಬ್ಯಾಂಕ್ ವಿಚಾರ ಸೇರಿದಂತೆ ರಾಜ್ಯದ ವಿವಿಧೆಡೆ ಶಿವಕುಮಾರ್ ಹಸ್ತಕ್ಷೇಪ ಮಾಡುತ್ತಿರುವ ಬಗ್ಗೆಯೂ ಪ್ರಸ್ತಾಪಗೊಂಡಿತು.

ಶಿವಕುಮಾರ್ ಓಟಕ್ಕೆ ಕಡಿವಾಣ ಹಾಕಲು ಲೋಕಸಭಾ ಚುನಾವಣೆಗೂ ಮುನ್ನ ಲಿಂಗಾಯತ, ಪರಿಶಿಷ್ಟ ಜಾತಿ ಹಾಗೂ ವರ್ಗಕ್ಕೆ ಸೇರಿದ ಹಿರಿಯ ಸಚಿವರಿಗೆ ಬಡ್ತಿ ನೀಡಿ ಮೂರು ಉಪಮುಖ್ಯಮಂತ್ರಿ ಸ್ಥಾನಗಳನ್ನು ಕಲ್ಪಿಸಬೇಕು.

ಈ ಸಮುಯದಾಯಕ್ಕೆ ಸೇರಿದವರನ್ನು ಉಪಮುಖ್ಯಮಂತ್ರಿ ಮಾಡುವುದರಿಂದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಹೆಚ್ಚು ಸ್ಥಾನ ಗಳಿಸಲು ಸಾಧ್ಯವಾಗುತ್ತದೆ.

ಇದನ್ನು ವರಿಷ್ಠರಿಗೆ ಮನವರಿಕೆ ಮಾಡಿಕೊಡಲು, ದೆಹಲಿಗೆ ಹೋಗಲು ಸಭೆ ತೀರ್ಮಾನಿಸಿದೆ. ಅಲ್ಲದೆ, ಪರಮೇಶ್ವರ್ ಅವರನ್ನು ಮುಖ್ಯಮಂತ್ರಿ ಸ್ಥಾನದಲ್ಲಿ ಬಿಂಬಿಸಲು ಈಗಿನಿಂದಲೇ ಕಸರತ್ತು ಆರಂಭಿಸಲು ನಿರ್ಧಾರ ಕೈಗೊಳ್ಳಲಾಗಿದೆ.

ಸಭೆಯ ಬಗ್ಗೆ ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಹಕಾರಿ ಸಚಿವ ರಾಜಣ್ಣ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ನಾವು ಹೆಚ್ಚು ಸ್ಥಾನ ಗಳಿಸಬೇಕೆಂದರೆ ಮೂವರು ಉಪಮುಖ್ಯಮಂತ್ರಿಗಳ ಸ್ಥಾನ ಕಲ್ಪಿಸುವ ಅಗತ್ಯವಿದೆ ಎಂದು ಹೇಳಿದರು.

ರಾಜ್ಯದ ಉಸ್ತುವಾರಿ ಹೊಣೆ ಹೊತ್ತ ರಣದೀಪ್ ಸಿಂಗ್ ಸುರ್ಜೇವಾಲಾ ವಿದೇಶ ಪ್ರವಾಸದಲ್ಲಿದ್ದು, ಅವರು ಹಿಂತಿರುಗುತ್ತಿದ್ದಂತೆ ನಾವು ದೆಹಲಿಗೆ ತೆರಳಿ ಈ ವಿಷಯ ಮನವರಿಕೆ ಮತ್ತು ಒತ್ತಾಯ ಮಾಡುತ್ತೇವೆ ಎಂದರು.

ನಿನ್ನೆ ಎಸ್‌ಸಿ, ಎಸ್‌ಟಿ ಸಮುದಾಯಕ್ಕೆ ಸೇರಿದ ಸಚಿವರು ಮತ್ತು ಶಾಸಕರು ಊಟಕ್ಕೆ ಸೇರಿದ್ದೆವು, ಅಲ್ಲಿ ರಾಜಕೀಯವೂ ಚರ್ಚೆ ಆಯಿತು. ಕೆಲವು ಹೇಳುವಂತಹ ವಿಚಾರವೂ ಇವೆ, ಕೆಲವು ಹೇಳಲಾಗದ್ದು ಇವೆ, ಸೂಕ್ತ ಕಾಲದಲ್ಲಿ ಹೇಳಲಾಗದ ರಾಜಕಾರಣ ವಿಚಾರ ತಿಳಿಸುವುದಾಗಿ ಮಾರ್ಮಿಕವಾಗಿ ನುಡಿದರು.

ಉಪಮುಖ್ಯಮಂತ್ರಿ ಆಯ್ಕೆಗೆ ವರಿಷ್ಠರನ್ನು ಭೇಟಿ ಮಾಡಿ ನಮ್ಮ ಅಭಿಪ್ರಾಯ ಹೇಳುವ ತೀರ್ಮಾನ ಕೈಗೊಂಡಿದ್ದೇವೆ.

ಡಿಸಿಎಂಗಳ ಸೃಷ್ಟಿಯಿಂದ ಕಾಂಗ್ರೆಸ್‌ಗೆ ಲಾಭ ಆಗುತ್ತದೆ, ಎಸ್‌ಸಿ ಮತ್ತು ಎಸ್‌ಟಿ ಸಮುದಾಯವನ್ನು ನಮ್ಮ ಬಳಿಯೇ ಉಳಿಸಿಕೊಳ್ಳಲು ಈ ಸೂತ್ರ ಅನಿವಾರ್ಯ ಎಂದು ಹೇಳಿದರು.

ಒಂದೇ ಡಿಸಿಎಂ ಹುದ್ದೆ ಇರಬೇಕು ಎಂಬುದು ಶಿವಕುಮಾರ್ ಅಭಿಪ್ರಾಯ ಇರಬಹುದು, ಆದರೆ, ಎಲ್ಲರ ಅಭಿಪ್ರಾಯ ಪಡೆದುಕೊಂಡು ಮಾಡಬೇಕಾಗುತ್ತದೆ. ಹೆಚ್ಚು ಸ್ಥಾನ ಗೆಲ್ಲಬೇಕು ಎನ್ನುವ ಕಾರಣಕ್ಕೆ ಲೋಕಸಭಾ ಚುನಾವಣೆಗೆ ಸಚಿವರನ್ನು ಕಣಕ್ಕಿಳಿಸುವ ನಿರ್ಧಾರಕ್ಕೆ ವರಿಷ್ಠರು ಬಂದರೆ ಅದಕ್ಕೆ ಎಲ್ಲರೂ ತಲೆಬಾಗಬೇಕಾಗುತ್ತದೆ ಎಂದರು.

# ಸರ್ಕಾರ ಕರ ಸೇವಕರ ಪರವೋ, ಭಯೋತ್ಪಾದಕರ ಪರವೋ ?

ದಾವಣಗೆರೆ, ಜ.5- ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರವು ಕರ ಸೇವಕರ ಪರವೋ ಅಥವಾ ಭಯೋತ್ಪಾದಕರ ಪರವೋ ಎಂಬುದನ್ನು ಮುಖ್ಯಮಂತ್ರಿ ಸಿದ್ಧರಾಮಯ್ಯ ದೇಶದ ಜನತೆಗೆ ಸ್ಪಷ್ಟಪಡಿಸಬೇಕು ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಆಗ್ರಹಿಸಿದರು.



**ಸ್ಪಷ್ಟಪಡಿಸಲು ಮುಖ್ಯಮಂತ್ರಿಗೆ ರೇಣುಕಾಚಾರ್ಯ ಆಗ್ರಹ**

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜನರಲ್ಲಿ ಭಯ ಹುಟ್ಟಿಸುವ ದೃಷ್ಟಿಯಿಂದ 32 ವರ್ಷದ ಹಿಂದಿನ ಪ್ರಕರಣದಲ್ಲಿ ಪ್ರಶಾಂತ್ ಪೂಜಾರಿ ಅವರನ್ನು ಬಂಧಿಸಲಾಗಿದೆ. ರಾಜ್ಯದಲ್ಲಿ ನಡೆಯುತ್ತಿರುವುದು ಕಾಂಗ್ರೆಸ್ ಸರ್ಕಾರವಲ್ಲ, ದುರಹಂಕಾರದ, ತಾಲಿಬಾನ್ ಆಡಳಿತ ಎಂದು ಕಿಡಿಕಾರಿದರು.

ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಹಣವಿಲ್ಲ, ರೈತರಿಗೆ ಬರ ಪರಿಹಾರ ನೀಡಲು ಹಣವಿಲ್ಲ. ಆದರೆ ಅಲ್ಪಸಂಖ್ಯಾತರಿಗೆ ಸಾವಿರಾರು ಕೋಟಿ ರೂ. ಕೊಡಲು ಸರ್ಕಾರದ ಬಳಿ ಹಣವಿದೆಯೇ? ಇದು ಹಿಂದೂ ವಿರೋಧಿ ಸರ್ಕಾರ. ಈ ಸರ್ಕಾರದ ವಿರುದ್ಧ ಹೋರಾಟ ನಡೆಸಲು ನಾವು ಸಿದ್ದರಿದ್ದೇವೆ ಎಂದು ಹೇಳಿದರು.

ರಾಮ ಮಂದಿರ ನಿರ್ಮಾಣ ಪ್ರತಿ ಭಾರತೀಯರ ಸ್ವಾಭಿಮಾನದ ಪ್ರಶ್ನೆ. ಮಂದಿರ ನಿರ್ಮಾಣಕ್ಕಾಗಿ ಹೋರಾಟ ನಡೆಸಿದವರ ಬಂಧನ ಹಿಂದೂಗಳ ಭಾವನೆಗೆ ವಿರುದ್ಧವಾದದ್ದು. ಮುಖ್ಯಮಂತ್ರಿಗಳಿಗೆ ಧೈರ್ಯವಿದ್ದರೆ ನಮ್ಮನ್ನೂ ಬಂಧಿಸಲಿ ಎಂದು ಸವಾಲು ಹಾಕಿದರು.

ಇದೇ ಜ.22ಕ್ಕೆ ನಡೆಯಲಿರುವ ಶ್ರೀ ರಾಮ ಮಂದಿರದ ಉದ್ಘಾಟನೆಗಾಗಿ ವಿಶ್ವವೇ ಕಾತರದಿಂದ ಕಾಯುತ್ತಿದೆ. ಆದರೆ ಸಿದ್ಧರಾಮಯ್ಯ ಮಾತ್ರ ರಾಮ ಮಂದಿರದ ಸ್ಥಳ ವಿವಾದ ಇನ್ನೂ ಇದೆ ಎಂದಿದ್ದಾರೆ. ಮಂದಿರದ ಪರವಾಗಿ ಸುಪ್ರೀಂ ಕೋರ್ಟ್ ತೀರ್ಪು ಕೊಟ್ಟಿದೆ. ಸಿದ್ದರಾಮಯ್ಯನವರಿಗೆ ಇದು ಗೊತ್ತಿಲ್ಲವೇ? ಅವರಿಗೆ ಕಾನೂನಿನ ಮೇಲೆ ಗೌರವವಿಲ್ಲ. ಅವರೇನು ಸುಪ್ರೀಂ ಕೋರ್ಟ್‌ಗಿಂತ ದೊಡ್ಡವರೇ? ಎಂದು ರೇಣುಕಾಚಾರ್ಯ ಪ್ರಶ್ನಿಸಿದರು.

ಮಂದಿರ ಉದ್ಘಾಟನೆ ವೇಳೆ ಗೋಧ್ರಾ ಹತ್ಯಾಕಾಂಡದಂತಹ ಘಟನೆ ಮರುಕಳುಹಿಸ ಬಹುದು ಎಂದು ಕಾಂಗ್ರೆಸ್ ಮುಖಂಡ ಬಿ.ಕೆ. ಹರಿಪ್ರಸಾದ್ ಹೇಳಿಕೆ ನೀಡಿದ್ದಾರೆ. ಇದರಿಂದ ದೇಶದಲ್ಲಿ ಅಶಾಂತಿ ಸೃಷ್ಟಿಸಲು ಯತ್ನಿಸಲಾಗುತ್ತಿದೆಯೇ? ಎಂಬ ಅನುಮಾನವಿದೆ. ಮುಖ್ಯಮಂತ್ರಿ ಪುತ್ರ ಯತೀಂದ್ರ ಸಿದ್ಧರಾಮಯ್ಯ ಭಾರತ ಹಿಂದೂ ರಾಷ್ಟ್ರವಾಗಬಾರದು ಎಂಬ ರೀತಿ ಹೇಳಿಕೆ ನೀಡಿರುವುದು ಸರಿಯಲ್ಲ ಎಂದರು.

ವೀರೇಂದ್ರ ಪಾಟೀಲ್ ಮುಖ್ಯಮಂತ್ರಿಯಾಗಿದ್ದಾಗ ತನ್ವೀರ್ ಸೇಠ್ ತಂದೆ ನೇತೃತ್ವದಲ್ಲಿ ಕೋಮುಗಲಭೆ ನಡೆದಿತ್ತು. ಆಗ ವೀರೇಂದ್ರ ಪಾಟೀಲ್ ರಾಜೀನಾಮೆ ನೀಡಿದ್ದರು. ಈಗ ಸಿದ್ದರಾಮಯ್ಯ ಕೆಳಗಿಳಿಸಲು ಕಾಂಗ್ರೆಸ್ ಒಳಗೆಯೇ ಷಡ್ಯಂತ್ರ ನಡೆಯುತ್ತಿದೆ. ಕಾಂಗ್ರೆಸ್ ಒಡೆದ ಮನೆಯಾಗಿದೆ ಎಂದು ಟೀಕಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪಾಲಿಕೆ ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್, ಆರೈಕೆ ಆಸ್ಪತ್ರೆ ಮುಖ್ಯಸ್ಥ ಟಿ.ಜಿ. ರವಿಕುಮಾರ್, ಮುಖಂಡರುಗಳಾದ ಲೋಕಿಕೆರೆ ನಾಗರಾಜ್, ಕೆ.ಪಿ. ಕಲ್ಲಿಂಗಪ್ಪ, ರಾಜು ವೀರಣ್ಣ, ಪ್ರಶಾಂತ್ ಶೆಟ್ರು ಅಣಜಿ, ದುಂದೂರು ಜಯರುದ್ರಪ್ಪ, ದಯಾನಂದ್, ಚಂದ್ರು ಪಾಟೀಲ್, ಅಣಜಿ ಬಸವರಾಜ್ ಇತರರು ಉಪಸ್ಥಿತರಿದ್ದರು.

# ವಕೀಲ ಫಾಲ್ಕಿವಾಲಾ ಸಂವಿಧಾನದ ದಿಗ್ಗಜರು



(1ನೇ ಪುಟದಿಂದ) ನೀಡಿದ್ದರು. ನ್ಯಾಯಮೂರ್ತಿ ಹೆಚ್. ಆರ್. ಖನ್ನಾ ಅವರು ಮಾತ್ರ ಭಿನ್ನಮತದ ನಿಲುವು ತಳೆದು, ಜನರ ಜೀವನದ ಹಕ್ಕು ಎತ್ತಿ ಹಿಡಿದಿದ್ದರು. ಅವರ ತೀರ್ಪು ದೇಶದ ಸಂವಿಧಾನದ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದಿದೆ ಎಂದು ಕಾಮತ್ ಹೇಳಿದರು.

1973ರಲ್ಲಿ ಕೇಶವಾನಂದ ಭಾರತಿ ಪ್ರಕರಣದಲ್ಲಿ ಸಂವಿಧಾನದ ಮೂಲ ಸ್ವರೂಪ ಬದಲಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಪೀಠ 7-6 ಬಹುಮತದಿಂದ ತೀರ್ಪು ನೀಡಿತು. ಈ ಪ್ರಕರಣದಲ್ಲಿ ಹಿರಿಯ ವಕೀಲ ನಾನಿ ಫಾಲ್ಕಿವಾಲಾ ಅವರು ಮಂಡಿಸಿದ ವಾದ, ಸಂವಿಧಾನದ ಮೂಲ ಸ್ವರೂಪವನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿತ್ತು. ಈ ಕಾರಣದಿಂದ ದೇಶದಲ್ಲಿ ಸಂವಿಧಾನ ಸುಸ್ಥಿತಿಯಲ್ಲಿ ಉಳಿದಿದೆ ಎಂದು ಕಾಮತ್ ತಿಳಿಸಿದರು.

ಸಂವಿಧಾನ ರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ನ್ಯಾಯಮೂರ್ತಿ ಖನ್ನ ಹಾಗೂ ವಕೀಲ ಫಾಲ್ಕಿವಾಲಾ ಅವರು ನನಗೆ ಆದರ್ಶ ಎಂದು ಕಾಮತ್ ತಿಳಿಸಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಆರ್.ಎಲ್. ಕಾನೂನು ಕಾಲೇಜಿನ ಪ್ರಾಂಶುಪಾಲ ಜಿ.ಎಸ್. ಯತೀಶ್, ಕಾನೂನು ಕಲಿಕೆ ಹಾಗೂ ವಕೀಲ ವೃತ್ತಿ ನಿರ್ವಹಣೆ ಸಂದರ್ಭದಲ್ಲಿ ಪ್ರಾಮಾಣಿಕತೆ ಹಾಗೂ ನಿಷ್ಠೆ ಇರಬೇಕು ಎಂದು ಹೇಳಿದರು. ಅಧಿವಕ್ತ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಎಲ್. ದಯಾನಂದ್ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯ ಮೇಲೆ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್, ವಕೀಲೆ ಎಸ್. ಸುಜಾತ ಉಪಸ್ಥಿತರಿದ್ದರು. ಬಿಂದುಶ್ರೀ ಪ್ರಾರ್ಥಿಸಿದರು. ಗೋವಿಂದರಾಜ್ ಸ್ವಾಗತಿಸಿದರು. ವಸಂತ ಕುಮಾರ್ ನಿರೂಪಿಸಿದರೆ, ಬಿ.ಪಿ. ಬಸವನಗೌಡ ವಂದಿಸಿದರು.

## ಸಂವಿಧಾನಕ್ಕಾಗಿ ಸ್ಥಾನದ ಹಂಗು ತೊರೆದವರು

ತುರ್ತು ಪರಿಸ್ಥಿತಿ ಹೇರಿದ್ದ ಆಗಿನ ಕೇಂದ್ರ ಸರ್ಕಾರದ ವಿರುದ್ಧ ತೀರ್ಪು ನೀಡಿದರೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಹುದ್ದೆ ತಪ್ಪಲಿದೆ ಎಂದು ನ್ಯಾಯಮೂರ್ತಿ ಹೆಚ್.ಆರ್. ಖನ್ನಾ ಅವರಿಗೆ ತಿಳಿದಿತ್ತು. ಆದರೂ, ಅವರು ಸಂವಿಧಾನದ ಹಕ್ಕುಗಳ ಪರವಾಗಿ ತೀರ್ಪು ನೀಡಿದರು ಎಂದು ಹೆಚ್ಚುವರಿ ಸಾಲಿ ಸಿಟರ್ ಜನರಲ್ ಕೆ. ಅರವಿಂದ ಕಾಮತ್ ಹೇಳಿದರು.

ನ್ಯಾಯಮೂರ್ತಿ ಖನ್ನಾ ಅವರು ನಿರೀಕ್ಷಿಸಿದ ರೀತಿಯಲ್ಲೇ, ಸರ್ಕಾರ ಅವರ ಹಿರಿತನ ಮೀರಿ ಎಂ. ಹೆಚ್. ಬೇಗ್ ಅವರನ್ನು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಿತು. ನಂತರ ಖನ್ನಾ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು ಎಂದು ಹೇಳಿದರು.

ಹಿರಿಯ ವಕೀಲ ನಾನಿ ಫಾಲ್ಕಿವಾಲಾ ಅವರಿಗೆ 47ನೇ ವಯಸ್ಸಿನಲ್ಲೇ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗುವ ಅವಕಾಶ ದೊರೆತಿತ್ತು. ಆಗ ಅವರು ಮನಸ್ಸು ಮಾಡಿದ್ದರೆ, ಹತ್ತು ವರ್ಷಗಳ ಕಾಲ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಯಾಗುವ ಸಾಧ್ಯತೆಯೂ ಇತ್ತು. ಆದರೆ, ಈ ಹುದ್ದೆ ಬೇಡ, ಸಂವಿಧಾನ ರಕ್ಷಣೆಗಾಗಿ ವಕೀಲನಾಗಿಯೇ ಮುಂದುವರೆಯುವೆ ಎಂದು ಫಾಲ್ಕಿವಾಲಾ ನಿಲುವು ತಳೆದಿದ್ದರು ಎಂದು ಕಾಮತ್ ತಿಳಿಸಿದರು.

## ಮಲೇಬೆನ್ನೂರಿನಲ್ಲಿ ಇಂದು ಸಾಧನಾ ಸಮಾವೇಶ

ಪಟ್ಟಣದ ಹೊರ ವಲಯದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಲೇಬೆನ್ನೂರು ವಲಯ ಮಟ್ಟದ ಸಾಧನಾ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದು ವಲಯ ಮೇಲ್ವಿಚಾರಕಿ ಶ್ರೀಮತಿ ಸಂಪತ್‌ಲಕ್ಷ್ಮಿ ತಿಳಿಸಿದ್ದಾರೆ.

ಉದ್ಘಾಟನೆ : ಪುರಸಭೆ ಸಿಓ ಎ. ಸುರೇಶ್, ಅಧ್ಯಕ್ಷತೆ : ಬಿ.ಚಿದಾನಂದಪ್ಪ, ಮುಖ್ಯ ಅತಿಥಿಗಳು : ಜಿಲ್ಲಾ ನಿರ್ದೇಶಕ ಎಂ.ಲಕ್ಷ್ಮಣ, ಪಿಎಸ್ಐ ಪ್ರಭು ಕೆಳಗಿನ ಮನೆ, ವೈದ್ಯಾಧಿಕಾರಿ ಡಾ.ಲಕ್ಷ್ಮಿ ದೇವಿ, ಜಿ.ಮಂಜುನಾಥ್ ಪಟೇಲ್, ಬೆಣ್ಣೆಹಳ್ಳಿ ಹಾಲೇಶಪ್ಪ, ಭಾನುವಳ್ಳಿ ಸುರೇಶ್, ಯೋಜನಾಧಿಕಾರಿ ವಸಂತ್ ದೇವಾಡಿಗ.

## ಸಂಗೀತ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಇಂದು ಕೊನೆಯ ದಿನ

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಮಾನ್ಯತೆಯೊಂದಿಗೆ ನಗರದಲ್ಲಿ ನಡೆಯುತ್ತಿರುವ ಮಹತೀ ಸಾಂಸ್ಕೃತಿಕ ಕಲಾ ಸಂಸ್ಥೆಯಲ್ಲಿ ವಿಶ್ವವಿದ್ಯಾಲಯ ನಡೆಸುವ ಸಂಗೀತ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಲು ಇಂದು ಕೊನೆಯ ದಿನವಾಗಿದೆ. ಮಾಹಿತಿಗೆ ಮೊ: 94488 72944 ಸಂಪರ್ಕಿಸಬಹುದಾಗಿದೆ ಎಂದು ಕಾರ್ಯದರ್ಶಿ ಎಂ. ವಿದ್ವಾನ್ ದ್ವಾರಕೀಶ್ ತಿಳಿಸಿದ್ದಾರೆ.

# ಕೋವಿಡ್ ನಿಗಾ, ವಿಶೇಷ ವಾರ್ಡ್‌ಗೆ ಸೂಚನೆ

(1ನೇ ಪುಟದಿಂದ)
ಸೇವೆಗಳನ್ನು ನೀಡಲಾಗುತ್ತಿದೆ. ಆದರೆ ಗ್ರಾಮ ಪಂಚಾಯಿತಿಯಲ್ಲಿ ಚರಂಡಿ ದುರಸ್ತಿ, ಬೀದಿ ದೀಪ ದುರಸ್ತಿ ಬಗ್ಗೆ ಬರುವ ಅರ್ಜಿಗಳನ್ನು ಸಕಾಲದಲ್ಲಿ ದಾಖಲಿಸುತ್ತಿಲ್ಲ ಎಂದು ಜಿಲ್ಲಾಧಿಕಾರಿ ವೆಂಕಟೇಶ್ ಹೇಳಿದರು.

ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ಈ ಬಗ್ಗೆ ಕ್ರಮ ವಹಿಸಲು ಸೂಚನೆ ನೀಡಲು ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಯವರಿಗೆ ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಕೃಷ್ಣನಾಯ್ಕ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಸರ್ಕಾರದ ಗ್ಯಾರಂಟಿ ಯೋಜನೆಗಳ ಪರಿಶೀಲನೆ

ಸರ್ಕಾರದ ಗ್ಯಾರಂಟಿ ಯೋಜನೆಗಳಾದ ಶಕ್ತಿ ಯೋಜನೆಯಡಿ ದಾವಣಗೆರೆ ವಿಭಾಗದಿಂದ 2.9 ಕೋಟಿ ಮಹಿಳೆಯರು ಪ್ರಯಾಣಿಸಿದ್ದು, ಇದರ ಬಾಬ್ತು ದಾವಣಗೆರೆ ವಿಭಾಗಕ್ಕೆ 55.79 ಕೋಟಿ ರೂ. ವೆಚ್ಚ ಭರಿಸಲಾಗಿದೆ ಎಂದು ಸಾರಿಗೆ ನಿಗಮದ ವಿಭಾಗೀಯ ನಿಯಂತ್ರಕರು ಸಭೆಗೆ ಮಾಹಿತಿ ನೀಡಿದರು.

ಈ ವೇಳೆ ಹಾಸ್ಟೆಲ್ ಹತ್ತಿರ ಬಸ್‌ಗಳ ವ್ಯವಸ್ಥೆ ಇಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿದ್ದು, ದೊಡ್ಡ ಬಸ್‌ಗಳು ಸಂಚರಿಸದ ರಸ್ತೆಯಾಗಿದ್ದಲ್ಲಿ ಮಿನಿಬಸ್‌ಗಳನ್ನು ಇಲ್ಲಿ ಓಡಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಗುಂಜನ್ ಕೃಷ್ಣ ತಿಳಿಸಿದರು.

ಜಿಲ್ಲೆಯಲ್ಲಿ ಗೃಹಲಕ್ಷ್ಮಿ ಯೋಜನೆಯಡಿ 3,84,319 ಗುರಿಯಲ್ಲಿ 3,35,022 ಮಹಿಳೆಯರು ನೋಂದಣಿ ಮಾಡಿಸಿದ್ದಾರೆ. ಕೆವೈಸಿ ಮತ್ತು ಆಧಾರ್ ಲಿಂಕ್ ಮಾಡದ 4,254 ಮಹಿಳೆಯರಿಗೆ ಹಣ ಸಂದಾಯವಾಗಿರುವುದಿಲ್ಲ. ಇದನ್ನು ಸರಿಪಡಿಸುವ ಕೆಲಸ ಮಾಡಲಾಗುತ್ತಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಉಪನಿರ್ದೇಶಕಿ ವಾಸಂತಿ ಉಪ್ಪಾರ್ ತಿಳಿಸಿದರು.

ಸಮಸ್ಯೆ ಇದ್ದಲ್ಲಿ ಸಂಪರ್ಕಿಸಲು ಕಚೇರಿಯಲ್ಲಿ ಜಿಲ್ಲಾ ಸಂಪರ್ಕ ಸಂಖ್ಯೆಯನ್ನು ಸಾರ್ವಜನಿಕರಿಗಾಗಿ ಆರಂಭಿಸಲು ಜಿಲ್ಲಾಧಿಕಾರಿ ಎಂ.ವಿ.ವೆಂಕಟೇಶ್ ತಿಳಿಸಿದರು.

ಗೃಹಜ್ಯೋತಿ ಯೋಜನೆಯಡಿ ಜಿಲ್ಲೆಯಲ್ಲಿನ 4.78 ಲಕ್ಷ ಗ್ರಾಹಕರಲ್ಲಿ 4.20 ಲಕ್ಷ ಗ್ರಾಹಕರು ನೋಂದಾಯಿಸಿದ್ದು, ಇವರಿಗೆ ನವೆಂಬರ್ ತಿಂಗಳಲ್ಲಿ 18.43 ಕೋಟಿ ರೂ. ವೆಚ್ಚ ಮಾಡಲಾಗಿದೆ ಎಂದು ಬೆಸ್ಕಾಂ ಕಾರ್ಯಪಾಲಕ ಇಂಜಿನಿಯರ್ ತಿಳಿಸಿದರು.

ಅನ್ನಭಾಗ್ಯ ಯೋಜನೆಯಡಿ 3,33,278 ಕಾರ್ಡ್‌ಗಳಿದ್ದು 12,64,261 ಸದಸ್ಯರಿದ್ದಾರೆ. ಇವರಿಗೆ ತಲಾ 5 ಕೆ.ಜಿ. ಅಕ್ಕಿ ಜೊತೆಗೆ 5 ಕೆ.ಜಿ ಅಕ್ಕಿಯ ಹಣವನ್ನು ಅವರ ಖಾತೆಗೆ ನೇರವಾಗಿ ಪಾವತಿಸಲಾಗಿದೆ. ನವೆಂಬರ್ ತಿಂಗಳಲ್ಲಿ 19.95 ಕೋಟಿ ರೂ. ಪಾವತಿಸಲಾಗಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ಶಿದ್ರಾಮ ಮಾರಿಹಾಳ ಸಭೆಗೆ ತಿಳಿಸಿದರು.

# 19ನೇ ವಾರ್ಡಿನಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ದಾವಣಗೆರೆ, ಜ.5- ನಗರದ 19ನೇ ವಾರ್ಡಿಗೆ ಸಂಬಂಧಪಡುವ ಆರ್.ಎಂ.ಸಿ. ರಸ್ತೆಗೆ ಹೊಂದಿಕೊಂಡಿರುವ ಚೌಡೇಶ್ವರಿ ದೇವಸ್ಥಾನದವರೆಗಿನ ಸುಮಾರು 15 ಲಕ್ಷ ರೂ. ವೆಚ್ಚದ ಸಿ.ಸಿ. ರಸ್ತೆ ಕಾಮಗಾರಿ ಹಾಗೂ ಟಿ.ಸಿ. ಲೇಔಟ್‌ನಲ್ಲಿರುವ ಉಮಿಯಾ ಮಂದಿರದಿಂದ ಧನ್ವಂತರಿ ಏಜೆನ್ಸಿವರೆಗೆ ಸುಮಾರು 24 ಲಕ್ಷ ರೂ. ವೆಚ್ಚದ ರಸ್ತೆ ಕಾಮಗಾರಿಗೆ ಇಂದು ಮಹಾನಗರ ಪಾಲಿಕೆಯ ಮಹಾಪೌರ ವಿನಾಯಕ ಪೈಲ್ವಾನ್ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಪಾಲಿಕೆಯ ವಿರೋಧ ಪಕ್ಷದ ನಾಯಕ ಪ್ರಸನ್ನ ಕುಮಾರ್, ಪಾಲಿಕೆ ಸದಸ್ಯ ಆರ್.ಎಲ್.ಶಿವಪ್ರಕಾಶ್, ಸ್ಥಳೀಯ ಮುಖಂಡರಾದ ಸೋಮಶೇಖರ್, ಎಸ್.ಬಿ. ಶೇಖರ್ ಅರೇಮಲ್, ಯಲ್ಲೇಶ್, ಮಂಜುನಾಥ, ಸಂತೋಷ, ಕರಿಬಸಪ್ಪ, ಮಹಾನಗರ ಪಾಲಿಕೆ ಎಇಇ ಹೆಚ್.ಶೃತಿ, ಎ.ಇ. ದೀಪಾ ಮತ್ತು ಸ್ಥಳೀಯರು ಉಪಸ್ಥಿತರಿದ್ದರು.

# ಉದ್ಘಾಟನಾ ಸಮಾರಂಭಕ್ಕೆ ಅನ್ಸಾರಿಗೆ ಆಹ್ವಾನ

(1ನೇ ಪುಟದಿಂದ) ಪ್ರಾಣ ಪ್ರತಿಷ್ಠಾಪನಾ ಸಮಾರಂಭದಲ್ಲಿ ಪಾಲ್ಗೊಳ್ಳಲು 7 ಸಾವಿರ ಅತಿಥಿಗಳಿಗೆ ಆಹ್ವಾನ ನೀಡಲಾಗಿದೆ. ಅಯೋಧ್ಯೆ ಧಾರ್ಮಿಕ ನಗರಿಯಾಗಿದೆ. ಇಲ್ಲಿ ಹಿಂದೂ ಹಾಗೂ ಮುಸ್ಲಿಮರ ನಡುವೆ ಸಹೋದರತ್ವ ಹಾಗೂ ಐಕ್ಯತೆ ಇದೆ. ದೇವಾಲಯ, ಮಸೀದಿ ಇಲ್ಲವೇ ಗುರುದ್ವಾರಗಳ ನಡುವೆ ಪಕ್ಷಪಾತ ಇಲ್ಲ ಎಂದು ಅನ್ಸಾರಿ ಹೇಳಿದ್ದಾರೆ.

ರಾಮ ಪಥದಲ್ಲಿರುವ ಕೊಟಿಯಾ ಪಂಜಿತೊಲಾದಲ್ಲಿರುವ ಅವರ ಮನೆಗೆ ನೇರವಾಗಿ ಆಹ್ವಾನ ಪತ್ರಿಕೆ ತಲುಪಿಸಲಾಗಿದೆ ಎಂದು ಅನ್ಸಾರಿ ಅವರ ಪುತ್ರಿ ಶಮಾ ಪರ್ವೀನ್ ತಿಳಿಸಿದ್ದಾರೆ. ದೇವಾಲಯದ ಟ್ರಸ್ಟ್ ಪ್ರತಿನಿಧಿ ಆಹ್ವಾನ ಪತ್ರಿಕೆ ತಲುಪಿಸಿದ್ದಾರೆ. ರಾಮ ಮಂದಿರ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಮುಸ್ಲಿಂ ಸಮುದಾಯ ಗೌರವಿಸುತ್ತದೆ ಎಂದು ಅನ್ಸಾರಿ ಈ ಹಿಂದೆ ತಿಳಿಸಿದ್ದರು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಆಡಳಿತದ ಬಗ್ಗೆ ಪ್ರತಿಕ್ರಿಯಿಸಿದ್ದ ಅವರು, ಮೋದಿ ಅವಧಿಯಲ್ಲಿ 'ಸಬ್ಕಾ ಸಾಥ್, ಸಬ್ಕಾ ವಿಕಾಸ್' ಕಾಣುತ್ತಿದೆ. ಅಯೋಧ್ಯೆಯ ವಿಕಾಸಕ್ಕಾಗಿ ಅವರಿಗೆ ಅಭಿನಂದಿಸುತ್ತೇನೆ ಎಂದಿದ್ದಾರೆ.

ನಾನು ಈ ಹಿಂದೆಯೂ ಮಠ, ಮಂದಿರಗಳಿಗೆ ಭೇಟಿ ನೀಡಿದ್ದೇನೆ. ಈಗಲೂ ಭೇಟಿ ನೀಡುತ್ತಿದ್ದೇನೆ. ಅಯೋಧ್ಯೆಯ ಮಂದಿರದ ಭೂಮಿ ಪೂಜೆ ಕಾರ್ಯಕ್ರಮಕ್ಕೂ ಆಹ್ವಾನ ನೀಡಲಾಗಿತ್ತು. ಈಗ ಪ್ರಾಣ ಪ್ರತಿಷ್ಠಾಪನೆಗೂ ಆಹ್ವಾನ ನೀಡಲಾಗಿದೆ. ನಾನು ಆ ಸಮಾರಂಭಕ್ಕೂ ಹೋಗುತ್ತೇನೆ ಎಂದವರು ತಿಳಿಸಿದ್ದಾರೆ.

## ಬಿಸಿಯೂಟದಲ್ಲಿ ಸಿರಿಧಾನ್ಯ : ಸಿದ್ದರಾಮಯ್ಯ ಘೋಷಣೆ

(1ನೇ ಪುಟದಿಂದ) ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ರಾಜ್ಯದ ಸಚಿವರಾದ ಎನ್.ಚಲುವರಾಯಸ್ವಾಮಿ, ಕೆ.ವೆಂಕಟೇಶ್, ದಿನೇಶ್ ಗುಂಡೂರಾವ್, ಉತ್ತರ ಪ್ರದೇಶ ಸರ್ಕಾರದ ಕೃಷಿ ಸಚಿವ ಸೂರ್ಯ ಪ್ರತಾಪ್ ಸಾಹಿ, ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಬಿಜೆಪಿಗೆ ಸೇರ್ಪಡೆಯಾಗಿದ್ದ ಕ್ರಿಶ್ಚಿಯನ್ ಧರ್ಮಗುರು ಅಮಾನತ್ತು

ತಿರುವನಂತಪುರಂ, ಜ. 4 – ಬಿಜೆಪಿಗೆ ಸೇರ್ಪಡೆಯಾಗಿದ್ದ ಕೇರಳದ ಕ್ರಿಶ್ಚಿಯನ್ ಧರ್ಮಗುರು ಫಾದರ್ ಶೈಜು ಕುರಿಯನ್ ಅವರನ್ನು ಚರ್ಚ್ ಸ್ಥಾನಗಳಿಂದ ಅಮಾನತ್ತುಗೊಳಿಸಲಾಗಿದೆ. ಕುರಿಯನ್ ಅವರು ಪಥನಮತಿಟ್ಟ ಜಿಲ್ಲೆಯ ಆರ್ಥೋಡಾಕ್ಸ್ ಚರ್ಚ್ ನಿಲಕ್ಕಲ್ ಭದ್ರಾಸನಂ (ಡಯೊಸೀಸ್) ಕಾರ್ಯದರ್ಶಿಯಾಗಿದ್ದಾರೆ. ಅವರು ನಿಲಕ್ಕಲ್ ಭದ್ರಾಸನಂ ಭಾನುವಾರದ ಶಾಲೆಯ ಉಪಾಧ್ಯಕ್ಷರೂ ಆಗಿದ್ದಾರೆ. ಫಾದರ್ ಕುರಿಯನ್ ಹಾಗೂ ಅಲ್ಪಸಂಖ್ಯಾತ ಸಮುದಾಯದ 50 ಕುಟುಂಬಗಳು ಇತ್ತೀಚೆಗೆ ಬಿಜೆಪಿಗೆ ಸೇರ್ಪಡೆಯಾಗಿದ್ದರು. ಈಗ ಕುರಿಯನ್ ಅಮಾನತ್ತು ಮಾಡಿರುವುದಕ್ಕೆ ಕಾರಣವೇನು ಎಂಬುದನ್ನು ತಿಳಿಸಲಾಗಿಲ್ಲ.

## ನಗರದಲ್ಲಿಂದು ಆಯ-ವ್ಯಯ 2ನೇ ಸಭೆ

ಪ್ರಸಕ್ತ ಸಾಲಿನ ಆಯ ವ್ಯಯ ಅಂದಾಜು ಪಟ್ಟಿ ತಯಾರಿಸಲು ಮಹಾನಗರಪಾಲಿಕೆಯ ಮಹಾಪೌರರ ಅಧ್ಯಕ್ಷತೆಯಲ್ಲಿ ಇಂದು ಬೆಳಿಗ್ಗೆ 11 ಕ್ಕೆ ಮಹಾನಗರಪಾಲಿಕೆ ಕೌನ್ಸಿಲ್ ಸಭಾಂಗಣದಲ್ಲಿ ಎರಡನೇ ಸಭೆಯನ್ನು ಆಯೋಜಿಸಲಾಗಿದೆ ಎಂದು ಪಾಲಿಕೆ ಆಯುಕ್ತರಾದ ರೇಣುಕಾ ತಿಳಿಸಿದ್ದಾರೆ.


**ಸೈಟು ಮಾರಾಟಕ್ಕಿವೆ**
KHB ಲೇಔಟ್‌ನಲ್ಲಿ 50x80 ಪೂರ್ವ, ನಲವತ್ತು ಅಡಿ ರಸ್ತೆಗೆ. 30x50 ಪಶ್ಚಿಮ, ಪಾರ್ಕ್ ಎದುರು 30x40 ಪಶ್ಚಿಮ.
G.H. Ashok kundavada
97402 20709

**ಸೈಟುಗಳು ಮಾರಾಟಕ್ಕಿವೆ**
ಹಳೇ ಬನಶಂಕರಿ ಪೂರ್ವ 30x50, ಪೂರ್ವ-ದಕ್ಷಿಣ ಕಾರ್ನರ್ 40x65, ಪಶ್ಚಿಮ 30x70 (60 ಅಡಿ ರಸ್ತೆ) ಪೂರ್ವ 50x80, ಶಿವ-ಪಾರ್ವತಿ ಪೂರ್ವ 40x55, 40x60, ಪಶ್ಚಿಮ 30x40 (ಅಕ್ಕ-ಪಕ್ಕ) 30x55
ಐಗೂರು ವಿಜಯಕುಮಾರ
99457 02495

**ಮನೆ ಮಾರಾಟಕ್ಕಿದೆ**
DCM ಲೇಔಟ್‌ನಲ್ಲಿ ಪೂರ್ವ ದಿಕ್ಕಿನ 20x60 ರಲ್ಲಿ ಕೆಳಗಡೆ 3 ಬೆಡ್‌ರೂಮ್, ಡ್ಯೂಪ್ಲೆಕ್ಸ್ ಹೌಸ್, ಮೊದಲನೇ ಮಹಡಿಯಲ್ಲಿ ಎರಡು ಬೆಡ್ ರೂಮ್ ಮನೆ ಮಾರಾಟಕ್ಕಿದೆ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**3 BHK FLAT FOR SALE**
1550 sqf fully furnished 3 BHK Apartment flat is for sale at jayanagara `B' Block, Davanagere.
98458 73771

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಟೈಲರಿಂಗ್ ಮಹಿಳೆಯರು, ಪುರುಷರು, ಸಹಾಯಕರು, ಮಹಿಳಾ ಮತ್ತು ಪುರುಷರು ತಕ್ಷಣ ಬೇಕಾಗಿದ್ದಾರೆ
88614 38237

**ಮನೆ & ಆಫೀಸ್ ಕಾಂಪ್ಲೆಕ್ಸ್ ಬಾಡಿಗೆಗಿದೆ**
ಪಿ.ಬಿ. ರೋಡ್, ಟೆಲಿಫೋನ್ ಆಫೀಸ್ ಹತ್ತಿರ, ದಾವಣಗೆರೆ.
99640 28815
9900687196, 8088933543

**ಸೈಟುಗಳು ಮಾರಾಟಕ್ಕಿವೆ**
ಮಹಾಲಕ್ಷ್ಮಿ ಲೇಔಟ್ ಪೂರ್ವ 40x50 (ಕಾವೇರಿ Apartment ಹತ್ತಿರ) ಶಕ್ತಿ ನಗರ ಪೂರ್ವ 30x40 (ಅಕ್ಕ-ಪಕ್ಕ) ಸ್ವಾಮಿ ವಿವೇಕಾನಂದ ಬಡಾವಣೆ (LIC ಕಾಲೋನಿ) ದಕ್ಷಿಣ 15x45, ಡಾಲರ್ಸ್ ಕಾಲೋನಿ, ಉತ್ತರ 40x60 (ಅಕ್ಕ-ಪಕ್ಕ)
ಐಗೂರು ವಿಜಯಕುಮಾರ
99457 02495

**ಶಾಲೆಗೆ ಆಯಾ ಬೇಕಾಗಿದ್ದಾರೆ**
ಜಯದೇವ ವೃತ್ತದ ಬಳಿಯ ಶಾಲೆಗೆ ಆಯಾ ಬೇಕಾಗಿದ್ದಾರೆ
Salary - 5000/- only
ಸಮಯ : 9 to 5 PM
63616 62669
99801 48289

**WANTED**
Sales staff Male/Female
Retail experience
Branded store
Firstcry.com, Davanagere
83108 00027

**ಕೆಲಸದವರು ಬೇಕಾಗಿದ್ದಾರೆ**
ಜ್ಯೂಸ್, ಚಾಟ್ಸ್, ಐಸ್‌ಕ್ರೀಮ್ ಪಾರ್ಲರ್ ಮತ್ತು ಹೋಟೆಲ್‌ನಲ್ಲಿ ಅನುಭವವುಳ್ಳ ಕುಕ್ ಮತ್ತು ಕೆಲಸದವರು ಬೇಕಾಗಿದ್ದಾರೆ.
74066 68446
ಬೆಂಗಳೂರು

**ಕೆಲಸಕ್ಕೆ ಬೇಕಾಗಿದ್ದಾರೆ**
ಆಯಾ ಕೆಲಸ - 1, ತರಳಬಾಳು ಬಡಾವಣೆಯಲ್ಲಿರುವ ಕ್ಲಿನಿಕ್‌ಗೆ ಬೇಕಾಗಿದ್ದಾರೆ. ಸಂದರ್ಶನಕ್ಕೆ
63643 21664
08192 452312

**1 BHK ಮನೆ ಬಾಡಿಗೆಗಿದೆ**
ಸಸ್ಯಾಹಾರಿಗಳಿಗೆ ಮಾತ್ರ
1ನೇ ಮಹಡಿ 4ನೇ ಮೇನ್, 2ನೇ ಕ್ರಾಸ್ ಕೆ.ಬಿ.ಬಡಾವಣೆ ದಾವಣಗೆರೆ -2. ಸಂಪರ್ಕಿಸಿ.
93434 75963, 90367 26949

**ಕೆಲಸಕ್ಕೆ ಬೇಕಾಗಿದ್ದಾರೆ**
ಟೆಕ್ನೀಷಿಯನ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. ಬೇಸಿಕ್ ಸ್ಯಾಲರಿ ರೂ. 13,000, ಬೈಕ್ ಇದ್ದವರಿಗೆ 14,000ರೂ. ಪಿಯುಸಿ, ಎಸ್‌ಎಸ್‌ಎಲ್‌ಸಿ, ಅಥವಾ ಡಿಗ್ರಿ.
ಟೆಲಿ ಕಾಲರ್ಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಬೇಸಿಕ್ ಸ್ಯಾಲರಿ 9000 ರೂ ಪಿಯುಸಿ, ಡಿಗ್ರಿ ಆಗಿರಬೇಕು.
SN ಎಂಟರ್‌ಪ್ರೈಸಸ್, ನಿಟುವಳ್ಳಿ, 60 ಅಡಿ ರೋಡ್, ಮೌನೇಶ್ವರ ಟೆಂಪಲ್ ಸ್ಟಾಪ್, ದಾವಣಗೆರೆ.
8548047353, 8792674847

**ಬೇಕಾಗಿದ್ದಾರೆ**
ಹರಿಹರದಲ್ಲಿರುವ ಪೆಟ್ರೋಲ್ ಬಂಕ್‌ಗೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
80502 19547

**ತಕ್ಷಣ ಬೇಕಾಗಿದ್ದಾರೆ**
ಸೆಕ್ಯೂರಿಟಿ ಕೆಲಸಕ್ಕೆ ಪುರುಷರು, ಆಫೀಸ್ ಕೆಲಸಕ್ಕೆ ಮಹಿಳೆಯರು, ಕ್ಲೀನಿಂಗ್ ಕೆಲಸಕ್ಕೆ ಮಹಿಳೆಯರು, ಸಂಬಳ - 9000 to 10000
ಸಂಪರ್ಕಿಸಿ :
98445 17979

**ಬೇಕಾಗಿದ್ದಾರೆ**
**ರಿದ್ಧಿ ಸಿದ್ಧಿ ಶಾಪೆ**
ವಿಜಯ್ ಲಕ್ಷ್ಮಿ ರೋಡ್, ಗುಪ್ತ ಗೋಲ್ಡ್ ಪ್ಯಾಲೇಸ್ ಎದುರು, ದಾವಣಗೆರೆ.
ಗಿಫ್ಟ್ ಶಾಪ್‌ನಲ್ಲಿ ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
99645 26424

**ಮಳಿಗೆ ಬಾಡಿಗೆಗಿದೆ**
ನರಸರಾಜ ರಸ್ತೆ ಹಾಸಬಾವಿ ಸರ್ಕಲ್ ಹತ್ತಿರವಿರುವ ಆಲದಹಳ್ಳಿ ಕಾಂಪ್ಲೆಕ್ಸ್‌ನಲ್ಲಿ 13x16 1/2 (Gold Shop, Cloth Shop, Medical Shop, Kirani Shop) ಅಳತೆಯ ಮಳಿಗೆ ಬಾಡಿಗೆಗಿದೆ.
ಸಂಪರ್ಕಿಸಿರಿ
94801 75911

**ಬೇಕಾಗಿದ್ದಾರೆ**
* ಆಟೋ ಡ್ರೈವರ್
* ಅಕೌಂಟೆಂಟ್ (ಮಹಿಳೆಯರು)
ಸಂಪರ್ಕಿಸಿ :
S.V. SALES CORPORATION
P.B.Road, Davangere.
63620 23451, 97434 37003

**ಸೈಟುಗಳು ಮಾರಾಟಕ್ಕಿವೆ**
1) ಡಾಲರ್ಸ್ ಕಾಲೋನಿ, (40x51) ಪಶ್ಚಿಮ
2) ಕುಂದವಾಡ ಸೈಟ್ ನಂ. 44 (30x50) ಪಶ್ಚಿಮ ನೈರುತ್ಯ ಮೂಲೆ
3) ಕುಂದವಾಡ ಸೈಟ್ ನಂ. 43 (30x50), ಪಶ್ಚಿಮ (ಅಕ್ಕಪಕ್ಕ)
97404 47907
91481 25125

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೇಕಾಗಿದ್ದಾರೆ**
**ಹೋಟೆಲ್ ಫುಡ್ಡೀಸ್**
ಚರ್ಚ್ ರೋಡ್, ತೋಟಗವೀರ ಕಲ್ಯಾಣ ಮಂಟಪದ ಹತ್ತಿರ, ದಾವಣಗೆರೆ.
* ವೈಟರ್ * ಲೇಡಿ ಕ್ಲೀನರ್, * ಕ್ಯಾಪ್ಟನ್ * ಬಿಲ್ಲಿಂಗ್ ಮತ್ತು ಕ್ಯಾಷಿಯರ್ * ಬಾರ್ ವೆಂಡರ್
98861 56688

**ತಕ್ಷಣ ಬೇಕಾಗಿದ್ದಾರೆ**
ಕ್ಯಾಪ್ಟನ್, ವೇಟರ್ಸ್, ಬಿಲ್ಲಿಂಗ್ ಆಪರೇಟರ್ ಬೇಕಾಗಿದ್ದಾರೆ, ಅನುಭವ ಇದ್ದವರಿಗೆ ಆಕರ್ಷಕ ವೇತನ ಕೊಡಲಾಗುವುದು. ಹೋಟೆಲ್ ಪೂಜಾ ಇಂಟರ್ ನ್ಯಾಷನಲ್, ದಾವಣಗೆರೆ.
ಸಂಪರ್ಕಿಸಿ :
96067 45754, 88846 30532

**ಉದ್ಯೋಗಾವಕಾಶ**
ನಮ್ಮ ಸಂಸ್ಥೆಯಿಂದ ಯುವತಿಯರಿಗೆ & ಮಹಿಳೆಯರಿಗೆ ಪ್ರಾಯೋಗಿಕ ತರಬೇತಿಯನ್ನು ನೀಡಿ ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್ ಸಂಸ್ಥೆಯಲ್ಲಿ ಉದ್ಯೋಗಾವಕಾಶ ನೀಡಲಾಗುತ್ತದೆ. ಸಂಬಳ, ಉಚಿತ ಊಟ, ವಸತಿಯೊಂದಿಗೆ 15000 ರಿಂದ 30,000, ವಿದ್ಯಾರ್ಹತೆ : 7ನೇ, 10ನೇ, ಪಿಯುಸಿ, ಡಿಗ್ರಿ, ಜಿಎನ್‌ಎಂ., ಎಎನ್‌ಎಂ
91486 83185

**'ಮಚ್ಚಿ' ಫಿಶ್ ಫ್ರೈ ಹೋಟೆಲ್**
ಸಮುದ್ರದ ತಾಜಾ ಮೀನುಗಳನ್ನು ಮಂಗಳೂರು ಶೈಲಿಯಲ್ಲಿ ತವಾ ಫ್ರೈ ಮಾಡಲಾಗುತ್ತದೆ. ಹಳೇ ಬೆತೂರು ರಸ್ತೆ, ಶ್ಯಾವಿಗೆ ಮೆಶಿನ್ ಹತ್ತಿರ, ದಾವಣಗೆರೆ.
63646 78760

**ಮನೆ ಬಾಡಿಗೆಗೆ ಇದೆ**
DC ಆಫೀಸ್ ಹತ್ತಿರ, ಮಹಾಲಕ್ಷ್ಮಿ ಲೇಔಟ್‌ನಲ್ಲಿ 1 ಬೆಡ್ ರೂಮ್‌ವುಳ್ಳ ಮನೆ (1st floor) ಖಾಲಿ ಇದೆ.
ಸಂಪರ್ಕಿಸಿ :
94824 05929

**HOUSE FOR SALE**
West Facing (30x50) Dollars Colony, Near Tirumala Bar & Restaurant, Built-up area, Ground floor- 1450 sft First floor-950 sft.
97404 47907
91481 25125

**ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್ ಆಫೀಸ್‌ನಲ್ಲಿ ಕೆಲಸ ಮಾಡಲು ಪಿಯುಸಿ ಅಥವಾ ಡಿಗ್ರಿ ಮುಗಿಸಿರುವ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
M/s ಬಸವಶ್ರೀ ಸೋಲಾರ್ ಟೆಕ್ನಾಲಜೀಸ್, # 43H, ಎಸ್.ಜೆ.ಜೆ.ಎಮ್. ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರೋಡ್, ದಾವಣಗೆರೆ.
99001 42052

**ಮನೆಗಳು ಮಾರಾಟಕ್ಕಿವೆ**
30x60 ಪಶ್ಚಿಮ ತರಳಬಾಳು ಬಡಾವಣೆ, 44x60 ಪೂರ್ವ MCC 'A' 'B' ಸೈಟ್, 44x60 ಪೂರ್ವ MCC 'B' 'B' 30x40 ಉತ್ತರ SS layout 'B' ಮನೆ 95x100 ಸೈಟ್ NH-4 ರೋಡ್ ಇವೆ.
ಏಜೆಂಟರು S. ಯಲ್ಲೋಜಿರಾವ್
97418 11694

**HOUSE FOR RENT**
1st floor- 2 BHK & Having solar water & borewel water facility available for rent, # 1982/ 2, 6th Cross, siddaveerappa layout, DVG.
94806 93506, 82777 97633

**ಬೇಕಾಗಿದ್ದಾರೆ**
**ಸರ್ವಜಿತ್ ಯುರಾಲಜಿ & ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್**
7ನೇ ಕ್ರಾಸ್, 7ನೇ ಮೇನ್, ಚೇತನ ಹೋಟೆಲ್ ರಸ್ತೆ, ದಾವಣಗೆರೆ.
ನುರಿತ ಕೆಲಸಗಾರರು, OT ನರ್ಸಸ್, ವಾರ್ಡ್ ನರ್ಸಸ್, ಐಸಿಯು ನರ್ಸಸ್, ಬಿಲ್ಲಿಂಗ್, ಎಕ್ಸ್‌ರೇ ಟೆಕ್ನೀಷಿಯನ್, ಆಯಾ, ಮತ್ತು ವಾರ್ಡ್‌ಬಾಯ್, ರಿಸೆಪ್ಷನಿಸ್ಟ್ ಬೇಕಾಗಿದ್ದಾರೆ.
96633 06911

**ಪಾರ್ಟನರ್ ಬೇಕಾಗಿದ್ದಾರೆ**
ನಮ್ಮ ಟ್ರೇಡಿಂಗ್ ಬ್ಯುಸಿನೆಸ್‌ಗೆ ಸ್ಲೀಪಿಂಗ್ ಪಾರ್ಟನರ್ ಆಗಿ ಪ್ರತಿ ತಿಂಗಳು ಉತ್ತಮ ಹಾಗೂ ಸ್ಥಿರವಾದ ಲಾಭ ಗಳಿಸಿ.
76767 50280

**ಬೇಕಾಗಿದ್ದಾರೆ**
ಮಹಿಳೆ/ಪುರುಷರು ಆಫೀಸ್ ಕ್ಲೀನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ :
ಬೆ. 11.00 ರಿಂದ ಸಂಜೆ 5.30ರವರೆಗೆ.
08192 254736

**ಮನೆ ಬಾಡಿಗೆಗೆ**
ಮೊದಲನೇ ಮಹಡಿ ಸಿಂಗಲ್ ಬೆಡ್ ರೂಮ್, ಮುನ್ಸಿಪಲ್ & ಬೋರ್ ವೆಲ್ ನೀರಿನ ಸೌಕರ್ಯವುಳ್ಳ ಪೂರ್ವ ದಿಕ್ಕಿನ ಮನೆ, DCM ಟೌನ್ ಶಿಪ್. ಸಂಪರ್ಕಿಸಿ :
98443 10168

**HOUSE FOR RENT**
1 BHK, 2nd floor (Furnished) MCC A block, 2nd main road, Near Davalagi building, Opp. Super Market
97404 47907
91481 25125, 93414 80442

**JOIN OUR TEAM**
We are Looking for
Graphic Designers, Digital Marketing, Video Editors, Accountant, Supervisors, Marketing
Basic Salary Starts from 15, 000/-upto 50,000/-
WE ARE HIRING
+ 91 97431 53987, +91 99019 11421

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.



ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**WANTED IMMEDIATELY**
Experienced Principal and Assistant Professor for M.E.S B.Ed college, Davanagere.
Qualification MA, M.Ed/ M.sc, M.Ed. PhD, K Set /NET All Subject.
Walk in interview on 7-1-2024 @ 10.30 am Apply
# Anjaneya Badavane 9th Cross, Near Indragiri Chandragiri Apartment, Davangere -577004. Contact :
98804 36414

**VILLA BUILDING FOR SALE**
60x50 total 3000 sqft, Duplex Villa building 4 BHK , 4 Rest Rooms, Drawing Room , Italian Kitchen , Pooja Room, Dining Hall , Sit Out Balcony, Office Room, 2 Car Parking, 24x7 Water, Borewell , contact
No broker or agent allowed
Swamy Vivekananda Extension , 5th Main , BIET Road, Davanagere
98804 36414

**REQUIRED COOK FOR CAFE**
Looking for Italian/ Continental Cook Beverages (Shakes, Mocktails, Frappes, Cuppuccino) with
Age limit : 20 to 25, 2 Years + Experience.
89717 62222

**ನೇತ್ರ ದಾನ ಮಾಡಿ**
**ಅಂಧರ ಬಾಳಿಗೆ ಬೆಳಕಾಗಿ**

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**FLAT FOR LEASE**
2 BHK, North facing 1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಅಂಗಡಿ ಕೆಲಸಕ್ಕೆ ಹುಡುಗರು ಅಥವಾ ಹುಡುಗಿಯರು ಬೇಕಾಗಿದ್ದಾರೆ. Computer Knowledge (Tally) ಇರುವವರಿಗೆ ಮೊದಲ ಆದ್ಯತೆ, ಅಂಗಡಿ ಕೆಲಸದ ಜೊತೆ ಬಿಲ್ಲಿಂಗ್ ಮಾಡಬೇಕು. ಸಂಪರ್ಕಿಸಿ :
94482 33212

# ಹಳೇಪೇಟೆ ಸ.ಹಿ.ಪ್ರಾ. ಶಾಲೆಯಲ್ಲಿ ಸಾವಿತ್ರಿಬಾಯಿ ಫುಲೆ ಜಯಂತಿ



ದಾವಣಗೆರೆ, ಜ. 5- ಹಳೇಪೇಟೆಯ ಶತಮಾನದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದೇಶದ ಪ್ರಪ್ರಥಮ ಮಹಿಳಾ ಶಿಕ್ಷಕಿ ಸಾವಿತ್ರಿ ಬಾಯಿ ಫುಲೆ ಅವರ ಜನ್ಮದಿನಾಚರಣೆ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕಿ ಆರ್.ಸಿ. ಅನುಸೂಯ ಮಾತನಾಡಿ, ಭಾರತ ದೇಶದ ಪ್ರಪ್ರಥಮ ಮಹಿಳಾ ಶಿಕ್ಷಕಿ ಸಾವಿತ್ರಿ ಬಾಯಿ ಫುಲೆ ಅವರು ದೀನ-ದಲಿತರಿಗೆ ಅಕ್ಷರ ಜ್ಞಾನ ನೀಡುವ ಮೂಲಕ ಗ್ರಾಮೀಣ ಪ್ರದೇಶದ ಜನರಲ್ಲಿ ಸಾಮಾಜಿಕ ಜಾಗ್ರತೆ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಸಾಮಾಜಿಕ ಪಿಡುಗುಗಳಾದ ಜಾತಿ ಪದ್ಧತಿ, ಬಾಲ್ಯವಿವಾಹ ಪದ್ಧತಿ, ಸತಿ ಸಹಗಮನ ಪದ್ದತಿಗಳ ವಿರುದ್ಧ ಜನರನ್ನು ಜಾಗೃತಗೊಳಿಸುವ ಮೂಲಕ ಸಾಮಾಜಿಕ ಚಳವಳಿಗಳನ್ನು ರೂಪಿಸಿದರು ಎಂದು ತಿಳಿಸಿದರು.

ಶಾಲೆಯ ಏಳನೇ ತರಗತಿ ವಿದ್ಯಾರ್ಥಿ ಚಂದನ್ ಸಿ.ಆರ್., ಸಾವಿತ್ರಿ ಬಾಯಿ ಫುಲೆ ಶಿಕ್ಷಣ ಕ್ರಾಂತಿಯ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದಾವಣಗೆರೆ ಜಿಲ್ಲಾ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ (ಎಸ್.ಡಿ.ಎಂ.ಸಿ) ದಾವಣಗೆರೆ ಜಿಲ್ಲಾ ಪತ್ರಿಕಾ ಕಾರ್ಯದರ್ಶಿ ರಮೇಶ್ ಸಿ. ದಾಸರ್ ಮಾತನಾಡಿ, ಸಾವಿತ್ರಿ ಬಾಯಿ ಫುಲೆ ಅವರು ಶೋಷಣೆಗೆ ಒಳಗಾದ ದೀನದಲಿತರಿಗೆ, ಪುರುಷ ಮತ್ತು ಮಹಿಳೆಯರ, ಮಕ್ಕಳ ಕಲ್ಯಾಣಕ್ಕಾಗಿ, ಶಿಕ್ಷಣಕ್ಕಾಗಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಶಿಕ್ಷಣ ಕ್ರಾಂತಿ ಮೂಡಿಸಿದ ಮಹಾತಾಯಿ, ಶಿಕ್ಷಕಿ, ಅಕ್ಷರದವ್ವ ಸಾವಿತ್ರಿ ಬಾಯಿ ಫುಲೆ ಅವರು ಸತಿ ಸಹಗಮನ ಪದ್ದತಿಯನ್ನು ವಿರೋಧ ಮಾಡಿದರು ಮತ್ತು ವಿಧವಾ ವಿವಾಹಗಳಿಗೆ ಪ್ರೋತ್ಸಾಹ ನೀಡುವ ಮೂಲಕ ಸಾಮಾಜಿಕ ಜಾಗ್ರತೆ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು, ಅವರ ಸಾಮಾಜಿಕ ಜಾಗ್ರತೆ, ಹೋರಾಟ ನಮಗೆ ಸ್ಫೂರ್ತಿ ನೀಡಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕಿಯರಾದ ನಮಿತಾ, ಸುಜಾತ, ಸಂಪತ್ ಕುಮಾರಿ, ಜಯಶ್ರೀ ಉಪಸ್ಥಿತರಿದ್ದರು.

ಸಮಾರಂಭದ ಆರಂಭದಲ್ಲಿ ವಿದ್ಯಾರ್ಥಿನಿಯರು ಪ್ರಾರ್ಥಿಸಿದರು. ಕೊನೆಯಲ್ಲಿ ಶಿಕ್ಷಕಿ ಸಂಪತ್ ಕುಮಾರಿ ವಂದಿಸಿದರು.

## ಇಂದು ಸಿನಿಮಾ ಸಿರಿಯ ಸದಸ್ಯರ ಮಹಾಸಭೆ

ದಾವಣಗೆರೆಯ ಚಲನಚಿತ್ರ ಅಭಿಮಾನಿಗಳ ಕ್ರಿಯಾತ್ಮಕ ಸಂಸ್ಥೆ 'ಸಿನಿಮಾ ಸಿರಿ' ಸಂಸ್ಥೆಯು ಇಂದು ಸಂಜೆ 6 ಕ್ಕೆ ನಗರದ ಶಿವಯೋಗ ಮಂದಿರದ ಜಯದೇವ ಹಾಸ್ಟೆಲ್ ಸಭಾಂಗಣದಲ್ಲಿ ಅಧ್ಯಕ್ಷ ಸುರಭಿ ಶಿವಮೂರ್ತಿ ಅಧ್ಯಕ್ಷತೆಯಲ್ಲಿ ಸರ್ವ ಸದಸ್ಯರ ಮಹಾಸಭೆ ಕರೆಯಲಾಗಿದೆ ಎಂದು ಸಂಸ್ಥೆ ಪ್ರಧಾನ ಕಾರ್ಯದರ್ಶಿ ಎಂ.ಜಿ. ಜಗದೀಶ್, ಸಂಸ್ಥೆಯ ಸಂಸ್ಥಾಪಕರಲ್ಲೊಬ್ಬರಾದ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

## ನಗರದಲ್ಲಿ ಇಂದು, ನಾಳೆ ರಾಜ್ಯ ಮಟ್ಟದ ಮಹಿಳಾ ಸಮ್ಮೇಳನ

ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ಆಶ್ರಯದಲ್ಲಿ ಇಂದು, ನಾಳೆ ರಾಜ್ಯಮಟ್ಟದ ಮಹಿಳಾ ಸಮ್ಮೇಳನವನ್ನು ಇಂದು ಮತ್ತು ನಾಳೆ ನಗರದ ಚನ್ನಗಿರಿ ವಿರೂಪಾಕ್ಷಪ್ಪ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ. ಬಹಿರಂಗ ಅಧಿವೇಶನದಲ್ಲಿ ಇಂದು ಬೆಳಿಗ್ಗೆ 10 ಕ್ಕೆ ಮೆರವಣಿಗೆ ಜಯದೇವ ವೃತ್ತದಿಂದ ನಡೆಯುವುದು. ಬೆಳಿಗ್ಗೆ 11 ಕ್ಕೆ ಹೈಸ್ಕೂಲ್ ಮೈದಾನದಲ್ಲಿ ಸಾರ್ವಜನಿಕ ಸಭೆ, ಸಂಜೆ 4 ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯುವುದು.

## ಡಿಆರ್‌ಎಂ ಕಾಲೇಜಿನಲ್ಲಿ ಇಂದು ಪುರಸ್ಕಾರ

ಧ.ರಾ.ಮ. ವಿಜ್ಞಾನ ಪದವಿ ಪೂರ್ವ ಕಾಲೇಜು ಆಶ್ರಯದಲ್ಲಿ ಇಂದು ಬೆಳಿಗ್ಗೆ 10 ಕ್ಕೆ ಪಠ್ಯೇತರ ಚಟುವಟಿಕೆಗಳ ಸಮಾರೋಪ ಹಾಗೂ ಪ್ರತಿಭಾ ಪುರಸ್ಕಾರವನ್ನು ಕಾಲೇಜು ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಕರಿಸಿದ್ದಪ್ಪ ಎಸ್.ಜಿ., ಡಾ. ಉಷಾ ಎಂ.ಜಿ ಆಗಮಿಸುವರು. ಕಾರ್ಯ ಕ್ರಮದಲ್ಲಿ ಡಾ. ಆರ್. ವನಜಾ ಉಪಸ್ಥಿತ ರಿರುವರು. ಪ್ರಾಂಶುಪಾಲ ಜೆ. ಶಿವಪ್ಪ ಅಧ್ಯಕ್ಷತೆ ವಹಿಸುವರು ಸಂಚಾಲಕರಾಗಿ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಶೋಭಾ ಟಿ. ಆಗಮಿಸುವರು.

# ವೇಮನ ಶ್ರೀಗಳಿಂದ 10 ವರ್ಷಗಳಲ್ಲಿ ಅದ್ಭುತ ಸಾಧನೆ

## ಹೊಸಹಳ್ಳಿ : ಹೇಮ-ವೇಮ ವಿದ್ಯಾಪೀಠದ ದಶಮಾನೋತ್ಸವ ಸಮಾರಂಭದಲ್ಲಿ ಶಿವಶಂಕರ ರೆಡ್ಡಿ ಮೆಚ್ಚುಗೆ



ಮಲೇಬೆನ್ನೂರು, ಜ.5- ಶ್ರೀ ವೇಮನಾನಂದ ಶ್ರೀಗಳು ಧರ್ಮದ ಜೊತೆಗೆ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಸಮಾಜವನ್ನು ಬೆಳೆಸುವುದರ ಜೊತೆಗೆ ವೇಮನ ಮತ್ತು ಹೇಮರೆಡ್ಡಿ ಮಲ್ಲಮ್ಮನ ಭಕ್ತರನ್ನು ಒಂದುಗೂಡಿಸುವ ಕೆಲಸವನ್ನೂ ಮಾಡಿದ್ದಾರೆ ಎಂದು ಮಾಜಿ ಸಚಿವರೂ ಆದ ವಿಧಾನಸಭೆಯ ಮಾಜಿ ಉಪಸಭಾಪತಿ ಶಿವಶಂಕರ ರೆಡ್ಡಿ ಹೇಳಿದರು.

ಅವರು, ಶುಕ್ರವಾರ ಸಂಜೆ ಹರಿಹರ ತಾಲ್ಲೂಕಿನ ಹೊಸಳ್ಳಿ ಗ್ರಾಮದಲ್ಲಿ ಮಹಾಯೋಗಿ ವೇಮನ ಸಂಸ್ಥಾನದ ರೆಡ್ಡಿ ಗುರುಪೀಠದಲ್ಲಿ ಹಮ್ಮಿಕೊಂಡಿದ್ದ ಹೇಮ-ವೇಮ ಸದ್ಬೋಧನಾ ವಿದ್ಯಾಪೀಠದ ದಶಮಾನೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಶ್ರೀಗಳು ರಾಜ್ಯದ ಉದ್ದಗಲಕ್ಕೂ ಸಂಚರಿಸಿ, ಸಮಾಜದ ಹಿರಿಯರನ್ನು ವಿಶ್ವಾಸಕ್ಕೆ ಪಡೆದು, ಸಮಾಜವನ್ನು ಒಂದುಗೂಡಿಸುವ ಮತ್ತು ಸಂಘಟಿಸುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಈ ಹಿಂದೆ ಸರ್ಕಾರ ನಮ್ಮ ವೇಮನ ಮತ್ತು ಹೇಮರೆಡ್ಡಿ ಮಲ್ಲಮ್ಮನ ಜಯಂತಿ ಆಚರಣೆಗೆ ಸರ್ಕಾರದ ಮಾನ್ಯತೆ ನೀಡುವುದರ ಜೊತೆಗೆ ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಪೀಠಗಳನ್ನು ಪ್ರಾರಂಭಿಸಿದೆ.

10 ವರ್ಷಗಳ ಹಿಂದೆ ಮುಳ್ಳುಗಿಡಗಳು ತುಂಬಿಕೊಂಡಿದ್ದ ಈ ಜಾಗ ಇವತ್ತು ಸುಂದರ ಕಲಿಕಾ ತಾಣವನ್ನಾಗಿ ಮಾಡಿರುವ ಶ್ರೀಗಳು 10 ವರ್ಷಗಳಲ್ಲೇ ಅದ್ಭುತ ಸಾಧನೆ ಮಾಡಿದ್ದಾರೆ ಎಂದು ಶಿವಶಂಕರ ರೆಡ್ಡಿ ಮೆಚ್ಚುಗೆ ವ್ಯಕ್ತಪಡಿಸಿದರು.

ಶ್ರೀ ವೇಮನಾನಂದ ಸ್ವಾಮೀಜಿ ಮಾತನಾಡಿ, 10 ವರ್ಷಗಳ ಹಿಂದೆ ಪ್ರಾರಂಭವಾದ ಈ ವಿದ್ಯಾಪೀಠದಲ್ಲಿ 40 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದರು. ಇವತ್ತು 2300 ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣ ಕಲಿಯುವಂತಹ ವಾತಾವರಣ ಸೃಷ್ಟಿಯಾಗಲು ಸಮಾಜದ ಅನೇಕರು ಸಹಕಾರ ನೀಡಿದ್ದಾರೆ.

ಶ್ರೀ ಬಸವಕುಮಾರ ಶ್ರೀಗಳ ಆಸಕ್ತಿ ಮತ್ತು ಕಾಳಜಿಯಿಂದಾಗಿ ಈ ವಿದ್ಯಾಸಂಸ್ಥೆ ಈ ಮಟ್ಟಕ್ಕೆ ಬೆಳೆಯಲು ಸಾಧ್ಯವಾಗಿದೆ. 5 ಸಾವಿರ ವಿದ್ಯಾರ್ಥಿಗಳಿಗೆ ಶಿಕ್ಷಣ ಮತ್ತು ವಸತಿ ಸೌಲಭ್ಯ ಕಲ್ಪಿಸುವ ಗುರಿ ಇಟ್ಟುಕೊಂಡು ಇಷ್ಟೆಲ್ಲಾ ಕಟ್ಟಡಗಳ ನಿರ್ಮಾಣ ಮಾಡುತ್ತಿದ್ದೇವೆ. ಇದಕ್ಕಾಗಿ ಶ್ರಮಿಸಿದವರನ್ನು ಇಲ್ಲಿ ಕರೆಸಿ, ಕೃತಜ್ಞತೆ ಸಲ್ಲಿಸುವುದೂ ಕೂಡಾ ಈ ದಶಮಾನೋತ್ಸವದ ಆಶಯವಾಗಿದೆ ಎಂದು ಶ್ರೀ ವೇಮನಾನಂದ ಸ್ವಾಮೀಜಿ ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಶ್ರೀ ಬಸವ ಕುಮಾರ ಸ್ವಾಮೀಜಿ ಅವರು, ವೇಮಾನಾನಂದ ಶ್ರೀಗಳು ದೈವ ಪ್ರೇಮ ಮತ್ತು ದೈವೀ ಶ್ರದ್ಧೆಯಿಂದಾಗಿ ಸಮಾಜದಲ್ಲಿ ಇಷ್ಟೊಂದು ಬದಲಾವಣೆ ತರಲು ಸಾಧ್ಯವಾಗಿದೆ.

ಅಕ್ಕೇರ ಲಕ್ಷ್ಮಣ ರೆಡ್ಡಿ ಅವರ ಸಂಕಲ್ಪದಂತೆ ಶ್ರೀಗಳು ಇಲ್ಲಿರುವ ಶ್ರೀರಾಮ ವನದಲ್ಲಿ ಪೂಜೆ ಸಲ್ಲಿಸಲು ಬಂದಿದ್ದರು. ನಂತರ ಅವರನ್ನು ಈ ಜಾಗ ಆಕರ್ಷಿಸಿತು. ಹೊಸಹಳ್ಳಿಯಂತಹ ಸಣ್ಣ ಊರಿನಲ್ಲಿ ರೆಡ್ಡಿ ಗುರುಪೀಠ ಮತ್ತು ವಿದ್ಯಾಪೀಠ ಸ್ಥಾಪಿಸಿ, ದೇಶ-ವಿದೇಶದವರು ಇಲ್ಲಿಗೆ ಬರುವಂತೆ ಮಾಡಿರುವ ಶ್ರೀಗಳು ತಾಯಿಯ ಸ್ವರೂಪವಾಗಿದ್ದಾರೆ. ಅವರು ಉದ್ದೇಶಗಳು ಇನ್ನೂ ಬಹಳಷ್ಟಿದ್ದು, ಹಂತ-ಹಂತವಾಗಿ ನಿಮಗಾಗಿ ಸಾಕಾರಗೊಳ್ಳಲಿವೆ ಎಂದು ಶ್ರೀ ಬಸವ ಕುಮಾರ ಸ್ವಾಮೀಜಿ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಮಾಜಿ ಸಚಿವ ಬಿ.ಆರ್. ಯಾವಗಲ್ ಮಾತನಾಡಿ, ಹೊಸಹಳ್ಳಿಯಲ್ಲಿ ಕಿನ್ನಾರ ಲೋಕ ಸೃಷ್ಟಿ ಮಾಡಿರುವ ನಮ್ಮ ಶ್ರೀಗಳ ಕ್ರಿಯಾ ಶೀಲತೆಯನ್ನು ಸಮಾಜ ಅಭಿನಂದಿಸುತ್ತದೆ. ಬಹಳ ಅದ್ಭುತವಾದ ಲೋಕವನ್ನೇ ಇಲ್ಲಿ ಸೃಷ್ಟಿ ಮಾಡಿದ್ದಾರೆ. ಇದೊಂದು ದಿನ ಈ ಕ್ಷೇತ್ರ ದೇಶದ ನಮನ ಸೆಳೆಯಲಿದೆ ಎಂದ ಯಾವಗಲ್ ಅವರು, ನಮ್ಮ ಸಮಾಜಕ್ಕೆ ಶಾಸಕರ, ಮಂತ್ರಿಗಳ ಕೊರತೆ ಇಲ್ಲ. ಆದರೆ, ಒಗ್ಗಟ್ಟಿನ ಕೊರತೆ ಎದ್ದು ಕಾಣುತ್ತಿದ್ದು, ಅದನ್ನು ಸರಿಪಡಿಸುವ ನಿಟ್ಟಿನಲ್ಲಿ ಶ್ರೀಗಳು ದಿಟ್ಟ ಹೆಜ್ಜೆ ಇಟ್ಟಿದ್ದಾರೆ.

ಸಚಿವ ರಾಮಲಿಂಗಾರೆಡ್ಡಿ ಅವರು ಅಂತರರಾಷ್ಟ್ರೀಯ ಸಮಾವೇಶ ಮಾಡುವ ಚಿಂತನೆ ಹೊಂದಿರುವ ವಿಷಯ ತಿಳಿದು ಸಂತೋಷವಾಗಿದೆ ಎಂದರು.

ಈ ವೇಳೆ ಪ್ರಗತಿಪರ ರೈತರು, ಯೋಧರು ಹಾಗೂ ಇದೇ ಶಾಲೆಯಲ್ಲಿ ಕಲಿತು ವಿವಿಧ ಸ್ಥಾನದಲ್ಲಿರುವವರನ್ನೂ ಮತ್ತು ಗುರುಪೀಠ, ವಿದ್ಯಾಪೀಠದ ಏಳಿಗೆಗಾಗಿ ಶ್ರಮಿಸಿದ ಸಮಾಜದ ಮುಖಂಡರನ್ನೂ ಸನ್ಮಾನಿಸಿ, ಗೌರವಿಸಲಾಯಿತು.

ಬೆಂಗಳೂರಿನ ಉದ್ಯಮಿಗಳಾದ ಭೈರತಿ ಬಾಬು ರೆಡ್ಡಿ, ಎಂ.ಎನ್.ರೆಡ್ಡಿ, ಶಿರಗುಪ್ಪದ ರವೀಂದ್ರ ರೆಡ್ಡಿ, ದಾವಣಗೆರೆ ಆರ್‌ವಿಆರ್ ಕಂಪನಿಯ ಆರ್.ವೆಂಕಟ ರೆಡ್ಡಿ, ಯುಎಸ್‌ಎ ಖ್ಯಾತ ವೈದ್ಯರಾದ ಡಾ. ಚಂಪಾವತಿ ನಾಗಪ್ಪ ದಂಪತಿಗಳು, ಮುದೋಳ್‌ನ ದಯಾನಂದ ಪಾಟೀಲ್, ಅಂದಾನಿ ಗೌಡ, ಸಂಪಗಿ ಕುಮಾರ ರೆಡ್ಡಿ, ಗೌರಿಬಿದನೂರಿನ ಹನುಮಂತ ರೆಡ್ಡಿ, ವಿದ್ಯಾಪೀಠದ ಉಪಾಧ್ಯಕ್ಷ ವಿಶ್ವಾಂಬರ ರೆಡ್ಡಿ, ಬಿ.ಆರ್.ತಿಪ್ಪೇಸ್ವಾಮಿ, ವೈ.ದ್ಯಾವಪ್ಪ ರೆಡ್ಡಿ, ನಂದಿಗಾವಿ ರಾಜಣ್ಣ ರೆಡ್ಡಿ, ಬಿಳಸನೂರಿನ ಹನುಮಂತ ರೆಡ್ಡಿ, ಎನ್.ರಂಗಪ್ಪ ರೆಡ್ಡಿ, ವಿಷ್ಣು ರೆಡ್ಡಿ, ಕಡ್ಲೇಗೊಂದಿ ಹನುಮಂತ ರೆಡ್ಡಿ, ಆಡಳಿತಾಧಿಕಾರಿ ಹೆಚ್.ಪಿ.ಸುಭಾಸ್, ಕಾನೂನು ಸಲಹೆಗಾರ ರುದ್ರೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ನಂತರ ವಿದ್ಯಾರ್ಥಿಗಳಿಂದ ತಡರಾತ್ರಿ ವರೆಗೂ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರ ಮನಸೂರೆಗೊಂಡವು.

# ಮಕ್ಕಳ ಆಸಕ್ತಿಗನುಗುಣವಾಗಿ ಶಿಕ್ಷಣ ನೀಡಬೇಕು : ಡಾ. ಪುಷ್ಪಲತಾ



ದಾವಣಗೆರೆ, ಜ. 5 -ಮಕ್ಕಳಿಗೆ ಆಸಕ್ತಿಯಿರುವ ವಿಷಯದಲ್ಲಿಯೇ ಶಿಕ್ಷಣ ನೀಡಿದರೆ ಆ ವ್ಯಕ್ತಿ ಆ ಕ್ಷೇತ್ರದಲ್ಲಿ ಅದ್ಭುತ ಸಾಧನೆ ಮಾಡಬಲ್ಲನು. ತಂದೆ-ತಾಯಿಯರು ತಮ್ಮ ಮಗು ವೈದ್ಯಕೀಯ ಅಥವಾ ಇಂಜಿನಿಯರ್ ಆಗಬೇಕೆಂದು ಇಚ್ಛೆಯಿಲ್ಲದ ಮಗುವನ್ನು ಒತ್ತಾಯ ಮಾಡಿ ಆ ಕೋರ್ಸ್ ಗೆ ಸೇರಿಸಿದರೆ ಮಗುವಿನ ಅಭಿವೃದ್ಧಿಗೆ ಬದಲು ಅವನತಿಯಾಗುವುದು ಎಂದು ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಡಾ. ಪುಷ್ಪಲತಾ ತಿಳಿಸಿದರು.

ಅವರು ಗುಂಡಿ ಮಹಾದೇವಪ್ಪ ಕಲ್ಯಾಣ ಮಂದಿರದಲ್ಲಿ ನಡೆದ ಮಾಂಟೆಸೊರಿ ಕಾನ್ವೆಂಟ್ ಶಾಲೆಯ ವಾರ್ಷಿಕೋತ್ಸವ ಉದ್ಘಾಟಿಸಿ ನುಡಿದರು. ಶಾಲೆಯ ಮಕ್ಕಳಿಂದ ನಡೆದ ನಿರೂಪಣೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಮತ್ತೋರ್ವ ಅತಿಥಿ ಶ್ರೀ ಕನ್ನಿಕಾ ಪರಮೇಶ್ವರಿ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಆರ್. ಜಿ.ಶ್ರೀನಿವಾಸಮೂರ್ತಿ, ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಹಾಗೂ ಕ್ರೀಡೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಣೆ ಮಾಡುತ್ತಾ ಇಂದು ಮಕ್ಕಳು ಶಿಕ್ಷಣ ಪಡೆದು ಸ್ವಂತ ಉದ್ಯೋಗ ಮಾಡಿ ಕ್ರಿಯಾಶೀಲ ಬದುಕನ್ನು ರೂಪಿಸಿಕೊಳ್ಳಬೇಕಾಗಿದೆ ಎಂದು ಪೋಷಕರಿಗೆ ಹಾಗೂ ಮಕ್ಕಳಿಗೆ ಕಿವಿಮಾತು ಹೇಳಿದರು. ಸಂಪನ್ಮೂಲ ವ್ಯಕ್ತಿಗಳಾದ ನಾಗರಾಜರವರು ಶಾಲೆಯಲ್ಲಿ ದೊರಕುತ್ತಿರುವ ಪಠ್ಯ ಹಾಗೂ ಪಠ್ಯ ಪೂರಕ ಚಟುವಟಿಕೆಗಳನ್ನು ಶ್ಲಾಘಿಸಿದರು,

ಸಮಾರಂಭದಲ್ಲಿ ಶಾಲೆಗೆ ಹತ್ತು ಡೆಸ್ಕ್‌ಗಳನ್ನು ದಾನ ಮಾಡಿದ ಶ್ರೀಮತಿ ಶ್ವೇತಾ ಹಾಗೂ ಅಜಯ್ ಅವರನ್ನು ಗೌರವಿಸಲಾಯಿತು. 8 ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಕು. ಸೌಮ್ಯರನ್ನು ಸನ್ಮಾನಿಸಲಾಯಿತು. ಕಾರ್ಯದರ್ಶಿ ಹೆಚ್.ಬಿ. ನಾಗರಾಜ್ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದ ಕೊನೆಯಲ್ಲಿ ಅಮಿತ್ ವಂದಿಸಿದರು.

## ನೂತನ ಪದಾಧಿಕಾರಿಗಳ ಆಯ್ಕೆ





ದಾವಣಗೆರೆ, ಜ. 5 - ಶ್ರೀ ಭಾವಸಾರ ಕ್ಷತ್ರಿಯ ತರುಣ ಮಂಡಳಿಯ ನೂತನ ಪದಾಧಿಕಾರಿಗಳನ್ನು ಈಚೆಗೆ ಆಯ್ಕೆ ಮಾಡಲಾಯಿತು.

ಸಮಿತಿಯ ಸಂಸ್ಥಾಪಕ ಚಂದ್ರಕಾಂತ್ ವಾದೋನೆ ಮತ್ತು ವಿನಯ್ ಜಿಂಗಾಡೆ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಅಧ್ಯಕ್ಷರಾಗಿ ವಿನಾಯಕ ಟಿಕಾರೆ, ಗೌರವಾಧ್ಯಕ್ಷರಾಗಿ ರಂಗನಾಥ್ ಆರ್. ನವಲೆ, ಉಪಾಧ್ಯಕ್ಷರಾಗಿ ಮಾಲತೇಶ್ ಗುಜ್ಜರ್, ಕಾರ್ಯದರ್ಶಿಯಾಗಿ ವಿಶ್ವನಾಥ್ ಪುಟಾಣ್‌ಕರ್, ಸಹ ಕಾರ್ಯದರ್ಶಿಯಾಗಿ ವಿಠ್ಠಲ್ ಜಿಂಗಾಡೆ, ಖಜಾಂಚಿ ವಿಜಯ್‌ಕುಮಾರ್ ವಾದೋನಿ, ಸಂಘಟನಾ ಕಾರ್ಯದರ್ಶಿಗಳಾಗಿ ಸಂತೋಷ್ ವಾದೋನಿ, ಮಂಜುನಾಥ್ ಪುಟಾಣಕರ್ ಆಯ್ಕೆಯಾಗಿದ್ದಾರೆ.

## ಹದಡಿಯಲ್ಲಿ ನಾಳೆಯಿಂದ ಶ್ರೀ ಬೀರಲಿಂಗೇಶ್ವರ ಸ್ವಾಮಿ ಕಾರ್ತಿಕ

ದಾವಣಗೆರೆ, ಜ.5- ತಾಲ್ಲೂಕಿನ ಹದಡಿ ಗ್ರಾಮದಲ್ಲಿ ದಿನಾಂಕ 7 ರಿಂದ 9 ರವರೆಗೆ ಶ್ರೀ ಬೀರಲಿಂಗೇಶ್ವರ ಸ್ವಾಮಿ ಕಾರ್ತಿಕೋತ್ಸವ ಮತ್ತು ಮುಳ್ಳು ಗದ್ದಿಗೆ ಜಾತ್ರಾ ಮಹೋತ್ಸವ ಹಾಗೂ ಕೆಂಡದಾರ್ಚನೆ, ಜಾತ್ರಾ ಮಹೋತ್ಸವ ಹಾಗೂ ಮಹಾಸ್ವಾಮಿ ಜಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ.

ದಿನಾಂಕ 7 ರ ಭಾನುವಾರ ರಾತ್ರಿ 8.30 ಕ್ಕೆ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ಕದಲಿ ಕಾರ್ತಿಕೋತ್ಸವ, ದೀಪಾರಾಧನೆ, ಪವಾಡ ಪದ, ವೀರಗಾರರ ನೃತ್ಯ ಜರಗುವುದು.

ದಿನಾಂಕ 8 ರ ಸೋಮವಾರ ಬೆಳಿಗ್ಗೆ ಶಸ್ತ್ರ ಪವಾಡಗಳು, ಶ್ರೀ ಬೀರಲಿಂಗೇಶ್ವರ ದೇವರಿಗೆ ಎಡೆ ಸಮರ್ಪಣೆ, ಮಹಾಮಂಗಳಾರತಿ, ಜವಳ, ದೀಡು ನಮಸ್ಕಾರ, ಉರುಳುಸೇವೆ ಜರುಗುವವು.

ದಿನಾಂಕ 9 ರ ಮಂಗಳವಾರ ಬೆಳಿಗ್ಗೆ 9 ಗಂಟೆಗೆ ಕೆಂಡದ ಗದ್ದುಗೆಗೆ ಜ್ಯೋತಿ ಹಚ್ಚುವುದು, ಶ್ರೀ ಬೀರಲಿಂಗೇಶ್ವರ ದೇವರ ಭಾಜಾ ಭಜಂತ್ರಿ ಮೆರವಣಿಗೆ ನಡೆಯುವುದು. ಮಧ್ಯಾಹ್ನ 1 ಗಂಟೆಗೆ ಹೊಳೆ ಪೂಜೆ, 2 ಗಂಟೆಗೆ ಶ್ರೀ ಬೀರಲಿಂಗೇಶ್ವರ, ಶ್ರೀ ಆಂಜನೇಯ ಸ್ವಾಮಿ, ಶ್ರೀ ದಂಡಿ ದುರುಗಮ್ಮ ದೇವಿ, ಶ್ರೀ ಮಸಿಯಾಂಬಿಕಾ ದೇವಿ, ಶ್ರೀ ಹೊರಟ್ಟಿ ದುರ್ಗಮ್ಮ ದೇವರುಗಳ ಹೊಳೆ ಪೂಜೆ, ಹಲಗೆ, ಡೊಳ್ಳು ವಾದ್ಯಗಳೊಂದಿಗೆ ಮೆರವಣಿಗೆ ನಡೆಯುವುದು. 3 ಗಂಟೆಗೆ ದೇವರುಗಳಿಗೆ ಎಡೆ ಸಮರ್ಪಣೆ ಮಾಡಲಾಗುವುದು.

# ಶೋಷಿತ ಸಮುದಾಯಗಳಲ್ಲಿ ಒಗ್ಗಟ್ಟು ಅವಶ್ಯ: ಕೆ.ಎಂ. ರಾಮಚಂದ್ರಪ್ಪ




ದಾವಣಗೆರೆ, ಜ. 5- ದಲಿತ, ಹಿಂದುಳಿದ, ಶೋಷಿತ ಸಮುದಾಯಗಳ ಆರ್ಥಿಕ ಪರಿಸ್ಥಿತಿ ಚಿಂತಾಜನಕವಾಗಿದೆ. ಸ್ವಾಭಿಮಾನಕ್ಕೆ ಧಕ್ಕೆ ಉಂಟಾಗುತ್ತಿದ್ದು, ಎಂತಹದ್ದೇ ಸನ್ನಿವೇಶ ಎದುರಾದರೂ ಶೋಷಿತ ಸಮುದಾಯಗಳಲ್ಲಿ ಒಗ್ಗಟ್ಟು ಅವಶ್ಯ ಎಂದು ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಅಧ್ಯಕ್ಷ ಕೆ.ಎಂ. ರಾಮಚಂದ್ರಪ್ಪ ಹೇಳಿದರು.

ನಗರದ ರೋಟರಿ ಬಾಲಭವನದಲ್ಲಿ ಶೋಷಿತ ಸಮುದಾಯಗಳ ಒಕ್ಕೂಟದ ವತಿಯಿಂದ ಜ. 28 ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಶೋಷಿತ ಸಮಾಜಗಳ ಸಮಾವೇಶದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಹಿಂದುಳಿದ ವರ್ಗದವರಾದ ಸಿದ್ಧರಾಮಯ್ಯ ಮುಖ್ಯಮಂತ್ರಿಯಾಗಿದ್ದರೂ ಸಹ ಪಟ್ಟಭದ್ರರು ಶೋಷಿತ ವರ್ಗದ ಪರ ಕೆಲಸ ಮಾಡಲು ಬಿಡದಂತಹ ವಾತಾವರಣ ನಿರ್ಮಾಣವಾಗಿದೆ ಎಂದರು.

ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ಕೈ ಬಲಪಡಿಸುವುದು ಮತ್ತು ಜಾತಿಗಣತಿ ಜಾರಿಗೆ ಆಗ್ರಹಿಸುವುದು ಶೋಷಿತ ಸಮಾಜಗಳ ಸಮಾವೇಶದ ಉದ್ದೇಶ ಎಂದು ಹೇಳಿದರು.

ಕಾಂತರಾಜ್ ಆಯೋಗದ ಜಾತಿ ಗಣತಿ ವರದಿಯನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಚಿತ್ರದುರ್ಗದಲ್ಲಿ ನಡೆಯುವ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರನ್ನು ಒತ್ತಾಯ ಮಾಡಬೇಕಾಗಿದೆ. ಹೀಗಾಗಿ ದಾವಣಗೆರೆ, ಬಳ್ಳಾರಿ, ಹಾವೇರಿ, ಶಿವಮೊಗ್ಗ, ಹೊಸಪೇಟೆ ಸೇರಿದಂತೆ ಚಿತ್ರದುರ್ಗ ಸುತ್ತಮುತ್ತಲಿನ ಶೋಷಿತ ಸಮುದಾಯಗಳ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುಂತೆ ಮನವಿ ಮಾಡಿದರು.

ಪ್ರತಿ ಜಿಲ್ಲೆಯಿಂದ ಒಂದು ಲಕ್ಷ ಜನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಜಿಲ್ಲೆಗಳಿಗೂ ಭೇಟಿ ನೀಡಿ ಸಮಾವೇಶದ ಬಗ್ಗೆ ಜನರಲ್ಲಿ ಅರಿವು ಮೂಡಿಸುತ್ತಿರುವುದಾಗಿ ಹೇಳಿದ ರಾಮಚಂದ್ರಪ್ಪ ಅವರು, ಶೋಷಿತ ಸಮುದಾಯಗಳ ಮುಖಂಡರು ಸಹ ಜನರನ್ನು ಅಧಿಕ ಸಂಖ್ಯೆಯಲ್ಲಿ ಕರೆತರುವ ಕೆಲಸ ಮಾಡಬೇಕೆಂದು ಕರೆ ನೀಡಿದರು.

ಕಾಂಗ್ರೆಸ್ ಮುಖಂಡ ಹೊದಿಗೆರೆ ರಮೇಶ್ ಮಾತನಾಡಿ, ಕೇವಲ ಶೇ. 10 ರಷ್ಟು ಜನಸಂಖ್ಯೆ ಇರುವವರು ನಮ್ಮನ್ನು ಆಳುತ್ತಿದ್ದಾರೆ. ಇವತ್ತು ಶೋಷಿತರ ಧ್ವನಿಯಾಗಿ ಉಳಿದಿರುವವರು ಸಿದ್ಧರಾಮಯ್ಯ ಒಬ್ಬರೇ. ಆದ್ದರಿಂದ ಅವರ ಕೈ ಬಲಪಡಿಸುವ ಅಗತ್ಯವಿದೆ ಎಂದರು.

ದಾವಣಗೆರೆ ಜಿಲ್ಲೆಯಿಂದ ಅತಿ ಹೆಚ್ಚು ಸಂಖ್ಯೆಯಲ್ಲಿ ಶೋಷಿತ ಜನರನ್ನು ಸಮಾವೇಶಕ್ಕೆ ಕರೆದೊಯ್ಯುವ ಕೆಲಸವನ್ನು ಮಾಡುವುದಾಗಿ ಹೇಳಿದರು.

ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ, ಉಪ್ಪಾರ ಸಮಾಜದ ರಾಜ್ಯಾಧ್ಯಕ್ಷ ತುರ್ಚಘಟ್ಟದ ಬಸವರಾಜಪ್ಪ, ರಾಜ್ಯ ಕಾಂಗ್ರೆಸ್ ಮಾಧ್ಯಮ ಸಂಯೋಜಕ ಡಿ. ಬಸವರಾಜ್, ಮಾಜಿ ಶಾಸಕ ಎಸ್. ರಾಮಪ್ಪ, ವಕೀಲ ಜಯದೇವನಾಯ್ಕ, ಕಾಂಗ್ರೆಸ್ ಮುಖಂಡರಾದ ಸುಭಾಷ್ಚಂದ್ರ, ವೀರಣ್ಣ, ಹರಪನಹಳ್ಳಿ ಮಂಜುನಾಥ್, ಎನ್.ಜೆ. ನಿಂಗಪ್ಪ, ಶಿವಕುಮಾರ್ ಒಡೆಯರ್, ವಿವಿಧ ಸಮಾಜಗಳ ಮುಖಂಡರಾದ ಪರಶು ರಾಮಪ್ಪ, ಮುದಹದಡಿ ದಿಳ್ಳೆಪ್ಪ, ಹೊನ್ನಾಳಿ ಸಿದ್ದಪ್ಪ, ಉಮಾಪತಿ, ಅನೀಸ್ ಪಾಷಾ, ಎ.ಬಿ. ಹನುಮಂತಪ್ಪ, ಗುಬ್ಬಿ ಬಸವರಾಜ್, ಎಂ.ಬಿ. ಅಬಿದಾಲಿ, ಬಾಡ ರವಿ, ಎಸ್.ಎಸ್. ಗಿರೀಶ್ ಮತ್ತಿತರರು ಭಾಗವಹಿಸಿದ್ದರು.

# ಸೈನಿಕರು ಮತ್ತು ರೈತರ ಶ್ರಮವನ್ನು ಅರಿತು ಬಾಳಬೇಕಿದೆ

## 'ಅನ್‌ಮೋಲ್ ಉತ್ಸವ 2023' ಕಾರ್ಯಕ್ರಮದಲ್ಲಿ ಸಿ.ಜಿ.ದಿನೇಶ್




ದಾವಣಗೆರೆ, ಜ.5- ಅನ್ನ ಕೊಡುವ ರೈತ, ದೇಶ ಕಾಯುವ ಸೈನಿಕ ಇವರಿಬ್ಬರೂ ನಮ್ಮ ದೇಶದ ಬೆನ್ನೆಲುಬು. ಅವರನ್ನು ಗೌರವ ಭಾವನೆಯಿಂದ ಕಾಣುವುದು ನಮ್ಮೆಲ್ಲರ ಕರ್ತವ್ಯ. ಇವರಲ್ಲಿ ಯಾರಾದರೊಬ್ಬರು ತಮ್ಮ ಕರ್ತವ್ಯವನ್ನು ನಿಭಾಯಿಸದೇ ಹೋದರೆ ನಾಶವಾಗುವ ಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ ದೇಶದೊಳಗೆ ಬೆಚ್ಚಗಿರುವ ನಾವು ಇದನ್ನು ಅರಿತು ಬಾಳಬೇಕಿದೆ ಎಂದು ಅನ್‌ಮೋಲ್ ವಿದ್ಯಾಸಂಸ್ಥೆ ಅಧ್ಯಕ್ಷ ಸಿ. ಜಿ. ದಿನೇಶ್ ತಿಳಿಸಿದರು.

ಸಮೀಪದ ಶಿರಮಗೊಂಡನಹಳ್ಳಿಯ ಅನ್‌ಮೋಲ್ ವಿದ್ಯಾಸಂಸ್ಥೆಯ ಶಾಲಾ ಆವರಣದಲ್ಲಿ 'ಅನ್‌ಮೋಲ್ ಉತ್ಸವ 2023' ರ ಕಾರ್ಯಕ್ರಮವನ್ನು 'ಜೈ ಜವಾನ್, ಜೈ ಕಿಸಾನ್' ಎಂಬ ಶೀರ್ಷಿಕೆಯಡಿ ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭಾರತದ ಬಾವುಟ ಹಾರಾಡುತ್ತಿರುವುದು ಗಾಳಿಯಿಂದಲ್ಲ; ನಮ್ಮ ವೀರ ಯೋಧರ ಉಸಿರಿನಿಂದ. ಸೈನಿಕರು ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿ, ಪ್ರಾಣವನ್ನೇ ಒತ್ತೆ ಇಟ್ಟು, ನಮ್ಮ ಗಡಿಯನ್ನು ಸಂರಕ್ಷಣೆ ಮಾಡುತ್ತಿರುವುದರಿಂದ ನಾವೆಲ್ಲ ನೆಮ್ಮದಿಯಿಂದ ಜೀವಿಸಲು ಸಾಧ್ಯವಾಗಿದೆ.

ಹಾಗಾಗಿ ಸೈನಿಕರು ಮತ್ತು ನಮ್ಮ ಅನ್ನದಾತ ರೈತರ ತ್ಯಾಗ ಶ್ರಮವನ್ನು ಪದಗಳಲ್ಲಿ ವರ್ಣಿಸಲಾಗದು. ಅವರು ನಿತ್ಯ ಪ್ರಾತಃಸ್ಮರಣೀಯರು. ಅವರಿಗೆ ನಮನ ಸಲ್ಲಿಸಲು ಈ ಕಾರ್ಯಕ್ರಮ ಅರ್ಪಿಸಲಾಗಿದೆ ಎಂದರು.

ಅನ್‌ಮೋಲ್ ವಿದ್ಯಾಸಂಸ್ಥೆಯು ಪ್ರತಿವರ್ಷ ವಿಭಿನ್ನ ವಿಷಯಾಧಾರಿತ ವಾರ್ಷಿಕೋತ್ಸವ ಆಚರಿಸುತ್ತಾ ಬಂದಿದ್ದು, ಈವರೆಗೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ವಿಶೇಷ, ವಚನ ಸಂಭ್ರಮ, ಚಿತ್ರಾಂಜಲಿ, ಮೇರಾ ಭಾರತ್ ಮಹಾನ್, ದಶರೂಪಿ, ಅನುಬಂಧ, ಭಾವೈಕ್ಯತಾ, ನವರಸ, ಪ್ರಕೃತಿ, ಭಾವ ಸಂಗಮ ಹಾಗೂ ಗಂಧದಗುಡಿ ಎಂಬ ಉತ್ಸವಗಳನ್ನು ಆಚರಿಸಿ ಪೋಷಕರ ಹಾಗೂ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿದೆ ಎಂದು ದಿನೇಶ್ ತಿಳಿಸಿದರು.

2022-23 ನೇ ಸಾಲಿನಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ 'ಪ್ರತಿಭಾ ಪುರಸ್ಕಾರ', 'ವರ್ಷದ ವಿದ್ಯಾರ್ಥಿ' ಪ್ರಶಸ್ತಿ ಪುರಸ್ಕಾರಗಳನ್ನು ನೀಡಲಾಯಿತು. ನಂತರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ರೈತ ಮತ್ತು ಸೈನಿಕರಿಗೆ ಸಂಬಂಧಿಸಿದ ಗೀತ ಗಾಯನ, ನೃತ್ಯಗಳು ಮತ್ತು ಮೈಮ್‌ನ್ನು ವಿದ್ಯಾರ್ಥಿಗಳು ನಡೆಸಿಕೊಟ್ಟಿದ್ದು ವಿಶೇಷವಾಗಿತ್ತು.

ಸಮಾರಂಭದಲ್ಲಿ ಸಂಸ್ಥೆ ಉಪಾಧ್ಯಕ್ಷ ರವೀಂದ್ರ ಡಿ.ವಿ, ಖಜಾಂಚಿ ರಾಜು ಎಸ್ ಎಸ್, ಜಂಟಿ ಕಾರ್ಯದರ್ಶಿ ಭೈರೇಶ್ ಕೆ ಇ, ಸದಸ್ಯರಾದ ಉಮೇಶ್ ಬಿ ಓ, ಶಿವಲಿಂಗಪ್ಪ ಕೆ ಎನ್, ಕಲ್ಲೇಶ್ ಟಿ. ಪಿ, ಪ್ರಕಾಶ್ ಬಿ. ಯು, ಹಾಗೂ ಸಂಸ್ಥೆಯ ಸಲಹಾ ಸಮಿತಿ ಸದಸ್ಯ ಎಸ್. ಚಿದಾನಂದ್, ಪ್ರಾಂಶುಪಾಲ ಕೊಟ್ರೇಶ್ ಯು ಮತ್ತು ಸುಬ್ರಹ್ಮಣಿ ಎಲ್, ಉಪನ್ಯಾಸಕರು, ಬೋಧಕ ಹಾಗೂ ಬೋಧಕೇತರ ವರ್ಗದವರು, ಪೋಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಜ್ಞಾನವಾಪಿ ಸಮೀಕ್ಷೆ ವಿವರ : ಇಂದು ನಿರ್ಧಾರ

ವಾರಣಾಸಿ, ಜ. 5 – ಜ್ಞಾನವಾಪಿ ಮಸೀದಿ ಸಂಕೀರ್ಣದಲ್ಲಿ ಪುರಾತತ್ವ ಇಲಾಖೆ ನಡೆಸಿರುವ ಸಮೀಕ್ಷೆಯ ವಿವರಗಳನ್ನು ಬಹಿರಂಗ ಪಡಿಸುವ ಬಗ್ಗೆ ವಾರಣಾಸಿ ನ್ಯಾಯಾಲಯ ಶನಿವಾರ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆ ಇದೆ. ಈ ಕುರಿತ ಆದೇಶ ಇನ್ನೂ ಟೈಪ್ ಮಾಡಿಲ್ಲ. ಶನಿವಾರ ಆದೇಶ ನೀಡುವುದಾಗಿ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶ ಎ.ಕೆ. ವಿಶ್ವೇಶ್ ತಿಳಿಸಿದ್ದಾರೆ ಎಂದು ವಕೀಲ ಮದನ್ ಮೋಹನ್ ಯಾದವ್ ತಿಳಿಸಿದ್ದಾರೆ.

## ಚಿತ್ರದುರ್ಗದಲ್ಲಿ 28ರಂದು ಶೋಷಿತರ ಜಾಗೃತಿ ಸಮಾವೇಶ

ದಾವಣಗೆರೆ, ಜ.5- ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ, ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಇದೇ ಜ.28ರಂದು 'ಶೋಷಿತರ ಜಾಗೃತಿ ಸಮಾವೇಶ' ಹಮ್ಮಿಕೊಳ್ಳಲಾಗಿದೆ.

ಚಿತ್ರದುರ್ಗದ ಶ್ರೀ ಬಸವ ಮೂರ್ತಿ ಮಾದಾರ ಚನ್ನಯ್ಯ ಪೀಠದ ಪಕ್ಕದ ಮೈದಾನದಲ್ಲಿ ನಡೆಯುವ ಈ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಭಾಗವಹಿಸಲಿದ್ದಾರೆ ಎಂದು ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಅಧ್ಯಕ್ಷ ಕೆ.ಎಂ. ರಾಮಚಂದ್ರಪ್ಪ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಹೆಚ್.ಕಾಂತರಾಜು ವರದಿಯನ್ನು ಸರ್ಕಾರ ಕೂಡಲೇ ಸ್ವೀಕರಿಸಿ ಯಥಾವತ್ತಾಗಿ ಅಂಗೀಕರಿಸಿ ಜಾರಿಗೊಳಿಸಬೇಕು. ಕೇಂದ್ರ ಸರ್ಕಾರವು ಜಾತಿವಾರು, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆ ನಡೆಸಬೇಕು. ಇಡಬ್ಲ್ಯೂಎಸ್ ಶೇ.10ರ ಮೀಸಲಾತಿ ರದ್ದು ಪಡಿಸಬೇಕು. ಮಹಿಳಾ ರಾಜಕೀಯ ಕಾಯ್ದೆ ಜಾರಿ ಮಾಡಬೇಕು. ರಾಜಕೀಯ ಕ್ಷೇತ್ರದಲ್ಲೂ ಒಳ ಮೀಸಲಾತಿ ಕಲ್ಪಿಸಬೇಕು. ವಿಧಾನಸಭೆ ಹಾಗೂ ಲೋಕಸಭೆಯಲ್ಲಿ ಹಿಂದುಳಿದ ಜಾತಿ ಹಾಗೂ ಅಲ್ಪಸಂಖ್ಯಾತರಿಗೆ ರಾಜಕೀಯ ಮೀಸಲಾತಿ ಕಲ್ಪಿಸಬೇಕು. ಖಾಸಗಿ ಕ್ಷೇತ್ರಕ್ಕೂ ಮೀಸಲಾತಿ ವಿಸ್ತರಿಸಬೇಕು. ಜನಸಂಖ್ಯೆಗನುಗುಣವಾಗಿ ಮೀಸಲಾತಿ ಶೇಕಡವಾರು ಹೆಚ್ಚಿಸಬೇಕು ಎಂಬುದು ನಮ್ಮ ಹಕ್ಕೊತ್ತಾಯಗಳಾಗಿವೆ ಎಂದವರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಹೊದಿಗೆರೆ ರಮೇಶ್, ಎಣ್ಣೆಗೆರೆ ವೆಂಕಟರಾವ್, ಡಿ.ಬಸವರಾಜ್, ವೆಂಕಟ ಸುಬ್ಬರಾಜ್, ಎಂ. ರಾಮಚಂದ್ರಪ್ಪ, ಅಂಜಿನಪ್ಪ, ಸುಬ್ರಹ್ಮಣ್ಯ, ಹೆಚ್.ಚಂದ್ರಪ್ಪ ಇತರರು ಉಪಸ್ಥಿತರಿದ್ದರು.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ, ನಂ.5, ಭದ್ರಾ ನಾಲಾ ವಿಭಾಗ, ದಾವಣಗೆರೆ. ಫೋ: 08192–264669
ಇ–ಮೇಲ್: eebcddvg@yahoo.co.in

No. EE:KNNL:BCD-5:DVG:PB-6:Informative Quotation:2023-24:2039 Date:03.01.2024

**INFORMATIVE QUOTATION NOTIFICATION**

Informative quotations are invited from reputed agencies by the Executive Engineer, KNNL, No.5 Bhadra Canal Division, Davangere, for the Daily essential Office items Last date for receiving the informative quotations is 11.01.2024 Details of Required salient features of items can be obtained from this office during office hours. The work consists of the following items, Item:- (1) Xerox Machine(CANON 2625 print upto 25ppm) Quantity in no's:-1 (2) Computer (All in one Desktop INTEL i5 13th gen Processor 8GB RAM 512 GB SSD with Windows 11 & mocrosoft Office) Quantity in no's:-1 (3) Generator (Ashok Layland) 5KVA Quantity in no's:-1 (4) Printer (Black and White) Quantity in no's:-1 (5) UPS 3KV Quantity in no's:-1 (6) Computer table 2*5 Quantity in no's:-1 (7) Office table 3*5 Quantity in no's:-1 (8) Office chairs push back Quantity in no's:-1 (9) Assistant Executive Engineer Chair Quantity in no's:-1 (10) Almerah Quantity in no's:-1 (11) Printer (Color) Quantity in no's:-1
Note :- The rates shall be inclusive of all taxes, duties, levies, transportation etc., complete, and Quantity is varied depending on the Requirement


ವಾಸಾಇ/ಡಿವಿಜಿ/468/ ಕೆಎಸ್‌ಎಂಸಿಎ/2023–24
ಸಹಿ/– ಕಾರ್ಯಪಾಲಕ ಇಂಜಿನಿಯರ್, ಕನೀನಿನಿ ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ.

## 9ರಂದು ಶ್ರೀ ಕಟ್ಟೆ ದುರುಗಮ್ಮದೇವಿ ಕಡೇ ಕಾರ್ತಿಕೋತ್ಸವ



ದಾವಣಗೆರೆ, ಜ. 5 - ನಗರದ ಹೊಂಡದ ರಸ್ತೆಯ ಶ್ರೀ ಕಟ್ಟೆ ದುರುಗಮ್ಮದೇವಿ ದೇವಸ್ಥಾನದಲ್ಲಿ ಶ್ರೀ ಕಟ್ಟೆ ದುರುಗಮ್ಮದೇವಿಯ ಮಂಡಲ ಪೂಜಾ ಕಾರ್ಯಕ್ರಮವು ನಾಡಿದ್ದು ದಿನಾಂಕ 7ರ ಬೆಳಿಗ್ಗೆ 9 ಗಂಟೆಗೆ ಶ್ರೀ ದೇವಿಯ ಅಭಿಷೇಕ ಮತ್ತು ಮಹಾ ಮಂಗಳಾರತಿ, ನಂತರ ಮಧ್ಯಾಹ್ನ 12 ಕ್ಕೆ ಪ್ರಸಾದ ವಿತರಣೆ ನಡೆಯುತ್ತದೆ. ಕಾರ್ಯಕ್ರಮವು ದೇವಸ್ಥಾನದ ಪೌರೋಹಿತ್ಯರ ಸಮ್ಮುಖದಲ್ಲಿ ನೆರವೇರುವುದು. ಇದೇ ದಿನಾಂಕ 9ರ ಮಂಗಳವಾರ ದೇವಿಯ ಕಡೇ ಕಾರ್ತಿಕೋತ್ಸವವು ರಾತ್ರಿ 8 ಗಂಟೆಗೆ ನಡೆಯಲಿದೆ. ಭಕ್ತಾದಿಗಳು ಆಗಮಿಸಿ ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ದೇವಸ್ಥಾನದ ಟ್ರಸ್ಟ್‌ನವರು ತಿಳಿಸಿದ್ದಾರೆ.

## ನಗರದ ಐರಣಿ ಶಾಖಾ ಮಠದಲ್ಲಿ ಇಂದು ಕಾರ್ತಿಕೋತ್ಸವ



ಶಿವಾಜಿನಗರದ ಬಳಿಯ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದ ಬಳಿ ಇರುವ ರಾಣೇಬೆನ್ನೂರು ತಾಲ್ಲೂಕಿನ ಐರಣಿ ಹೊಳೆ ಮಠದ ಶಾಖಾ ಮಠದಲ್ಲಿ ಇಂದು ಸಂಜೆ 7.30ಕ್ಕೆ ಕಡೇ ಕಾರ್ತಿಕೋತ್ಸವ ನಡೆಯಲಿದೆ ಎಂದು ಶಾಖಾ ಮಠದ ಜೋಗಪ್ಪರ ಶಿವಾನಂದ್ ತಿಳಿಸಿದ್ದಾರೆ.

ಐರಣಿ ಹೊಳೆಮಠದ ಶ್ರೀ ಬಸವರಾಜ ದೇಶೀಕೇಂದ್ರ ಸ್ವಾಮೀಜಿ ಇಂದು ಸಂಜೆ 4 ಗಂಟೆಗೆ ನಗರಕ್ಕೆ ಆಗಮಿಸಲಿದ್ದು, ಕಾರ್ತಿಕೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ದೀಪೋತ್ಸವಕ್ಕೆ ಚಾಲನೆ ನೀಡಿ, ಆಶೀರ್ವಚನ ಮಾಡುವರು.

# ರೈತನ ಶ್ರಮ ವ್ಯರ್ಥ ಮಾಡಬೇಡಿ : ಕವಿತಾ ಉಮಾಶಂಕರ್

ದಾವಣಗೆರೆ, ಜ.5- ಎಲ್ಲರ ಜೀವನ ಪ್ರಾರಂಭವಾಗುವುದೇ 'ರೈತ' ಎಂಬ ಎರಡಕ್ಷರಿಂದ. ಬೆಳಿಗ್ಗೆ ಹಾಲು, ಚಹಾ ಕುಡಿಯುವ ಮೂಲಕ ದಿನ ಆರಂಭಿಸುತ್ತೇವೆ. ಅದರಲ್ಲಿ ರೈತನ ಶ್ರಮ ಇರುತ್ತದೆ. ಆದರೆ ಹಾಲು ಬಿಳಿಯಾಗಿರುವಷ್ಟು ರೈತನ ಬದುಕು ಬಿಳಿಯಾಗಿರುವುದಿಲ್ಲ ಎಂದು ಪ್ರಗತಿಪರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ರೈತ ಮಹಿಳೆ ಕವಿತಾ ಉಮಾಶಂಕರ್ ಮಿಶ್ರಾ ಹೇಳಿದರು.

ಶುಕ್ರವಾರ ಸಂಜೆ ನಗರದ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ 54ನೇ ವಾರ್ಷಿಕ ಸಂಭ್ರಮ-2024 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಒಂದೆರಡು ತಾಸಿನಲ್ಲಿ ಅನ್ನ-ಸಾರು ತಯಾರಿಸಿ, ಸೇವಿಸುತ್ತೇವೆ. ಆದರೆ ಅದಕ್ಕೆ ಬೇಕಾದ ಅಕ್ಕಿ, ಬೇಳೆ ಬೆಳೆಯಬೇಕಾದರೆ ರೈತ ತನ್ನ ಬೆವರ ಜೊತೆ ರಕ್ತವನ್ನೂ ಹರಿಸಿರುತ್ತಾನೆ. ಆದ್ದರಿಂದ ಅನ್ನವನ್ನು ವ್ಯರ್ಥ ಮಾಡಬೇಡಿ ಎಂದು ಮನವಿ ಮಾಡಿದರು.

**ಕೃಷಿಯಲ್ಲಿ ಸಾಧಿಸಿ ತೋರಿಸಿ:** ಹೆಣ್ಣು, ಹೊನ್ನು, ಮಣ್ಣಿನ ಬೆಲೆ ಎಂದೂ ಕಡಿಮೆಯಾಗುವುದಿಲ್ಲ. ಕೃಷಿಯಲ್ಲಿ ಸಾಕಷ್ಟು ಅವಕಾಶಗಳಿವೆ. ಹಿರಿಯರು ನಿಮಗೆ ಒಂದು ಎಕರೆ ಜಮೀನು ಉಳಿಸಿದ್ದರೂ ಅದರಲ್ಲಿಯೇ ಬೆಳೆದು ಸಾಧಿಸಿ ತೋರಿಸಿ, ಅದೇ ಸಮಾಜಕ್ಕೆ ನೀವು ನೀಡುವ ದೊಡ್ಡ ಕೊಡುಗೆ ಎಂದರು.

**ನಿಮ್ಮ ಜೀವನದ ಶಿಲ್ಪಿ ನೀವೇ:** ನಿಮ್ಮನ್ನು ನೀವು ಬೇರೆಯವರಿಗೆ ಹೋಲಿಕೆ ಮಾಡಿಕೊಳ್ಳಬೇಡಿ. ತ್ಯಾಗ, ಸ್ವ ಸಮರ್ಪಣೆ, ಶಕ್ತಿ ಮಹಿಳೆಯಲ್ಲಿರುತ್ತದೆ. ನಿಮ್ಮ ಜೀವನದ ಶಿಲ್ಪಿ ನೀವೇ ಎಂಬುದು ತಿಳಿದಿರಲಿ. ಬೇಡಿ ತಿಂದರೆ ಸಣ್ಣವರಾಗುತ್ತೇವೆ. ಯಾವುದೇ ಕೆಲಸವಿರಲಿ ದುಡಿದು ತಿಂದರೆ ನಾವೇ ದೊಡ್ಡವರು ಎಂದು ತಮ್ಮ ನುಡಿಗಳ ಮೂಲಕ ಮಹಿಳೆಯರಿಗೆ ಧೈರ್ಯ ತುಂಬಿದರು.

**ಯಶೋಗಾಥೆ ಬಿಚ್ಚಿಟ್ಟ ಕವಿತಾ:** ತಾವು ಇಂಜಿನಿಯರಿಂಗ್ ಪದವಿ ಪಡೆದದ್ದು, ವಿವಾಹವಾಗಿದ್ದು, ನಂತರ ಕೃಷಿ ಕ್ಷೇತ್ರದಲ್ಲಿನ ಏಳು-ಬೀಳು, ಸಾಧನೆಗಳನ್ನು ವಿವರವಾಗಿ ವಿದ್ಯಾರ್ಥಿಗಳ ಮುಂದೆ ಬಿಚ್ಚಿಟ್ಟ ಕವಿತಾ ಅವರು, ಪ್ರಸ್ತುತ ಋತು ಆಧಾರಿತ ಬೆಳೆ ಪದ್ಧತಿ ಅಳವಡಿಸಿಕೊಂಡು ಸಾಕಷ್ಟು ಲಾಭ ಪಡೆಯುತ್ತಿರುವುದಾಗಿ ಹೇಳಿದರು.

**ಪ್ರಶಸ್ತಿಗಳ ಸಮರ್ಪಣೆ:** ತಮಗೆ ಬಂದಿರುವ ರಾಷ್ಟ್ರ, ರಾಜ್ಯ ಪ್ರಶಸ್ತಿಗಳೆಲ್ಲವನ್ನೂ ನೆರೆದಿದ್ದ ವಿದ್ಯಾರ್ಥಿಗಳಿಗೇ ಅರ್ಪಿಸುವುದಾಗಿ ಕವಿತಾ ಉಮಾಶಂಕರ್ ಹೇಳಿದರು.

ಸಮಾರಂಭದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲಿ ಸುದೀರ್ಘ ಸೇವೆ ಸಲ್ಲಿಸಿದ ಶಿಕ್ಷಕಿ ಶಶಿಕಲಾ ಸಾಯಿನಾಥ್ ಅವರನ್ನು ಸನ್ಮಾನಿಸಲಾಯಿತು. ದ್ವಿತೀಯ ಪಿ.ಯು.ಸಿಯಲ್ಲಿ ಶೇ.90ಕ್ಕೂ ಹೆಚ್ಚು ಅಂಕ ಪಡೆದ ಮಕ್ಕಳಿಗೆ ಸಿದ್ಧಗಂಗಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಶ್ರೀ ಸಿದ್ಧಗಂಗಾ ಪದವಿ ಪೂರ್ವ ಕಾಲೇಜು ಪ್ರಾಚಾರ್ಯರಾದ ವಾಣಿಶ್ರೀ ಅಧ್ಯಕ್ಷತೆ ವಹಿಸಿದ್ದರು. ಸಿದ್ಧಗಂಗಾ ಸ್ಕೂಲ್ (ಸಿಬಿಎಸ್‌ಇ) ಸಹ ಶಿಕ್ಷಕಿ ಅಂಬುಜಾಕ್ಷಿ ಎನ್., ಪದವಿ ಪೂರ್ವ ಕಾಲೇಜು ಉಪನ್ಯಾಸಕ ಅರುಣ್ ಕುಮಾರ್ ಜೆ.ಎಂ., ಸಂಸ್ಥೆಯ ಮುಖ್ಯಸ್ಥೆ ಜಸ್ಟಿನ್ ಡಿ'ಸೌಜ, ಪದವಿ ಪೂರ್ವ ಕಾಲೇಜು ನಿರ್ದೇಶಕ ಡಾ.ಜಯಂತ್ ಡಿ.ಎಸ್. ಉಪಸ್ಥಿತರಿದ್ದರು. ಮುಖ್ಯ ಶಿಕ್ಷಕಿ ಕೆ.ಎಸ್. ರೇಖಾರಾಣಿ ನಿರೂಪಿಸಿದರು. ಕು.ಯಶಸ್ವಿನಿ ಅತಿಥಿಗಳನ್ನು ಪರಿಚಯಿಸಿದರು.



ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ವಾರ್ಷಿಕ ಸಂಭ್ರಮ

### ತಂದೆ, ಪತಿ, ಮಗನಿಂದ ಹೆಣ್ಣಿಗೆ ಬಲ

ಒಂದು ಹೆಣ್ಣಿಗೆ ಬಲ ಬರುವುದು ಮೂರು ಜನರಿಂದ. ತಂದೆ ವಿದ್ಯೆ ಎಂಬ ಅಸ್ತ್ರವನ್ನು, ಪತಿ ಪ್ರೀತಿ ಎಂಬ ಅಸ್ತ್ರವನ್ನು ಹಾಗೂ ಮಗ ಆಸರೆ ಎಂಬ ಅಸ್ತ್ರವನ್ನು ಕೊಟ್ಟಾಗ ಹೆಣ್ಣಿಗೆ ಶಕ್ತಿ ಬರುತ್ತದೆ. ಈ ಮೂವರು ಮಹಿಳೆಯ ಕೈ ಹಿಡಿದರೆ ಜಗತ್ತಿನಲ್ಲಿ ಯಾವ ವೃದ್ಧಾಶ್ರಮ, ಅನಾಥಾಶ್ರಮ, ಸಾಂತ್ವನ ಕೇಂದ್ರಗಳೂ ಇರುವುದಿಲ್ಲ ಎಂದರು.

ತಾಯಿ, ತಂಗಿ, ಹೆಂಡತಿ ಯಾರೇ ಆಗಿರಲಿ. ಅವರು ನಿಮಗೆ ಏನು ಮಾಡದಿದ್ದರೂ ಸಹ ನೀವು ಅವರಿಗೆ ಪ್ರೀತಿ, ಗೌರವ ಕೊಡಿ ಎಂದು ಪುರುಷರಿಗೆ ಕರೆ ನೀಡಿದರು.

# 12ರ ವರೆಗೆ ಮತದಾರರ ಪಟ್ಟಿ ಪರಿಷ್ಕರಣೆಗೆ ಅವಕಾಶ

### ಪಟ್ಟಿಯಲ್ಲಿ ಲೋಪವಾಗದಂತೆ ಎಚ್ಚರವಹಿಸಲು ಮತದಾರರ ಪಟ್ಟಿ ವೀಕ್ಷಕರಾದ ಗುಂಜನ್ ಕೃಷ್ಣ ಸೂಚನೆ



ದಾವಣಗೆರೆ, ಜ. 5 - ಚುನಾವಣಾ ಆಯೋಗವು ಮತದಾರರ ಪಟ್ಟಿ ಸಂಕ್ಷಿಪ್ತ ಪರಿಷ್ಕರಣೆಗೆ ಜ. 12ರ ವರೆಗೆ ಅವಕಾಶ ಕಲ್ಪಿಸಿದ್ದು ತಿದ್ದುಪಡಿ, ಸೇರ್ಪಡೆ, ಮರಣ ಹೊಂದಿದ ಮತದಾರರನ್ನು ಕೈಬಿಡಬಹುದಾಗಿದ್ದು, ಪರಿಷ್ಕರಣೆಯ ವೇಳೆ ದಾಖಲೆಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ, ದಾವಣಗೆರೆ ಜಿಲ್ಲಾ ಮತದಾರರ ಪಟ್ಟಿ ವೀಕ್ಷಕರಾದ ಶ್ರೀಮತಿ ಗುಂಜನ್ ಕೃಷ್ಣ ಸೂಚನೆ ನೀಡಿದರು.

ಅವರು ಶುಕ್ರವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ, ತಹಶೀಲ್ದಾರರು, ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ನಡೆಸಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಚುನಾವಣಾ ಆಯೋಗ ಪಟ್ಟಿ ಸಂಕ್ಷಿಪ್ತ ಪರಿಷ್ಕರಣೆಗೆ ಅವಕಾಶ ಕಲ್ಪಿಸಿದ್ದು, ಈ ಅವಧಿಯಲ್ಲಿ ಹೆಚ್ಚು ಹೆಚ್ಚು ಯುವ ಮತದಾರರನ್ನು ಸೇರ್ಪಡೆ ಮಾಡುವ ನಿಟ್ಟಿನಲ್ಲಿ ಮುಂದಾಗಬೇಕು. ಮತದಾರರ ಪಟ್ಟಿಯಲ್ಲಿ ಪರಿಷ್ಕರಣೆ ಮಾಡುವಾಗ ಸ್ವಯಂ ಪ್ರೇರಿತರಾಗಿ ಯಾವುದೇ ದಾಖಲೀಕರಣ ಮಾಡದೇ ದಾಖಲೆಗಳನ್ನಿಟ್ಟುಕೊಂಡು ಸೇರ್ಪಡೆ, ತಿದ್ದುಪಡಿ ಮತ್ತು ಮರಣ ಹೊಂದಿದ ಮತದಾರರನ್ನು ಕೈಬಿಡುವ ಕೆಲಸ ಮಾಡಬೇಕೆಂದರು. ಮತದಾರರ ಪಟ್ಟಿ ವೀಕ್ಷಕರ ಲಾಗಿನ್‌ಗೆ ಸಲ್ಲಿಕೆಯಾದ ನಮೂನೆ 6,7,8 ರಡಿ ಸಲ್ಲಿಸಿದ ಅರ್ಜಿಗಳಲ್ಲಿ 208 ಅರ್ಜಿಗಳನ್ನು ಅಧಿಕಾರಿಗಳ ಹಾಗೂ ರಾಜಕೀಯ ಪಕ್ಷಗಳ ಮುಖಂಡರ ಸಮ್ಮುಖದಲ್ಲಿ ಪರಿಶೀಲನೆ ನಡೆಸಿದರು.

ಒಟ್ಟು ಜಿಲ್ಲೆಯಲ್ಲಿ ಜ. 4ರ ವರೆಗೆ 727204 ಪುರುಷ, 731251 ಮಹಿಳೆಯರು, 120 ಇತರೆ, 454 ಸೇವಾ ಮತದಾರರು ಸೇರಿ 1459029 ಮತದಾರರಿದ್ದಾರೆ. ಕ್ಷೇತ್ರವಾರು ಮತದಾರರಲ್ಲಿ ಜಗಳೂರು 195558, ಹರಿಹರ 209919, ದಾವಣಗೆರೆ ಉತ್ತರ 246105, ದಕ್ಷಿಣ 215230, ಮಾಯಕೊಂಡ 193070, ಚನ್ನಗಿರಿ 200750, ಹೊನ್ನಾಳಿ 198397 ಮತದಾರರಿದ್ದಾರೆ.

ಸಭೆಯಲ್ಲಿ ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಉಪವಿಭಾಗಾಧಿಕಾರಿ ದುರ್ಗಾಶ್ರೀ, ಪಾಲಿಕೆ ಆಯುಕ್ತೆ ರೇಣುಕಾ, ತಹಶೀಲ್ದಾರ್ ಅಶ್ವತ್ಥ್ ಹಾಗೂ ರಾಜಕೀಯ ಪಕ್ಷಗಳ ಮುಖಂಡರು ಉಪಸ್ಥಿತರಿದ್ದರು.

# ಡಿಕೆಶಿ ವಿರುದ್ಧದ ತನಿಖೆ ವಾಪಸ್

### ವಿಸ್ತೃತ ಪೀಠಕ್ಕೆ ವಹಿಸುವ ಬಗ್ಗೆ ಮುಖ್ಯ ನ್ಯಾಯಮೂರ್ತಿ ನಿರ್ಧಾರ

ಬೆಂಗಳೂರು, ಜ. 5 – ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ವಿರುದ್ಧ ಸಿ.ಬಿ.ಐ. ತನಿಖೆ ನಡೆಸಲು ನೀಡಲಾಗಿದ್ದ ಅನುಮತಿಯನ್ನು ವಾಪಸ್ ಪಡೆದಿದ್ದನ್ನು ಪ್ರಶ್ನಿಸಿ ದಾಖಲಾಗಿರುವ ಅರ್ಜಿಯ ವಿಚಾರಣೆಯನ್ನು ವಿಸ್ತೃತ ಪೀಠಕ್ಕೆ ವಹಿಸುವ ಬಗ್ಗೆ ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ನಿರ್ಧಾರ ತೆಗೆದುಕೊಳ್ಳಲಿದ್ದಾರೆ.

ಅನುಮತಿ ವಾಪಸ್ ಪಡೆದಿರುವುದನ್ನು ಪ್ರಶ್ನಿಸಿ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರ ಏಕಸದಸ್ಯ ಪೀಠದ ಎದುರು ಅರ್ಜಿ ದಾಖಲಿಸಲಾಗಿತ್ತು. ಈ ವಿಷಯ ಬೃಹತ್ ಸ್ವರೂಪದ್ದಾಗಿರುವ ಕಾರಣ ವಿಭಾಗೀಯ ಪೀಠದ ವಿಚಾರಣೆ ಅಗತ್ಯವಿದೆ ಎಂದು ನ್ಯಾಯಮೂರ್ತಿ ದೀಕ್ಷಿತ್ ಹೇಳಿದರು.

ಈ ವಿಷಯವನ್ನು ಸೂಕ್ತ ಪೀಠಕ್ಕೆ ವಹಿಸುವ ಬಗ್ಗೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ನಿರ್ಧಾರ ತೆಗೆದುಕೊಳ್ಳಬೇಕು ಎಂದು ನ್ಯಾಯಮೂರ್ತಿ ದೀಕ್ಷಿತ್ ಹೇಳಿದ್ದಾರೆ.

ಅನುಮತಿ ವಾಪಸ್ ಪಡೆದಿದ್ದನ್ನು ಪ್ರಶ್ನಿಸಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸೇರಿದಂತೆ, ಇಬ್ಬರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

ಆದಾಯ ತೆರಿಗೆ ಇಲಾಖೆ ಹಾಗೂ ಜಾರಿ ನಿರ್ದೇಶನಾಲಯಗಳು ಡಿ.ಕೆ. ಶಿವಕುಮಾರ್ ವಿರುದ್ಧ ತನಿಖೆ ನಡೆಸಿದ್ದವು. ಇದರ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳಲು 2019ರಲ್ಲಿ ಆಗಿನ ಬಿಜೆಪಿ ಸರ್ಕಾರದಿಂದ ಸಿ.ಬಿ.ಐ. ಅನುಮತಿ ಪಡೆದುಕೊಂಡಿತ್ತು.

ಕಳೆದ ಮೇ ತಿಂಗಳಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿತ್ತು. ನಂತರ ಸಿ.ಬಿ.ಐ. ತನಿಖೆಗೆ ನೀಡಲಾಗಿದ್ದ ಅನುಮತಿಯನ್ನು ವಾಪಸ್ ಪಡೆಯಲಾಗಿತ್ತು. ನಂತರ ಯತ್ನಾಳ್ ಹಾಗೂ ಸಿ.ಬಿ.ಐ. ಈ ನಿರ್ಧಾರವನ್ನು ಪ್ರಶ್ನಿಸಿ ಹೈಕೋರ್ಟ್ ಮೊರೆ ಹೋಗಿದ್ದರು.

## 20, 21ನೇ ವಾರ್ಡ್‌ನಲ್ಲಿ ಕಾಮಗಾರಿಗಳಿಗೆ ಚಾಲನೆ



ದಾವಣಗೆರೆ, ಜ.5- ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 20 ಮತ್ತು 21ನೇ ವಾರ್ಡ್‌ನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಚಾಲನೆ ನೀಡಿದರು.

ನಂತರ ಮಾತನಾಡಿದ ಶಾಸಕರು, ಮಹಾನಗರ ಪಾಲಿಕೆಯಿಂದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ವಾರ್ಡ್‌ಗಳಿಗೆ ಅನುದಾನ ನೀಡಲಾಗಿದ್ದು, ಶೀಘ್ರದಲ್ಲೇ ಸರ್ಕಾರದಿಂದ ಅನುದಾನ ತಂದು ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.

ಮಹಾಪೌರರಾದ ವಿನಾಯಕ್ ಪೈಲ್ವಾನ್ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮಗಳಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷರಾದ ಮೀನಾಕ್ಷಿ ಜಗದೀಶ್, ಸದಸ್ಯರುಗಳಾದ ಶ್ರೀಮತಿ ಶಿವಲೀಲಾ ಕೊಟ್ರಯ್ಯ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಮುಖಂಡರುಗಳಾದ ಸುರೇಂದ್ರಪ್ಪ, ಮಹೇಶ್ವರಪ್ಪ, ಶಿವಪ್ಪ ಗುರುಸಿದ್ದಪ್ಪ, ರೇವಣಸಿದ್ದಯ್ಯ, ಬಕ್ಕಯ್ಯ, ವೆಂಕಟೇಶ್ ನಾಯ್ಕ, ಹರೀಶ್ ಕೆ.ಎಲ್.ಬಸಾಪುರ, ಆನೆಕೊಂಡ ನಾಗರಾಜ್, ತಿಪ್ಪೇಸ್ವಾಮಿ, ಲಿಂಗರಾಜ್, ಜಿ.ತಿಪ್ಪೇಸ್ವಾಮಿ, ಕೆ.ಬಿ.ಲಿಂಗರಾಜು, ನಾಗರಾಜ್, ಪ್ರತಾಪ್, ರುದ್ರಪ್ಪ, ಶಿವಕುಮಾರ್ ಟಿ. ಮತ್ತಿತರರಿದ್ದರು.

## ನಗರದಲ್ಲಿ ನಾಳೆ ಶ್ರೀಕ್ಷೇತ್ರ ಶಿಬಾರ ಮೈಲಾರಲಿಂಗೇಶ್ವರ ಸ್ವಾಮಿ ಕಡೇ ಕಾರ್ತಿಕ



ದಾವಣಗೆರೆ, ಜ. 5- ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀ ಕ್ಷೇತ್ರ ಶಿಬಾರ ಮೈಲಾರಲಿಂಗೇಶ್ವರ ದೇವಸ್ಥಾನದಲ್ಲಿ ಶ್ರೀ ಮೈಲಾರ ಲಿಂಗೇಶ್ವರ ಸ್ವಾಮಿ ಕಡೇ ಕಾರ್ತಿಕೋತ್ಸವ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 7ರ ಭಾನುವಾರ ಸಂಜೆ 7.30ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನ ಟ್ರಸ್ಟ್ ಕಾರ್ಯದರ್ಶಿ ಗೋಪಾಲರಾವ್ ಸಾವಂತ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಸಂಜೀವಿನಿ ಆಂಜನೇಯ ಸ್ವಾಮಿ ಕಾರ್ತಿಕೋತ್ಸವ

ಬೂದಾಳ್ ರಸ್ತೆಯಲ್ಲಿರುವ ಶ್ರೀ ಸಂಜೀವಿನಿ ಆಂಜನೇಯ ಸ್ವಾಮಿ ಕಾರ್ತಿಕೋತ್ಸವವು ಇಂದು ಸಂಜೆ 9 ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ಅಧ್ಯಕ್ಷ ಕುರುಬರ ಅಜ್ಜಣ್ಣ, ದಿಬ್ಬಳ್ಳಿ ರಾಜು, ಗೌರವಾಧ್ಯಕ್ಷ ಡಿ.ಆರ್. ಮಂಜುನಾಥ್, ಉಪಾಧ್ಯಕ್ಷ ಮಹಾಂತೇಶ್ (ಮಂಡಕ್ಕಿ) ತಿಳಿಸಿದ್ದಾರೆ.

## ಬುದ್ಧ, ಬಸವಣ್ಣ, ಅಂಬೇಡ್ಕರ್ ದೈವಾಂಶ ಸಂಭೂತರು : ಹೈಕೋರ್ಟ್

ಬೆಂಗಳೂರು, ಜ. 5 – ಬುದ್ಧ, ಬಸವಣ್ಣ ಹಾಗೂ ಅಂಬೇಡ್ಕರ್ ಅಂಥವರನ್ನು ದೈವಾಂಶ ಸಂಭೂತರು ಎಂದು ಪರಿಗಣಿಸಬಹುದು. ಅವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸುವುದು ಸಂವಿಧಾನದ ಉಲ್ಲಂಘನೆಯಲ್ಲ ಎಂದು ಹೈಕೋರ್ಟ್ ತಿಳಿಸಿದೆ.

ಶಾಸಕರು ಸಂವಿಧಾನದಲ್ಲಿ ಸೂಚಿಸಲಾದ ಪದ್ಧತಿಯ ಬದಲು ಬೇರೆಯವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ ಎಂದು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ಈ ಬಗ್ಗೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರನ್ನು ಒಳಗೊಂಡ ವಿಭಾಗೀಯ ಪೀಠ ವಿಚಾರಣೆ ನಡೆಸಿತ್ತು.

ಕನ್ನಡದಲ್ಲಿ 'ದೇವನೊಬ್ಬ ನಾಮ ಹಲವು' ಎಂಬ ಮಾತಿದೆ. ಬೃಹದಾರಣ್ಯಕ ಉಪನಿಷದ್‌ನಲ್ಲಿ 'ಏಕಂ ಸತ್ ವಿಪ್ರ ಬಹುದಾ ವದಂತಿ' ಎಂಬ ಮಾತಿದೆ. ಸತ್ಯ ಒಂದೇ ಆದರೆ, ಜ್ಞಾನಿಗಳು ಹಲವಾರು ಹೆಸರುಗಳಿಂದ ಕರೆಯುತ್ತಾರೆ ಎಂಬುದು ಈ ಸಂಸ್ಕೃತ ಮಾತಿನ ಅರ್ಥ. ಅಲ್ಲದೇ, ದೇವರ ಹೆಸರು ಹೇಳದೆಯೇ ಪ್ರಮಾಣ ವಚನ ಸ್ವೀಕರಿಸುವುದಕ್ಕೂ ಅವಕಾಶ ಇದೆ ಎಂದು ನ್ಯಾಯಾಲಯ ಹೇಳಿದೆ. 2023ರಲ್ಲಿ ಶಾಸಕರು ಪ್ರಮಾಣ ವಚನ ಸ್ವೀಕರಿಸುವಾಗ ಸಂವಿಧಾನದ ಮೂರನೇ ಪರಿಚ್ಛೇದ ಉಲ್ಲಂಘಿಸಿದ್ದಾರೆ. ಅವರನ್ನು ಅನರ್ಹಗೊಳಿಸಬೇಕು ಎಂದು ಬೆಳಗಾವಿಯ ಭೀಮಪ್ಪ ಗುಂಡಪ್ಪ ಗಡದ್ ಅವರು ಅರ್ಜಿ ದಾಖಲಿಸಿದ್ದರು.

## ಅಹವಾಲು ಇತ್ಯರ್ಥಕ್ಕೆ ಕೃತಕ ಬುದ್ಧಿವಂತಿಕೆ ಬಳಸಲು ಚರ್ಚೆ

ನವದೆಹಲಿ, ಜ. 5 – ಸಾರ್ವಜನಿಕ ದೂರುಗಳನ್ನು ಇತ್ಯರ್ಥಪಡಿಸಲು ಕೃತಕ ಬುದ್ಧಿವಂತಿಕೆ ಬಳಸುವ ಬಗ್ಗೆ ಸರ್ಕಾರದ ಹಿರಿಯ ಅಧಿಕಾರಿಗಳು ಹಾಗೂ ಕೈಗಾರಿಕಾ ಪರಿಣಿತರು ಚರ್ಚೆ ನಡೆಸಿದ್ದಾರೆ.

ಇ – ಆಡಳಿತ, ಇ – ವಾಣಿಜ್ಯ ಕ್ರಮಗಳು ಹಾಗೂ ಪ್ರವರ್ಧಮಾನಕ್ಕೆ ಬರುತ್ತಿರುವ ತಂತ್ರಜ್ಞಾನದ ಕುರಿತು ಕೇಂದ್ರ ಸರ್ಕಾರದ ಆಡಳಿತ ಹಾಗೂ ಸಾರ್ವಜನಿಕರ ಅಹವಾಲುಗಳ ಇಲಾಖೆ ಸಭೆಯೊಂದನ್ನು ಕರೆದಿತ್ತು.

ಹದಿನೈದು ಪರಿಣಿತರು, ಡೆಲೊಯ್ಟೆ, ಪಿಡಬ್ಲ್ಯೂಸಿ, ಪ್ರೈಮಸ್ ಪಾರ್ಟ್ನರ್ಸ್, ಕೆ.ಪಿ.ಎಂ.ಜಿ., ಕ್ಯೂ.ಸಿ.ಐ. ಹಾಗೂ ಇ.ವೈ. ಸಂಸ್ಥೆಗಳ ಪ್ರತಿನಿಧಿಗಳು ಈ ಸಭೆಯಲ್ಲಿ ಪಾಲ್ಗೊಂಡಿದ್ದರು.

## ಪೃಥ್ವಿ ಯೋಜನೆಗೆ ಕೇಂದ್ರದ ಒಪ್ಪಿಗೆ

ನವದೆಹಲಿ, ಜ. 5 – ಭೂ ವಿಜ್ಞಾನ ತನಿಖೆಯನ್ನು ಸುಗಮಗೊಳಿಸುವ ಪೃಥ್ವಿ ವಿಜ್ಞಾನ್ ಯೋಜನೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ. ಭೂ ವಿಜ್ಞಾನಕ್ಕೆ ಸಂಬಂಧಿಸಿದ 5 ಉಪ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡುವುದನ್ನು ಸರಳಗೊಳಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ.

## ಕಕ್ಕರಗೊಳ್ಳ: ನಾಳೆ ಕೆರೆ ಏರಿ ಭರಮ ದೇವರ ದೀಪೋತ್ಸವ

ದಾವಣಗೆರೆ, ಜ. 5- ತಾಲ್ಲೂಕಿನ ಕಕ್ಕರಗೊಳ್ಳ ಗ್ರಾಮದ ಕೆರೆ ಏರಿ ಶ್ರೀ ಭರಮ ದೇವರ ದೇವಸ್ಥಾನ ಸಮಿತಿ ವತಿಯಿಂದ ನಾಡಿದ್ದು ದಿನಾಂಕ 7 ರಂದು ಕಾರ್ತಿಕ ಮಾಸದ ವಿಶೇಷ ಪೂಜೆ, ಅಭಿಷೇಕ, ದೀಪೋತ್ಸವ ಕಾರ್ಯಕ್ರಮ ನಡೆಯಲಿದೆ. ಅಂದು ಬೆಳಿಗ್ಗೆ 6 ಗಂಟೆಗೆ ಮಹಾ ಅಭಿಷೇಕ, ಬೆಳಿಗ್ಗೆ 11 ರಿಂದ 4 ರವರೆಗೆ ಪ್ರಸಾದ ವಿತರಣೆ, ಸಂಜೆ 7 ಗಂಟೆಗೆ ದೀಪೋತ್ಸವ ಕಾರ್ಯಕ್ರಮ ಜರುಗಲಿದೆ.

# ಸ್ವ ಉದ್ಯೋಗ ಪ್ರಾರಂಭದಿಂದ ಆರ್ಥಿಕ ಸಬಲರಾಗಿ

### ಕಡ್ಲೆಬಾಳ್ : ನಮ್ಮ ಸಂಕಲ್ಪ ವಿಕಸಿತ ಭಾರತ ಕಾರ್ಯಕ್ರಮದಲ್ಲಿ ಧನಂಜಯ ಕಡ್ಲೆಬಾಳ್



ದಾವಣಗೆರೆ, ಜ. 5- ಗ್ರಾಮೀಣ ಪ್ರದೇಶದ ಯುವಕರು ಸ್ವಯಂ ಉದ್ಯೋಗ ಕೈಗೊಳ್ಳಲು ಸಹಕಾರಿ ಯಾಗುವಂತೆ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಜಾರಿ ಮಾಡಿದೆ. ಯುವಕರು ಜಾಗೃತರಾಗಿ ಸ್ವಯಂ ಉದ್ಯೋಗ ಪ್ರಾರಂಭಿಸು ವುದರ ಮೂಲಕ ಆರ್ಥಿಕವಾಗಿ ಸಬಲರಾಗಬೇಕು ಎಂದು ಬಿಜೆಪಿ ಮುಖಂಡ ಧನಂಜಯ ಕಡ್ಲೇಬಾಳ್ ಕರೆ ನೀಡಿದರು.

ಕಡ್ಲೆಬಾಳ್ ಗ್ರಾಮದಲ್ಲಿ ನಮ್ಮ ಸಂಕಲ್ಪ ವಿಕಸಿತ ಭಾರತ ಕಾರ್ಯಕ್ರಮದಲ್ಲಿ 2024ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿ ಅವರು ಮಾತನಾಡಿದರು.

ರೈತರು ಕೇಂದ್ರ ಸರ್ಕಾರದಿಂದ ವಿವಿಧ ಯೋಜನೆಗಳ ಪ್ರಯೋಜನ ಪಡೆದು ಅಧಿಕ ಇಳುವರಿ ಪಡೆಯುವುದರ ಜೊತೆಗೆ ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕೆಂದು ಮತ್ತು ವಿಷ ಮುಕ್ತ ಆಹಾರ ಉತ್ಪಾದನೆಗಾಗಿ ಸಾವಯವ ಕೃಷಿ ಹಾಗೂ ನೈಸರ್ಗಿಕ ಕೃಷಿ ಪದ್ಧತಿಗಳನ್ನು ಪಾಲಿಸಬೇಕು. ಇದಕ್ಕಾಗಿ ಕೇಂದ್ರ ಸರ್ಕಾರದಿಂದ ಹಲವು ಯೋಜನೆಗಳಿದ್ದು ಇದರ ಪ್ರಯೋಜನವನ್ನು ಪಡೆಯಬಹುದಾಗಿದೆ. ನೈಸರ್ಗಿಕ ಕೃಷಿಯ ಪ್ರಾತ್ಯಕ್ಷಿಕೆಗಳನ್ನು ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ರೈತರು ವೀಕ್ಷಿಸಬಹುದಾಗಿದೆ. ಮಣ್ಣು ಪರೀಕ್ಷೆ ಅತ್ಯಂತ ಅವಶ್ಯವಾಗಿದ್ದು ಎಲ್ಲಾ ರೈತರು ಮಣ್ಣು ಪರೀಕ್ಷೆ ಮಾಡಿಸಿ ಶಿಫಾರಸ್ಸು ಮಾಡಿದ ಗೊಬ್ಬರಗಳನ್ನು ಬಳಸಬೇಕು. ಇದರಿಂದ ಹೆಚ್ಚಿನ ಗೊಬ್ಬರ ಉಪಯೋಗಿಸಿ ನಷ್ಟ ಅನುಭವಿಸುವುದನ್ನು ತಪ್ಪದೇ ಹಾಗೂ ಪರಿಸರ ಸಂರಕ್ಷಣೆಯನ್ನು ಮಾಡಬಹುದಾಗಿದೆ ಎಂದರು.

ಈ ಸಂದರ್ಭದಲ್ಲಿ ರೈತ ಮುಖಂಡ ಕೋಳೇನಹಳ್ಳಿ ಬಿ ಎಂ ಸತೀಶ್, ಕಡ್ಲೇಬಾಳ್ ಗ್ರಾಮ ಪಂಚಾಯಿತಿ ಅಧ್ಯಕ್ಷ ಪರಮೇಶ್ವರಪ್ಪ, ಸದಸ್ಯರಾದ ಎ.ಕೆ. ರಾಮಪ್ಪ, ಎ.ಕೆ. ಪರಮೇಶ್ವರಪ್ಪ, ಭೀಮನಾಯ್ಕ ಓಬಜ್ಜಿಹಳ್ಳಿ, ಕೆನರಾ ಬ್ಯಾಂಕ್ ವ್ಯವಸ್ಥಾಪಕರಾದ ಅಕ್ಕಮಹಾದೇವಿ, ವೈದ್ಯಾಧಿಕಾರಿ ಕಿಶೋರಿ ಮುಂತಾದವರು ಉಪಸ್ಥಿತರಿದ್ದರು.

ಬೇಕಾಗಿದ್ದಾರೆ
ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ
ಶಾಂತಲಾ
ದಿ ವೆಡ್ಡಿಂಗ್ ಮಾಲ್....
ಚಾಮರಾಜ ಪೇಟೆ, ದಾವಣಗೆರೆ.
9686195327

UDAYSHIVAKUMAR INFRA LTD.
Banashankari Badavane, Behind Swamy Vivekanand School, Near NH-4 Bypass, Davangere
APPOINTMENTS
1) Accounts Officer: B.Com/M.com with more than 5 years' experience in company accounting, knowledge of Tally ERP9 prime, TDS & GST– CA Inter is preferable.
2) Accountant: B.Com with minimum 3 years' experience in accounting, knowledge of Tally ERP9 prime, TDS & GST.
Please send your resume to email:
udayshivakumar.infra@gmail.com
Mob: 9071999952, 9008047207

ಪ್ರಥಮ ವರ್ಷದ ಪುಣ್ಯಸ್ಮರಣೆ



ದಾವಣಗೆರೆ ಸಿಟಿ ಕಾಯಿಪೇಟೆ ವಾಸಿ
ಶ್ರೀ ಸೋಗಿ ವೀರಣ್ಣ ಗೌಡರು ಮಾಡುವ ವಿಜ್ಞಾಪನೆಗಳು.
ನನ್ನ ಧರ್ಮಪತ್ನಿಯಾದ
ಶ್ರೀಮತಿ ಸೋಗಿ ಗಂಗಮ್ಮ
ಅವರ
ಪ್ರಥಮ ವರ್ಷದ ಪುಣ್ಯಸ್ಮರಣೆಯನ್ನು
ದಿನಾಂಕ 07.01.2024ನೇ ಭಾನುವಾರ ಮಧ್ಯಾಹ್ನ 12 ಗಂಟೆಗೆ.
ಸ್ಥಳ : ನಾಮದೇವ ಸಿಂಪಿ ಕಲ್ಯಾಣ ಮಂಟಪ ದೊಡ್ಡಪೇಟೆ, ದಾವಣಗೆರೆ.
ಶ್ರೀ ಸೋಗಿ ವೀರಣ್ಣ ಗೌಡರು ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಸೋಗಿ ವಂಶಸ್ಥರು ಹಾಗೂ ಬಂಧು-ಮಿತ್ರರು.
ಮೊ : 9900129198, 9945588567
095353 93111